ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	₹/$
85,571	26,178	83.63

ಮುಡಾ ಹಗರಣ: ಮುಖ್ಯಮಂತ್ರಿ ಪತ್ನಿ ಪಾರ್ವತಿ ವಿರುದ್ಧವೂ ಲೋಕಾಯುಕ್ತದಿಂದ ಪ್ರಕರಣ


ಸಿ.ಎಂ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಕ್ರಮವಾಗಿ ನಿವೇಶನಗಳನ್ನು ಪಡೆದ ಆರೋಪದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರ ವಿರುದ್ಧ ಇಲ್ಲಿನ ಲೋಕಾಯುಕ್ತ ಪೊಲೀಸರು ಶುಕ್ರವಾರ ಎಫ್ಐಆರ್ ದಾಖಲಿಸಿದ್ದಾರೆ.

ಸಿದ್ದರಾಮಯ್ಯ ಮೊದಲ ಆರೋಪಿಯಾಗಿದ್ದು, ಅವರ ಪತ್ನಿ ಬಿ.ಎಂ. ಪಾರ್ವತಿ ಎರಡನೇ ಆರೋಪಿ, ಭಾಮೈದ ಮಲ್ಲಿಕಾರ್ಜುನಸ್ವಾಮಿ ಮೂರನೇ ಹಾಗೂ ಜಮೀನಿನ ಮಾಲೀಕ ದೇವರಾಜು ನಾಲ್ಕನೇ ಆರೋಪಿಯಾಗಿದ್ದಾರೆ.

ಸಿಆರ್‌ಪಿಸಿ ಸೆಕ್ಷನ್ 154 ಅಡಿ ಎಫ್ಐಆರ್ ದಾಖಲಾಗಿದೆ. ಭಾರತೀಯ ದಂಡಸಂಹಿತೆ ಕಾಯ್ದೆಯ ಕಲಂ 120ಬಿ, 166, 403, 406, 420, 426, 465, 486, 340, 351 ಹಾಗೂ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಕಲಂ 9, 13, ಬೇನಾಮಿ ಆಸ್ತಿ ವಹಿವಾಟು ತಡೆ ಕಾಯ್ದೆ 1988ರ ಕಲಂ 3, 53, 54 ಹಾಗೂ ಕರ್ನಾಟಕ ಭೂ ಕಬಳಿಕೆ ಕಾಯ್ದೆ 2011ರ ಕಲಂ 3,4 ಅಡಿ ಪೊಲೀಸರು ತನಿಖೆ ನಡೆಸಲಿದ್ದಾರೆ.



‘ಸಿದ್ದರಾಮಯ್ಯ ಕುಟುಂಬವು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಮುಡಾದಿಂದ ಅಕ್ರಮವಾಗಿ ನಿವೇಶನಗಳನ್ನು ಪಡೆದಿದ್ದು, ಈ ಬಗ್ಗೆ ತನಿಖೆಗೆ ಆದೇಶಿಸಬೇಕು’ ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ವಿಚಾರಣೆ ನಡೆಸಿದ್ದ ಕೋರ್ಟ್, ಸಿದ್ದರಾಮಯ್ಯ ವಿರುದ್ಧ ಎಫ್ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸರಿಗೆ ಬುಧವಾರ ಸೂಚಿಸಿತ್ತು.

6ನೇ ಪುಟ ನೋಡಿ

ಸಿದ್ದರಾಮಯ್ಯ ಬೆಂಬಲಕ್ಕೆ ಹೈಕಮಾಂಡ್: ಖರ್ಗೆ



ಬೆಂಗಳೂರು: ‘ಮುಡಾ ಹಗರಣ ಸಣ್ಣ ಪ್ರಕರಣ. ಆದರೆ, ಈ ಬಗ್ಗೆ ಪ್ರತಿನಿತ್ಯ ಚರ್ಚಿಸಲಾಗುತ್ತಿದೆ. ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸುತ್ತಾರೆ. ಅವರ ಬೆಂಬಲಕ್ಕೆ ನಾನೂ ಸೇರಿದಂತೆ ಹೈಕಮಾಂಡ್ ನಿಂತಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಎಫ್ಐಆರ್ ಆದ ಕೂಡಲೇ ಅವರು (ಸಿದ್ದರಾಮಯ್ಯ) ರಾಜೀನಾಮೆ ನೀಡಬೇಕು ಎನ್ನುವುದಾದರೆ, ಗೋಧ್ರಾ ನಂತರದ ಹತ್ಯಾಕಾಂಡದ ನೈತಿಕ ಹೊಣೆ ಹೊತ್ತು ಅಂದು ನರೇಂದ್ರ ಮೋದಿ ರಾಜೀನಾಮೆ ನೀಡಿದ್ದರಾ? ಅಮಿತ್ ಶಾ ಅವರ ಮೇಲೆ ಎಷ್ಟು ಪ್ರಕರಣ ದಾಖಲಾಗಿದ್ದವು’ ಎಂದು ಪ್ರಶ್ನಿಸಿದರು.

‘ಯಾರನ್ನೇ ಆಗಲಿ ವೈಯಕ್ತಿಕವಾಗಿ ಗುರಿ ಮಾಡಬಾರದು. ಸಿದ್ದರಾಮಯ್ಯ ವರ್ಚಸ್ಸಿಗೆ ಕಳಂಕ ಹಚ್ಚುವ ಮೂಲಕ ಕಾಂಗ್ರೆಸ್ ಪಕ್ಷಕ್ಕೂ ಹಾನಿ ಮಾಡುವುದು ಬಿಜೆಪಿ ಉದ್ದೇಶ’ ಎಂದು ಹೇಳಿದರು.

6ನೇ ಪುಟ ನೋಡಿ

ಸಿಬಿಐ ತನಿಖೆಗೆ ಕೋರಿ ರಿಟ್

ಬೆಂಗಳೂರು: ‘ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಮೈಸೂರಿನ ಸ್ನೇಹಮಯಿ ಕೃಷ್ಣ ಶುಕ್ರವಾರ ದಾಖಲಿಸಿರುವ ಈ ರಿಟ್ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ. ಅರ್ಜಿಯಲ್ಲಿ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಸಿಬಿಐ ನಿರ್ದೇಶಕ, ಮೈಸೂರು ಜಿಲ್ಲಾ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ, ರಾಜ್ಯ ಡಿಜಿ–ಐಜಿಪಿ, ಲೋಕಾಯುಕ್ತ ಎಡಿಜಿಪಿ, ವಿಜಯನಗರ ಪೊಲೀಸ್ ಠಾಣಾಧಿಕಾರಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿ.ಎಂ.ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ ಮತ್ತು ಜೆ.ದೇವರಾಜು ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಎಚ್‌ಡಿಕೆ ವಿಚಾರಣೆ ನಡೆಸಿದ ‘ಲೋಕಾ’

ಗಂಗೇನಹಳ್ಳಿಯ 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ಪ್ರಕರಣ



ಲೋಕಾಯುಕ್ತ ಕಚೇರಿಯಿಂದ ಹೊರಬಂದ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಗಂಗೇನಹಳ್ಳಿಯ (ಈಗಿನ ಗಂಗಾನಗರ) 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಶುಕ್ರವಾರ ವಿಚಾರಣೆಗೆ ಒಳಪಡಿಸಿದರು.

ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತ ಪೊಲೀಸರು ಕುಮಾರಸ್ವಾಮಿಗೆ ಸಮನ್ಸ್ ನೀಡಿದ್ದರು. ಶುಕ್ರವಾರ ಸಂಜೆ 5.40ಕ್ಕೆ ತನಿಖಾಧಿಕಾರಿ ಬಸವರಾಜ ಮಗ್ದುಂ ಎದುರು ವಿಚಾರಣೆಗೆ ಹಾಜರಾದರು. ‘ಕುಮಾರಸ್ವಾಮಿ ಅವರನ್ನು ಒಂದೂ ಮುಕ್ಕಾಲು ತಾಸು ವಿಚಾರಣೆಗೆ ಒಳಪಡಿಸಲಾಯಿತು. ‘ಕೆಲವು ಪ್ರಶ್ನೆಗಳಿಗೆ ಉತ್ತರಿಸಿದರು. ಕೆಲವು ಪ್ರಶ್ನೆಗಳಿಗೆ, ‘ನನಗೇನೂ ಗೊತ್ತಿಲ್ಲ’ ಎಂದರು’ ಎಂದು ಮೂಲಗಳು ತಿಳಿಸಿವೆ.

> **ಸ್ವಯಂಪ್ರೇರಿತವಾಗಿ ನಾನು ಇಲ್ಲಿಗೆ ಬಂದಿದ್ದೆ. ಲೋಕಾಯುಕ್ತ ಪೊಲೀಸರು ಕೇಳಿದ್ದಕ್ಕೆ ಉತ್ತರಿಸಿದ್ದೇನೆ. ನಾನು ತಪ್ಪೇ ಮಾಡಿಲ್ಲ, ರಾಜೀನಾಮೆ ನೀಡುವುದಿಲ್ಲ**
> **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

2006–07ರಲ್ಲಿ ತಾವು ಮುಖ್ಯಮಂತ್ರಿಯಾಗಿದ್ದಾಗ ಡಿನೋಟಿಫೈಗೆ ಯತ್ನಿಸಿದ ಆರೋಪ ಕುಮಾರಸ್ವಾಮಿ ಮೇಲಿದೆ. ಇದೇ ಜಮೀನನ್ನು, ಆ ಬಳಿಕ ಬಿ.ಎಸ್.ಯಡಿಯೂರಪ್ಪ ಡಿನೋಟಿಫೈ ಮಾಡಿದ್ದರು. ಈ ಜಮೀನನ್ನು ಕುಮಾರಸ್ವಾಮಿ ಅವರ ಅತ್ತೆ (ಅನಿತಾ ಅವರ ತಾಯಿ) ಮತ್ತು ಬಾಮೈದ ಖರೀದಿಸಿದ ಆರೋಪದಡಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಚೆಗಷ್ಟೇ ಯಡಿಯೂರಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು.

ಅಪೌಷ್ಟಿಕತೆ ನಿವಾರಣೆಗೆ 'ಪೋಷಣ್' ಮಾಸಾಚರಣೆ

ಕೆ.ಆರ್.ಪುರ: 'ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು, ಗರ್ಭಿಣಿಯರು, ಬಾಣಂತಿಯರು, ಕಿಶೋರಿಯರಿಗಾಗಿ 'ಪೋಷಣ್' ಮಾಸ ಆಚರಿಸಲಾಗುತ್ತದೆ' ಎಂದು ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಜಿ.ಎನ್.ಶಶಿಧರ್ ತಿಳಿಸಿದರು.

ಕೆ.ಆರ್.ಪುರ ಸಮೀಪದ ಯಮಲೂರಿನ ಅಂಗನವಾಡಿ ಕೇಂದ್ರದಲ್ಲಿ ಏರ್ಪಡಿಸಿದ್ದ ಪೋಷಣ್ ಮಾಸಾಚರಣೆಗೆ ಚಾಲನೆ ನೀಡಿ ಮಾತನಾಡಿದರು.

ವೃತ್ತ ಮೇಲ್ವಿಚಾರಕಿ ಕೆ.ಎಲ್.ಅನಿತಾ ಲಕ್ಷ್ಮಿ ಮಾತನಾಡಿ, 'ಕಿಶೋರಿಯರು, ಗರ್ಭಿಣಿಯರು, ಮಕ್ಕಳನ್ನು ಅಪೌಷ್ಟಿಕತೆಯಿಂದ ಮುಕ್ತಗೊಳಿಸುವುದು ಪೋಷಣ್ ಗುರಿ' ಎಂದರು. ಯಮಲೂರು ಸರ್ಕಾರಿ ಶಾಲೆಯ ಮುಖ್ಯಶಿಕ್ಷಕ ಪ್ರಸನ್ನ ಮೂರ್ತಿ, ಮಕ್ಕಳ ಜಾಗೃತಿ ಸಂಸ್ಥೆಯ ನವೀನ್, ರಶ್ಮಿ ಮತ್ತು ಶಿಬಿರಾರ್ಥಿಗಳು, ಪೋಷಣ್ ಸಂಯೋಜಕರಾದ ಸುರೇಶ್, ಪರಿಸರವಾದಿ ಮಂಜುನಾಥ್ ಇದ್ದರು.

'ಸರ್ಫೇಸ್ ಎಕ್ಸ್‌ಪೋ'ಗೆ ಚಾಲನೆ

ಬೆಂಗಳೂರು: ನಗರದ ಲಘು ಉದ್ಯೋಗ ಭಾರತಿ ಸ್ವಯಂ ಸೇವಾ ಸಂಸ್ಥೆ ಆಯೋಜಿಸಿರುವ ಸರ್ಫೇಸ್ ಎಕ್ಸ್‌ಪೋ–2024 ಕಾರ್ಯಕ್ರಮದ ಮೊದಲ ಆವೃತ್ತಿಯು ಅರಮನೆ ಮೈದಾನದ ಗ್ರ್ಯಾಂಡ್ ಕ್ಯಾಸಲ್‌ನಲ್ಲಿ ಗುರುವಾರ ಪ್ರಾರಂಭವಾಯಿತು.

ವರ್ನರ್ ಫಿನ್‌ಲೆ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೆ.ಜಿ. ವಿಪ್ಲವ್ ಮತ್ತು ಚೆರೊನ್ ಇಂಡಿಯನ್ ಮಷಿನ್ ಟೂಲ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಟಿ. ಘಾಶಿ ಕಾರ್ಯಕ್ರಮ ಉದ್ಘಾಟಿಸಿದರು. ಪ್ರದರ್ಶನವು ಶನಿವಾರದವರೆಗೆ ನಡೆಯಲಿದೆ.

ಈಗಿನ ಪ್ರದರ್ಶನವು ಅತ್ಯಾಧುನಿಕ ತಂತ್ರಜ್ಞಾನಗಳ ಮೇಲೆ ಕೇಂದ್ರೀಕರಿಸಿದೆ. ರಕ್ಷಣಾ, ವಿಮಾನಯಾನ ಮತ್ತು ಸಾರ್ವಜನಿಕ ವಲಯದ ವಿಭಾಗಗಳ ಪ್ರಮುಖ ಪಾಲುದಾರರನ್ನು ಆಕರ್ಷಿಸುತ್ತಿದೆ. ಲಘು ಉದ್ಯೋಗ ಭಾರತಿ ಬೆಂಗಳೂರು ಉತ್ತರ ವಿಭಾಗದ ಅಧ್ಯಕ್ಷ ಸಂಜಯ್ ಪಿ. ಭಟ್ ಹಾಜರಿದ್ದರು.

'ಪದವೀಧರರೇ ಹೆಚ್ಚು ನಿರುದ್ಯೋಗಿಗಳು'

ಉದ್ಯೋಗಕ್ಕಾಗಿ ಕೌಶಲ ಹೆಚ್ಚು ಅಗತ್ಯ: ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಸಲಹೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪದವೀಧರರಲ್ಲಿ ಶೇ 29.1ರಷ್ಟು ನಿರುದ್ಯೋಗಿಗಳು
- ಉದ್ಯಮ ಬಯಸುವ ಕೌಶಲ ರೂಢಿಸಿಕೊಳ್ಳಬೇಕು
- ಪದವಿ ಹಂತದಲ್ಲಿಯೇ ಕೌಶಲಕ್ಕೂ ಒತ್ತು ನೀಡಿ

ಬೆಂಗಳೂರು: 'ಕೌಶಲ ಹೊಂದದ ಕಾರಣ ಹಲವು ಪದವೀಧರರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಹೀಗಾಗಿ ಶಿಕ್ಷಣ ಪಡೆಯದವರಿಗಿಂತ ಪದವೀಧರರೇ ಹೆಚ್ಚು ನಿರುದ್ಯೋಗಿಗಳಾಗಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಮೊದಲ ಘಟಿಕೋತ್ಸವ ಸಮಾರಂಭದಲ್ಲಿ ಅವರು ಪದವಿ ಪ್ರಮಾಣಪತ್ರಗಳನ್ನು ವಿತರಿಸಿ ಮಾತನಾಡಿದರು.

'ಅಂಕಿ-ಅಂಶಗಳ ಪ್ರಕಾರ ಪದವೀಧರರಲ್ಲಿ ಶೇ 29.1ರಷ್ಟು ಮಂದಿಗೆ ಉದ್ಯೋಗ ಲಭ್ಯವಾಗಿಲ್ಲ. ಪ್ರಾಥಮಿಕ ಹಂತದ ಶಿಕ್ಷಣವನ್ನೂ ಪಡೆಯದವರಲ್ಲಿ ಶೇ 3.4ರಷ್ಟು ಮಾತ್ರ ನಿರುದ್ಯೋಗಿಗಳಾಗಿದ್ದಾರೆ' ಎಂದು ಸಚಿವರು ಮಾಹಿತಿ ನೀಡಿದರು. 'ವಿದ್ಯಾರ್ಥಿಗಳು ಪ್ರಸ್ತುತ ಅಭಿವೃದ್ಧಿಯಾಗುತ್ತಿರುವ ತಂತ್ರಜ್ಞಾನಗಳನ್ನು ಅರಿತು, ಉದ್ಯಮಗಳು ಬಯಸುತ್ತಿರುವ ಕೌಶಲಗಳನ್ನು ಹೊಂದಿರಬೇಕು. ಅಂತಹ ಕೌಶಲಗಳನ್ನು ಪದವಿ ಹಂತದ ಶಿಕ್ಷಣದಲ್ಲಿಯೇ ರಾಜ್ಯ ಸರ್ಕಾರ ಕಲಿಸುತ್ತಿದೆ' ಎಂದರು.

45 ಸರ್ಕಾರಿ ಕಾಲೇಜುಗಳಲ್ಲಿ ಬಿ.ಕಾಂ ಲಾಜಿಸ್ಟಿಕ್ಸ್, ಇ ಕಾಮರ್ಸ್, ಬ್ಯಾಂಕಿಂಗ್ ಆ್ಯಂಡ್ ಫೈನಾನ್ಸಿಂಗ್ ಸರ್ವಿಸಸ್, ವಿಮಾ ವಿಭಾಗಗಳಿರುವ ನಾಲ್ಕು ಪದವಿ ಕೋರ್ಸ್‌ಗಳನ್ನು ಈ ವರ್ಷದಿಂದ ಆರಂಭಿಸಲಾಗಿದೆ. ಸುಮಾರು 1,500 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ನಾಲ್ಕನೇ ಸೆಮಿಸ್ಟರ್ ಬಳಿಕ ನವೋದ್ಯಮ ಕಂಪನಿಗಳಲ್ಲಿ ಇಂಟರ್ನ್‌ಶಿಪ್‌ಗೆ ಕಳುಹಿಸಲಾಗುತ್ತದೆ. ಆ ಅವಧಿಯಲ್ಲಿ ಅವರಿಗೆ ₹8 ಸಾವಿರದಿಂದ ₹20 ಸಾವಿರದವರೆಗೆ ಶಿಷ್ಯವೇತನ ನೀಡಲಾಗುತ್ತದೆ ಎಂದು ವಿವರಿಸಿದರು.

'ವಿದ್ಯಾರ್ಥಿಗಳು ನಮ್ಮ ದೇಶದ ಪ್ರಗತಿಗೆ ನೆರವಾಗುವ ಸಂಶೋಧನಾ ಕಾರ್ಯಗಳನ್ನು ನಡೆಸಬೇಕು. ಪದವಿಗಳನ್ನು ಗಳಿಸುವ ಜೊತೆಗೆ ಉದ್ಯೋಗ ವಲಯಗಳು ಬಯಸುವ ಕೌಶಲಗಳನ್ನೂ ಹೊಂದ ಬೇಕು. ಅದಕ್ಕಾಗಿ ಹಲವು ಕೋರ್ಸ್‌ಗಳನ್ನು ಸರ್ಕಾರ ಸಿದ್ಧಪಡಿಸುತ್ತಿದೆ' ಎಂದರು. ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಯನೇಶಿಯಸ್ ವಾಜ್, ಕುಲಪತಿ ವಿಕ್ಟರ್ ಲೋಬೊ, ಕುಲಸಚಿವ ಮೆಲ್ವಿನ್ ಕೊಲಾಸೊ, ಪರೀಕ್ಷಾಂಗದ ನಿಯಂತ್ರಕ ಸಿ. ಮೋಹನ್ ದಾಸ್‌ಉಪಸ್ಥಿತರಿದ್ದರು.


ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳ ಸಂಭ್ರಮ ಪ್ರಜಾವಾಣಿ ಚಿತ್ರ

'ವಿದ್ಯುತ್ ಕ್ಷೇತ್ರದ ಖಾಸಗೀಕರಣ ಕೈಬಿಡದಿದ್ದರೆ ಚಳವಳಿ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಕ್ಷೇತ್ರದ ಖಾಸಗೀಕರಣ ಪ್ರಕ್ರಿಯೆಯನ್ನು ಕೈಬಿಡಬೇಕು. ಇಲ್ಲವಾದಲ್ಲಿ ಸರ್ಕಾರದ ನಡೆ ವಿರೋಧಿಸಿ ರಾಜ್ಯದಾದ್ಯಂತ ಚಳವಳಿ ನಡೆಸಲಾಗುವುದು' ಎಂದು ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಜೋಡಿಸಿ, ಖಾಸಗೀಕರಣ ಗೊಳಿಸುವ ಯತ್ನಿಸಿತ್ತು. ರೈತರ ಹೋರಾಟದಿಂದ ಯಶಸ್ಸು ದೊರೆಯಲಿಲ್ಲ' ಎಂದರು.

'ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳ ಜೊತೆಗೆ ವಿದ್ಯುತ್ ಕ್ಷೇತ್ರದ ಖಾಸಗೀಕರಣವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿತ್ತು. ರೈತರ ಪ್ರತಿರೋಧದಿಂದಾಗಿ ಕಾಯ್ದೆಗಳ ವಾಪಸ್ ಜೊತೆಗೆ ಖಾಸಗೀಕರಣವನ್ನು ಕೈಬಿಟ್ಟರು. ಈಗ ರಾಜ್ಯ ಸರ್ಕಾರ ಖಾಸಗೀಕರಣಕ್ಕೆ ಯತ್ನಿಸುತ್ತಿದೆ. ಇದರ ಭಾಗವಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ಜೋಡಣೆ, ಮೀಟರ್ ಅಳವಡಿಕೆಯಂತಹ ಕ್ರಮ ಕೈಗೊಂಡಿದೆ' ಎಂದರು.

'ಸೋಲಾರ್ ಆಧರಿತ ಪಂಪ್‌ಸೆಟ್ ಅಳವಡಿಸಿಕೊಳ್ಳಲು ಪ್ರಚೋದಿಸಲಾಗುತ್ತಿದೆ. ಇದೂ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಯ ಭಾಗ. ಸರ್ಕಾರವು ಇಂತಹ ರೈತ ವಿರೋಧಿ ಕ್ರಮಗಳನ್ನು ಕೈಬಿಡಬೇಕು. ಇಲ್ಲವಾದಲ್ಲಿ ಮುಖ್ಯ ಲೈನ್‌ಗಳಿಂದಲೇ ವಿದ್ಯುತ್ ಸಂಪರ್ಕ ಪಡೆದು, ಕೃಷಿ ಉದ್ದೇಶಕ್ಕೆ ಬಳಸಲು ರೈತರಿಗೆ ಕರೆ ನೀಡಲಾಗುವುದು' ಎಂದು ಎಚ್ಚರಿಸಿದರು.

ಹಿರಿಯ ಪತ್ರಕರ್ತರ ವೇದಿಕೆಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ಪತ್ರಕರ್ತರ ವೇದಿಕೆಗೆ 2024–2029ನೇ ಸಾಲಿಗೆ ಕಾರ್ಯಾಧ್ಯಕ್ಷರಾಗಿ ಎಂ.ಎ.ಪೊನ್ನಪ್ಪ, ಅಧ್ಯಕ್ಷರಾಗಿ ಆರ್.ಪಿ. ಸಾಂಬಸದಾಶಿವ ರೆಡ್ಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಬಿ.ಸೋಮ ಸುಂದರ ರೆಡ್ಡಿ, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎಸ್.ರಾಜೇಂದ್ರಕುಮಾರ್, ಜಂಟಿ ಕಾರ್ಯದರ್ಶಿಯಾಗಿ ಎಸ್.ಆರ್. ವೆಂಕಟೇಶ್ ಪ್ರಸಾದ್, ಖಜಾಂಚಿಯಾಗಿ ನಾರಾಯಣ್ ಬಿ. ಅವರನ್ನು ಆಯ್ಕೆ ಮಾಡಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎಂ. ನಾಗರಾಜ, ಶಿವಾಜಿ ಗಣೇಶನ್, ಕೆ.ಎ. ರಾಮಕೃಷ್ಣಮೂರ್ತಿ, ಎಂ.ಕೆ. ಚಂದ್ರಬೋಸ್, ಆದಿನಾರಾಯಣಮೂರ್ತಿ ಆಯ್ಕೆಯಾಗಿದ್ದಾರೆ ಎಂದು ವೇದಿಕೆಯ ಪ್ರಕಟಣೆ ತಿಳಿಸಿದೆ.

ಬಿಟಿಎ ಅಧ್ಯಕ್ಷರಾಗಿ ಶ್ರೀಶ್ ಆರ್.ಬಾಬು

ಬೆಂಗಳೂರು: ಬೆಂಗಳೂರು ಟ್ರೇಡ್ಸ್ ಅಸೋಸಿಯೇಶನ್ (ಬಿಟಿಎ) ಅಧ್ಯಕ್ಷರಾಗಿ ಪ್ರಕೃತಿ ಆ್ಯಡ್ಸ್‌ನ ಶ್ರೀಶ್ ಆರ್. ಬಾಬು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಿಟಿಎ ನೂತನ ಪದಾಧಿಕಾರಿಗಳ ಆಯ್ಕೆ ಇತ್ತೀಚೆಗೆ ವಾರ್ಷಿಕ ಮಹಾಸಭೆಯಲ್ಲಿ ನಡೆಯಿತು.


ಶ್ರೀಶ್ ಆರ್. ಬಾಬು



ರಾಜೇಶ್ ಬಂಟಿಯಾ

ರಾಜಸ್ಥಾನ್ ಎಂಪೋರಿಯಂ ಆ್ಯಂಡ್ ಹ್ಯಾಂಡ್‌ಕ್ರಾಫ್ಟ್‌ನ ರಾಜೇಶ್ ಭಂಟಿಯಾ ಕಾರ್ಯದರ್ಶಿಯಾಗಿ, ದೀಪಕ್ ವೆಲ್ಲಿಂಗ್ ಅವರು ಕೋಶಾಧಿಕಾರಿಯಾಗಿ, ದೀಪಂ ಸಿಲ್ಕ್ಸ್‌ನ ವಿಜಯ ಶೇಖರ ರವಿ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಸಮಿತಿ ಸದಸ್ಯರಾಗಿ ಇನಾಯತ್ ಶಾ, ಓಮರ್ ಅಹಮ್ಮದ್, ಮಹಾವೀರ್ ಜೈನ್, ರಾಮಚಂದ್ರನ್ ಅವರನ್ನು ಆಯ್ಕೆ ಮಾಡಲಾಯಿತು. ಸಂಸ್ಥೆಯ 125ನೇ ವರ್ಷವನ್ನು ಅದ್ದೂರಿಯಾಗಿ ಆಚರಿಸಲು ಸದಸ್ಯತ್ವ ಅಭಿಯಾನ ನಡೆಸಲು ನಿರ್ಧರಿಸಲಾಗಿದೆ ಎಂದು ಬಿಟಿಎ ಪ್ರಕಟಣೆ ತಿಳಿಸಿದೆ.

ಚಂದ್ರಕಾಂತ ಭಂಡಾರೆ ಆಯ್ಕೆ

ಬೆಂಗಳೂರು: ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಚಂದ್ರಕಾಂತ ಭಂಡಾರೆ ಆಯ್ಕೆಯಾಗಿದ್ದಾರೆ. ಇಲ್ಲಿ ಶುಕ್ರವಾರ ನಡೆದ ಸಂಘದ ಕಾರ್ಯಕಾರಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ನಡೆದಿದೆ.


ಚಂದ್ರಕಾಂತ ಭಂಡಾರೆ

ಪ್ರಧಾನ ಕಾರ್ಯದರ್ಶಿಯಾಗಿ ಕಾಡಾದಿ ಶರಣಪ್ಪ, ಖಜಾಂಚಿಯಾಗಿ ಶಂಕ್ರಪ್ಪ ವಜ್ರದ ಆಯ್ಕೆಯಾಗಿದ್ದಾರೆ. ಸಂಘದ ಹಿಂದಿನ ಅಧ್ಯಕ್ಷ ಮಾಣಿಕ ಎ. ಬಿರಾದರ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಇದೇ 22ರಂದು ನಡೆದಿದ್ದ ಚುನಾವಣೆಯಲ್ಲಿ ಅವಿರೋಧವಾಗಿ 15 ಜನ ನಿರ್ದೇಶಕರನ್ನು ಆಯ್ಕೆ ಮಾಡಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ.

10 ಮಂದಿ ಬಂಧನ • ಎಲ್ಲ ಬಂಧಿತರು ಪದವೀಧರರು, ಒಂದಿಬ್ಬರು ಪ್ರಮುಖ ಕಂಪನಿಗಳ ನೌಕರರು

ಆನ್‌ಲೈನ್ ಜಾಬ್ ಟಾಸ್ಕ್ ಹೆಸರಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ₹ 6 ಕೋಟಿಗೂ ಅಧಿಕ ಮೊತ್ತದ ವಂಚನೆ
- ಚೀನಾಗೂ ಭೇಟಿ ನೀಡಿದ್ದ ಮೂವರು ಆರೋಪಿಗಳು

ಬೆಂಗಳೂರು: ಆನ್‌ಲೈನ್ ಜಾಬ್ ಟಾಸ್ಕ್ ಹಾಗೂ ಕ್ರಿಪ್ಟೊ ಕರೆನ್ಸಿಯಲ್ಲಿ ಹಣ ಹೂಡಿದರೆ ಹೆಚ್ಚು ಲಾಭಾಂಶ ನೀಡುವ ಆಮಿಷವೊಡ್ಡಿ ಸಾರ್ವಜನಿಕರಿಗೆ ವಂಚಿಸುತ್ತಿದ್ದ 10 ಆರೋಪಿಗಳನ್ನು ಬೆಂಗಳೂರು ಉತ್ತರ ವಿಭಾಗದ ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ.ನಗರ ಹಾಗೂ ಸುತ್ತಮುತ್ತಲ ಪ್ರದೇಶದ ನಿವಾಸಿಗಳಾದ ಸೈಯದ್ ಯಾಹ್ಯಾ, ಉಮರ್ ಫಾರೂಕ್, ಮೊಹಮ್ಮದ್ ಮಹಿನ್, ಮೊಹಮ್ಮದ್ ಮುಜಾಮಿಲ್, ತೇಜಸ್, ಚೇತನ್, ವಾಸೀಂ ಅಕ್ರಮ್, ಸೈಯದ್ ಝೈದ್, ಸಾಹಿ ಅಬ್ದುಲ್ ಅನನ್, ಓಂಪ್ರಕಾಶ್ ಬಂಧಿತರು.

ಆರೋಪಿಗಳಿಂದ 72 ಮೊಬೈಲ್ ಫೋನ್, 182 ಡೆಬಿಟ್ ಕಾರ್ಡ್, ಎರಡು ಲ್ಯಾಪ್‌ಟಾಪ್, ವಿವಿಧ ಕಂಪನಿಗಳ 133 ಸಿಮ್ ಕಾರ್ಡ್, 127 ಬ್ಯಾಂಕ್ ಪಾಸ್ ಪುಸ್ತಕಗಳು, ₹ 1.74 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಅವರು, 'ಎಲ್ಲ ಆರೋಪಿಗಳು ಪದವೀಧರರು. ಈ ಪೈಕಿ ಫಾರೂಕ್, ಝೈದ್ ಹಾಗೂ ಚೇತನ್ ಅವರು ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು' ಎಂದು ತಿಳಿಸಿದರು.

ಒಟ್ಟಾರೆ ₹ 6 ಕೋಟಿಗೂ ಅಧಿಕ ಮೊತ್ತದ ವಂಚನೆ ನಡೆದಿದೆ. ಸಂಚಿನ ಸೂತ್ರಧಾರರು ಚೀನಾದಲ್ಲಿ ನೆಲೆಸಿದ್ದಾರೆ. ರಾಜ್ಯದ ಈ ಪ್ರಕರಣವೂ ಸೇರಿದಂತೆ ದೇಶದ 21 ರಾಜ್ಯಗಳಲ್ಲಿ 122 ಎನ್‌ಸಿಆರ್‌ಪಿ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಂಚನೆಹೇಗೆ?: 'ಸಾಮಾಜಿಕಜಾಲತಾಣಗಳ ಮೂಲಕ ಆಸಕ್ತರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ಮನೆಯಲ್ಲಿಯೇ ಕುಳಿತು ನಾವು ನೀಡುವ ಕೆಲಸ ಗಳನ್ನು ಆನ್‌ಲೈನ್‌ನಲ್ಲಿ ಪೂರ್ಣಗೊಳಿಸಿದರೆ ಹಣ ನೀಡುವುದಾಗಿ ಆಮಿಷವೊಡ್ಡಿ ನಂಬಿಸುತ್ತಿದ್ದರು. ಬಳಿಕ ಅವರನ್ನು ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಿ, ಆರಂಭದಲ್ಲಿ ನಾವು ಹೇಳುವ ಕೆಲ ಐಷಾರಾಮಿ ಹೋಟೆಲ್‌ಗಳ ಬಗ್ಗೆ ತಮ್ಮ ಅಭಿಪ್ರಾಯ ನೀಡಬೇಕು. 'ಇದಕ್ಕೆ ₹ 150-200 ಪಾವತಿಸಿ, ಅಭಿಪ್ರಾಯ ವರದಿ ನೀಡಿದರೆ ಹೆಚ್ಚಿನ ಲಾಭಾಂಶವನ್ನು ನೀಡಲಾಗುವುದು ಎಂದು ಆಮಿಷವೊಡ್ಡುತ್ತಿದ್ದರು. ಅದೇ ರೀತಿ ಆರಂಭದಲ್ಲಿ ಪ್ರತಿ ಅಭಿಪ್ರಾಯಕ್ಕೆ ₹ 400-500 ಹಣವನ್ನು ಆನ್‌ಲೈನ್ ಮೂಲಕ ಪಾವತಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.



ಸೈಯದ್ ಯಾಹ್ಯಾ, ಉಮರ್ ಫಾರೂಕ್, ತೇಜಸ್, ಚೇತನ್, ಸಾಹಿ ಅಬ್ದುಲ್ ಅನನ್, ಓಂಪ್ರಕಾಶ್, ಮೊಹಮ್ಮದ್ ಮಹಿನ್, ಮೊಹಮ್ಮದ್ ಮುಜಾಮಿಲ್, ವಾಸೀಂ ಅಕ್ರಮ್, ಸೈಯದ್ ಝೈದ್

'ಈ ರೀತಿ ಹಲವು ಅಭಿಪ್ರಾಯ ವರದಿಗಳನ್ನು ತರಿಸಿಕೊಂಡು ಹಣ ಪಾವತಿಸಿ ನಂಬಿಕೆ ಗಳಿಸಿಕೊಂಡ ಬಳಿಕ ಕ್ರಿಪ್ಟೋ ಕರೆನ್ಸಿ ವ್ಯವಹಾರದಲ್ಲಿ ಹೆಚ್ಚು ಹಣ ಹೂಡಿದರೆ ದೊಡ್ಡ ಮೊತ್ತದ ಲಾಭ ಸಿಗಲಿದೆ ಎಂದು ಆಮಿಷ ಒಡ್ಡುತ್ತಿದ್ದರು. ನಂಬಿ ಹೂಡಿದಲ್ಲಿ ಬಳಿಕ ಸಂಪರ್ಕಕ್ಕೆ ಸಿಗದೆ ವಂಚಿಸುತ್ತಿದ್ದರು. ಇದೇ ರೀತಿ ವ್ಯಕ್ತಿಯೊಬ್ಬರಿಗೆ ₹ 25.37 ಲಕ್ಷ ವಂಚಿಸಿದ್ದು, ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ತಿಳಿಸಿದರು.

ಪ್ರಕರಣ ದಾಖಲಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಹಣ ಸಂದಾಯವಾಗಿರುವ ಬ್ಯಾಂಕ್ ಖಾತೆಗಳ ವಿವರ ಹಾಗೂ ಆ ಖಾತೆಗಳಿಂದ ಬೆಂಗಳೂರಿನ ವಿವಿಧ ಎಟಿಎಂಗಳಲ್ಲಿ ಹಣ ಡ್ರಾ ಆಗಿರುವುದನ್ನು ಪತ್ತೆಹಚ್ಚಿದ್ದರು. ಏಳು ಆರೋಪಿಗಳನ್ನು ಆರ್.ಟಿ.ನಗರದ ಬಳಿ ಬಂಧಿಸಿ ತನಿಖೆ ನಡೆಸಿದಾಗ, ಆರೋಪಿಗಳಲ್ಲಿ ಮೂವರು ಚೀನಾಗೆ ತೆರಳಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಚೀನಾ ಮೂಲದವರ ಸೂಚನೆಯಂತೆ ವಂಚನೆಯಲ್ಲಿ ತೊಡಗಿದ್ದಾಗಿ ತಿಳಿಸಿದರು. ಸೆ. 15ರಂದು ಚೀನಾದಿಂದ ಬಂದಿಳಿದ ಮೂವರೂ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದರು.

ಆರೋಪಿಗಳು ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತೆರೆದಿದ್ದ ಕಚೇರಿ ಮೇಲೂ ದಾಳಿ ನಡೆಸಿ, ವಿವಿಧ ಬ್ಯಾಂಕ್‌ಗಳ ಪಾಸ್ ಬುಕ್, ಸಿಮ್ ಕಾರ್ಡ್, ಡೆಬಿಟ್ ಕಾರ್ಡ್, ಮೊಬೈಲ್ ಫೋನ್‌ಗಳನ್ನು ವಶಪಡಿಸಿ-ಕೊಳ್ಳಲಾಗಿದೆ. ಬ್ಯಾಂಕ್ ಖಾತೆಗಳಲ್ಲಿದ್ದ ಒಟ್ಟು ₹7.34 ಲಕ್ಷ ಹಣವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ದರ್ಶನ್ ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನಟನ ಪರ ವಾದ ಮಂಡಿಸಲು ಸಮಯ ಕೇಳಿದ ವಕೀಲರು
- ಆರೋಪಿಗಳಿಗೆ ಜಾಮೀನು ನೀಡದಂತೆ ತಕರಾರು ಅರ್ಜಿ ಸಲ್ಲಿಸಿದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್
- ವಿಚಾರಣೆ ಸೆಪ್ಟೆಂಬರ್ 30ಕ್ಕೆ ಮುಂದೂಡಿಕೆ



ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಹಾಗೂ ಪವಿತ್ರಾ ಗೌಡ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಗರದ 57ನೇ ಸಿಟಿ ಸಿವಿಲ್ ನ್ಯಾಯಾಲಯ ಸೆಪ್ಟೆಂಬರ್ 30ಕ್ಕೆ ಮುಂದೂಡಿದೆ.

ಶುಕ್ರವಾರ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಅವರು ಆರೋಪಿಗಳಿಗೆ ಜಾಮೀನು ನೀಡದಂತೆ ತಕರಾರು ಅರ್ಜಿ ಸಲ್ಲಿಸಿದರು.

ವಾದ ಆರಂಭಿಸಿದ ದರ್ಶನ್ ಪರ ವಕೀಲ ಸುನೀಲ್, 'ಜಾಮೀನು ಅರ್ಜಿಗೆ ಎಸ್‌ಪಿಪಿ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದಾರೆ. ಹಿರಿಯ ವಕೀಲರು ನಗರದಲ್ಲಿ ಇಲ್ಲದ ಕಾರಣ ವಾದ ಮಂಡಿಸಲು ಅವಕಾಶ ಮಾಡಿಕೊಡಬೇಕು' ಎಂದು ಕೋರಿದರು. ಕೋರ್ಟ್ ಇದನ್ನು ಮಾನ್ಯ ಮಾಡಿತು.

ಮೊದಲ ಆರೋಪಿ ಪವಿತ್ರಾ ಗೌಡ ಪರ ವಾದ ಮಂಡಿಸಿದ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್, 'ಕೊಲೆ ಪ್ರಕರಣದಲ್ಲಿ ನನ್ನ ಕಕ್ಷಿದಾರರ ಪಾತ್ರವಿಲ್ಲ. ಮನೆಯ ಕೆಲಸಗಾರ ಪವನ್ ಹಾಗೂ ದರ್ಶನ್‌ಗೆ ವಿಷಯ ತಿಳಿಸಿದ್ದರು. ಅಶ್ಲೀಲ ಸಂದೇಶ ಕಳುಹಿಸಿದ್ದರಿಂದ ಇನ್ನಿತರ ಆರೋಪಿಗಳು ನಗರಕ್ಕೆ ಕರೆತಂದಿದ್ದರು. ಶೆಡ್‌ಗೆ ಪವಿತ್ರಾ ಹೋಗಿರುವ ಬಗ್ಗೆ ಸಾಕ್ಷಿದಾರರು ಹೇಳಿಕೆ ನೀಡಿದ್ದಾರೆಯೇ ಹೊರತು, ಕೊಲೆ ಮಾಡಿದ್ದಾರೆ ಎಂದಲ್ಲ. ಆರೋಪ ಪಟ್ಟಿಯಲ್ಲೂ ಪೊಲೀಸರು ಇದನ್ನು ಉಲ್ಲೇಖಿಸಿಲ್ಲ' ಎಂದು ಹೇಳಿದರು.

'ಪಟ್ಟಣಗೆರೆಯ ಶೆಡ್ ಕೆಲಸಗಾರ, ಪ್ರತ್ಯಕ್ಷ ಸಾಕ್ಷಿ ಕಿರಣ್ ಅವರು, ಪವಿತ್ರಾಗೌಡ ಅವರು ರೇಣುಕಸ್ವಾಮಿಗೆ ಚಪ್ಪಲಿಯಿಂದ ಕಪಾಳಕ್ಕೆ ಹೊಡೆದರು ಎಂದು ಹೇಳಿಕೆ ನೀಡಿದ್ದಾರೆ. ಹೊಡೆದಷ್ಟಕ್ಕೇ ಕೊಲೆ ಮಾಡಿದಂತೆಯಾ?' ನನ್ನ ಕಕ್ಷಿದಾರರ-ರಿಗೆ ಜಾಮೀನು ನೀಡಬೇಕು' ಎಂದು ಕೋರಿದರು.

ಇದೇ ವೇಳೆ ಪ್ರಕರಣದ 8ನೇ ಆರೋಪಿ ರವಿಶಂಕರ್ ಅವರ ಜಾಮೀನು ಅರ್ಜಿ ಸಂಬಂಧ ವಕೀಲ ರಂಗನಾಥ ರೆಡ್ಡಿ ವಾದ ಮಂಡಿಸಿದರು. ಸೋಮವಾರ ಪ್ರತಿವಾದ ಮಾಡುವುದಾಗಿ ಪ್ರಸನ್ನಕು-ಮಾರ್ ತಿಳಿಸಿದರು.

ದರ್ಶನ್ ಸೇರಿ ಮೂವರ ಅರ್ಜಿ ವಿಚಾರಣೆಯನ್ನು ಸೆ. 30ಕ್ಕೆ ಮುಂದೂಡಿದರೆ, ಇದೇ ಪ್ರಕರಣದಲ್ಲಿ ಇನ್ನಿತರ ಐವರು ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿಗಳ ವಿಚಾರಣೆಯನ್ನು ಅ.5ಕ್ಕೆ ಮುಂದೂಡಿದರು.

ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿದ್ದ 17 ಜನರ ಪೈಕಿ 15, 16 ಮತ್ತು 17ನೇ ಆರೋಪಿಗಳಿಗೆ ಸದ್ಯ ಜಾಮೀನು ಸಿಕ್ಕಿದೆ.

ಮದುವೆ ವಿಚಾರಕ್ಕೆ ಮಹಾಲಕ್ಷ್ಮೀ ಹತ್ಯೆ

ಮರಣಪತ್ರದಲ್ಲಿ ಕೊಲೆಯ ಬಗ್ಗೆ ಉಲ್ಲೇಖ • ಎರಡು ಮಚ್ಚು ಖರೀದಿಸಿದ್ದ ಆರೋಪಿ

ಪ್ರಜಾವಾಣಿ ವಾರ್ತೆ



ಮಹಾಲಕ್ಷ್ಮೀ

ಬೆಂಗಳೂರು: 'ಮದುವೆ ವಿಚಾರದಲ್ಲಿ ನಡೆದಿದ್ದ ಜಗಳದಿಂದಾಗಿ ಮಹಾಲಕ್ಷ್ಮೀ ಅವರನ್ನು ಬರ್ಬರವಾಗಿ ಕೊಲೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಪ್ರಕರಣದ ಆರೋಪಿ ಮುಕ್ತಿ ರಂಜನ್ ರಾಯ್ ಅವರು ಒಡಿಶಾದ ಧುಸುರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೂ ಮುನ್ನ ಮರಣ ಪತ್ರ ಬರೆದಿದ್ದು, ಈ ಕೊಲೆಯ ಬಗ್ಗೆ ಉಲ್ಲೇಖಿಸಿದ್ದಾರೆ.

'ಸೆಪ್ಟೆಂಬರ್ 3ರಂದೇ ಕೃತ್ಯ ನಡೆದಿದೆಯೇ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಮರಣಪತ್ರದ ದೃಢೀಕೃತ ಪ್ರತಿಯನ್ನು ಧುಸುರಿ ಠಾಣೆಯ ಪೊಲೀಸರಿಂದ ಪಡೆದ ಬಳಿಕ ಇದು ಗೊತ್ತಾಗಲಿದೆ. ರಾಜ್ಯ ಪೊಲೀಸ್ ಅಧಿಕಾರಿಗಳ ತಂಡ ಆರೋಪಿಯ ಸ್ವಗ್ರಾಮಕ್ಕೆ ತೆರಳಿದ್ದು, ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಆರೋಪಿಯ ಸಹೋದರ ಬೆಂಗಳೂರಿನಲ್ಲಿಯೇ ಇದ್ದು, ನ್ಯಾಯಾಧೀಶರ ಮುಂದೆ ಅವರ ಹೇಳಿಕೆ ದಾಖಲಿಸಿಕೊ-ಳ್ಳಲಾಗಿದೆ. ಆರೋಪಿ ಬೆಂಗಳೂರಿನಲ್ಲಿ 7-8 ವರ್ಷಗಳಿಂದ ವಾಸಿಸುತ್ತಿದ್ದು, ಮಾಲ್‌ವೊಂದರಲ್ಲಿ ಮಾರಾಟ ಪ್ರತಿನಿಧಿಯಾಗಿದ್ದ. ಆರೋಪಿಯಿಂದ ಮಹಾಲಕ್ಷ್ಮೀ ಹಣ ವಸೂಲಿ ಮಾಡಿದ್ದರ ಬಗ್ಗೆ ಮಾಹಿತಿ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮಹಾಲಕ್ಷ್ಮೀ ಅವರನ್ನು ಕೊಲೆ ಮಾಡಿದ ಬಳಿಕ ಮುಕ್ತಿ ರಂಜನ್ ರಾಯ್, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಮಾರ್ಗವಾಗಿ ಸ್ವಗ್ರಾಮ ಒಡಿಶಾದ ಭದ್ರಕ್ ಬಳಿಯ ಬೋನಿಪುರಗೆ ತೆರಳಿದ್ದಾನೆ. ದ್ವಿಚಕ್ರ ವಾಹನ ಅಥವಾ ಬಸ್/ರೈಲಿನ ಮೂಲಕ ತೆರಳಿದ್ದಾನೆಯೇ ಎಂಬುದರ ಬಗ್ಗೆಯೂ ಸ್ಪಷ್ಟತೆ ಇಲ್ಲ. ಪೊಲೀಸರ ದಿಕ್ಕು ತಪ್ಪಿಸಲು ಮಾರ್ಗ ಬದಲಿಸಿರುವ ಸಾಧ್ಯತೆ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಊರು ತಲುಪಿದ ಬಳಿಕ ಹೆಬ್ಬ-ಗೋಡಿಯಲ್ಲಿರುವ ತಮ್ಮನಿಗೆ ಕರೆ ಮಾಡಿದ್ದು, ಮಹಾಲಕ್ಷ್ಮೀಯನ್ನು ಕೊಲೆ ಮಾಡರುವ ವಿಷಯ ತಿಳಿಸಿ, ಯಾರಿಗೂ ಈ ವಿಚಾರ ಹೇಳಬೇಡ. ಬೇಗ ಬಾಡಿಗೆ ಕೊಠಡಿಯನ್ನು ಖಾಲಿ ಮಾಡು ಎಂದು ಹೇಳಿದ್ದಾನೆ. ಬಳಿಕ, ಕೊಲೆ ಮಾಡಿದ್ದ ವಿಚಾರವನ್ನು ತನ್ನ ತಾಯಿಗೂ ತಿಳಿಸಿ, ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಹೇಳಿದ್ದಾರೆ.

'ಮಹಾಲಕ್ಷ್ಮೀ ಮನೆಯಲ್ಲಿ ತಪಾಸಣೆ ವೇಳೆ ಅಂಗಡಿಯೊಂದರ ಬಿಲ್ ಸಿಕ್ಕಿದೆ. ಪೊಲೀಸರು ಅಲ್ಲಿಗೆ ಭೇಟಿ ನೀಡಿ, ವಿಚಾರಿಸಿದಾಗ ಮಾಂಸ ಕತ್ತರಿಸುವ ಎರಡು ಮಚ್ಚುಗಳನ್ನು ಆರೋಪಿ ಖರೀದಿಸಿದ್ದು ಗೊತ್ತಾಗಿದೆ. ಅದರಿಂದಲೇ ಮಹಾಲಕ್ಷ್ಮೀ ಅವರದೇಹವನ್ನು 59 ತುಂಡುಗಳಾಗಿ ಕತ್ತರಿಸಿ ಫ್ರಿಜ್‌ನಲ್ಲಿ ಇರಿಸಿದ್ದ. ಒಂದೇ ದಿನದಲ್ಲಿ ಕತ್ತರಿಸಿದ್ದನೇ ಅಥವಾ ಎರಡು ದಿನ ತೆಗೆದುಕೊಂಡನೇ ಎಂದು ಸ್ಪಷ್ಟವಾಗಿಲ್ಲ' ಎಂದರು.

ಬೆಂಗಳೂರು ಪೊಲೀಸರ ತಂಡ ಸದ್ಯ ಮುಕ್ತಿ ರಂಜನ್ ಮನೆಯಲ್ಲೇ ಬೀಡುಬಿಟ್ಟಿದ್ದು, ಕುಟುಂಬದ ಸದಸ್ಯರು ಹಾಗೂ ಗ್ರಾಮಸ್ಥರ ವಿಚಾರಣೆ ನಡೆಸುತ್ತಿದೆ. ಧುಸುರಿ ಠಾಣೆ ಪೊಲೀಸರಿಂದ ಆರೋಪಿಯ ಬೆರಳಚ್ಚು ಮಾದರಿ ಪಡೆದುಕೊಳ್ಳಲಾಗಿದೆ. ಶನಿವಾರ ಅಥವಾ ಭಾನುವಾರ ಈ ತಂಡ ಬೆಂಗಳೂರಿಗೆ ಮರಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವಾಹನಗಳ ತಪಾಸಣೆ: 73 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆ ಮತ್ತು ಸಂಚಾರ ವಿಭಾಗದ ಪೊಲೀಸರನ್ನು ಒಳಗೊಂಡ ಜಂಟಿ ತಂಡಗಳು ಶುಕ್ರವಾರ ವಾಹನಗಳನ್ನು ತಪಾಸಣೆ ನಡೆಸಿ ತೆರಿಗೆ ಪಾವತಿಸದ 31 ಪ್ರಕರಣಗಳಲ್ಲಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿವೆ.

ನೀರು ಪೂರೈಕೆ ಮಾಡುವ ಟ್ಯಾಂಕರ್ ವಾಹನಗಳ ಮಾಲೀಕರು ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಿಲ್ಲ, ಅರ್ಹತಾ ಪತ್ರ, ರಹದಾರಿ ಪತ್ರ, ಚಾಲನಾ ಪರವಾನಗಿ ಪಡೆಯದೇ ಕಾರ್ಯಾಚರಿಸುತ್ತಿವೆ ಎಂಬ ಮಾಹಿತಿಯನ್ನು ಆಧರಿಸಿ ಜಂಟಿ ಸಾರಿಗೆ ಆಯುಕ್ತರ ನೇತೃತ್ವದಲ್ಲಿ ಐದು ತಂಡ ರಚಿಸಿ ತಪಾಸಣೆ ಹಮ್ಮಿಕೊಳ್ಳಲಾಗಿತ್ತು.

300ಕ್ಕೂ ಅಧಿಕ ವಾಹನಗಳ ತಪಾಸಣೆ ನಡೆಯಿತು. 73 ವಾಹನಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ತೆರಿಗೆ ಪಾವತಿಸದ 31 ವಾಹನಗಳನ್ನು ಮುಟ್ಟುಗೋಲು ಹಾಕಲಾಗಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ರೈಲಿಗೆ ಸಿಲುಕಿ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಶೆಟ್ಟಿಹಳ್ಳಿ ಬಳಿ ಗುರುವಾರ ರಾತ್ರಿ ರೈಲಿಗೆ ಸಿಲುಕಿ ಲೇಖಕ, ಪತ್ರಕರ್ತ ನಾಗೇಶ್ ಗುಬ್ಬಿ (44) ಮೃತ-ಪಟ್ಟಿದ್ದಾರೆ. ನಾಗೇಶ್ ಅವಿವಾಹಿತರು. ಗುಬ್ಬಿಯವರಾಗಿದ್ದು, ಹಲವು ವರ್ಷಗಳಿಂದ ನಗರದಲ್ಲಿ ವಾಸವಿದ್ದರು.



ನಾಗೇಶ್ ಗುಬ್ಬಿ

ಜಯನಗರದ ತಮ್ಮ ಮನೆಯತ್ತ ಹೋಗುವಾಗ ರೈಲಿಗೆ ಸಿಲುಕಿ ಮೃತಪಟ್ಟಿದ್ದಾರೆ. ತಂದೆ, ತಾಯಿ, ಸಹೋದರಿ ಇದ್ದಾರೆ. ನಗರದ ಗಾರ್ಡನ್ ರಸ್ತೆ ಸಾರ್ವಜನಿಕ ಸ್ಮಶಾನದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು.

ಹಣಕ್ಕಾಗಿ ಸ್ವಾಮೀಜಿಗೆ ಬೆದರಿಕೆ: ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಪಟೂರಿನ ಷಡಕ್ಷರಿ ಮಠದ ರುದ್ರ-ಮುನಿಸ್ವಾಮಿ ಅವರಿಗೆ ಬೆದರಿಕೆ ಹಾಕಿ, ₹ 6 ಕೋಟಿಗೆ ಬೇಡಿಕೆ ಇಟ್ಟಿದ್ದ ಆರೋಪದಡಿ ವಿಜಯಪುರದ ವಿದ್ಯಾ ಬಿರಾದಾರ ಪಾಟೀಲ ಎಂಬವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮತ್ತಿಬ್ಬರು ನಾಪತ್ತೆಯಾಗಿದ್ದಾರೆ.

'ಆಗಸ್ಟ್ 31ರಂದು ಸ್ವಾಮೀಜಿ ಅವರಿಗೆ ಕರೆ ಮಾಡಿದ್ದ ಆರೋಪಿ ಮಹಿಳೆ, ತಾನು ರಾಜ್ಯ ಮಾಹಿತಿ ಹಕ್ಕು ಆಯೋಗದ ಅಧ್ಯಕ್ಷೆ ಮತ್ತು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ಸಹೋದರಿ ಎಂದು ಪರಿಚಯಿಸಿಕೊಂಡಿದ್ದರು. ಡಿ.ಬಿ.ಪಲ್ಲವಿ ಹಾಗೂ ಸೂರ್ಯನಾರಾಯಣ ಎಂಬುವರು ನಿಮಗೆ ಸಂಬಂಧಿಸಿದ ವಿಡಿಯೊ ತುಣುಕು ಹಾಗೂ ದೂರಿನ ಪತ್ರ ನೀಡಿ, ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ ಎಂಬುದಾಗಿ ಬೆದರಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಬೆಂಗಳೂರಿನ ಗಾಂಧಿ ನಗರದ ರಾಮಕೃಷ್ಣ ಹೋಟೆಲ್ ಬಳಿ ಸ್ವಾಮೀಜಿ ಅವರ ಕಾನೂನು ಸಲಹೆಗಾರ ಧನಂಜಯ್ ಅವರನ್ನು ಭೇಟಿ ಮಾಡಿದ್ದ ಮಹಿಳೆ, ಸ್ವಾಮೀಜಿ ಅವರಿಗೆ ಸಂಬಂಧಿಸಿದ ಅಶ್ಲೀಲ ವಿಡಿಯೊಗಳಿದ್ದು, ಅದನ್ನು ಬಹಿರಂಗಪಡಿಸದಿ-ರಲು ₹ 6 ಕೋಟಿ ನೀಡಿ. ಇಲ್ಲದಿದ್ದರೆ ವಿಡಿಯೊ ಬಹಿರಂಗಪಡಿಸುವುದಾಗಿ ಬೆದರಿಸಿದ್ದರು. ಸ್ವಾಮೀಜಿ ಈ ಬಗ್ಗೆ ದೂರು ದಾಖಲಿಸಿದ್ದರು' ಎಂದು ತಿಳಿಸಿದ್ದಾರೆ.

'ವರ್ತೂರಿನ ವಿದ್ಯಾರಣ್ಯಪುರದ ಮನೆಯಲ್ಲಿ ಆರೋಪಿ ಬಂಧಿಸಲಾಯಿತು. ಮಹಿಳೆಯ ಮೊಬೈಲ್ ವಶಕ್ಕೆ ಪಡೆದಿದ್ದು ಪರಿಶೀಲನೆ ನಡೆದಿದೆ. ಅಶ್ಲೀಲ ವಿಡಿಯೊಗಳು ಪತ್ತೆಯಾಗಿವೆ. ಅವುಗಳ ನೈಜತೆ ಪರಿಶೀಲಿಸಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಆರೋಪಿ ರಾಜಕೀಯ ಪಕ್ಷವೊಂದರಿಂದ ವಿಜಯಪುರ ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಸಿದ್ಧತೆ ಮಾಡಿಕೊಂಡಿದ್ದರು' ಎಂದು ತಿಳಿಸಿದರು.

'ಸ್ವಾಮೀಜಿ ವಿರುದ್ಧ ಕೆಲವರು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಅವರಿಗೆ ಸಹಾಯ ಮಾಡುತ್ತಿದ್ದು, ಹಣಕ್ಕೆ ಬೇಡಿಕೆ ಇಟ್ಟಿಲ್ಲ ಎಂದು ವಿದ್ಯಾ ವಿಚಾರಣೆ ವೇಳೆ ತಿಳಿಸಿದರು. ತಲೆಮರೆಸಿಕೊಂಡಿರುವ ಮತ್ತಿಬ್ಬರು ಆರೋಪಿಗಳ ಪತ್ತೆ ಕಾರ್ಯ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಿಶ್ವ 'ಅಲ್ಝೈಮರ್' ದಿನದ ಪ್ರಯುಕ್ತ 'ಡಿಮೆನ್ಶಿಯಾ' ಜಾಗೃತಿ ನಡಿಗೆ: ಮುಖ್ಯ ಅತಿಥಿ: ಸಿ.ಎಂ.ನಾರಾಯಣಸ್ವಾಮಿ, ಗೌರವ ಅತಿಥಿ: ಬಿ.ಎಸ್. ನಾಗಭೂಷಣ, ಅಧ್ಯಕ್ಷತೆ: ಸಿ.ಅನುಪಮಾ, ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಸ್ 317ಎಫ್, ಪ್ರಾರಂಭಿಕ ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 7

ವಿಶ್ವ ಹೃದಯ ದಿನದ ಪ್ರಯುಕ್ತ ವಾಕಥಾನ್: ಚಾಲನೆ: ದಿನೇಶ್ ಗುಂಡೂರಾವ್, ಶರಣಬಸಪ್ಪ ದರ್ಶನಾಪುರ, ಮುಖ್ಯ ಅತಿಥಿಗಳು: ಎಂ.ಸಿ. ಸುಧಾಕರ್, ಗೋಪಾಲಯ್ಯ, ರುದ್ರೇಗೌಡ, ಆಯೋಜನೆ ಹಾಗೂ ಸ್ಥಳ: ಸೇಂಟ್ ಥೆರೆಸಾ ತಥಾಗತ ಆಸ್ಪತ್ರೆ, ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಳಿಗ್ಗೆ 8

ಸೃಷ್ಟಿ ಸಂಭ್ರಮ ಹಾಗೂ 'ಪ್ರಕೃತಿ ಮಿತ್ರ ಪ್ರಶಸ್ತಿ' ಪ್ರದಾನ: ಮುಖ್ಯ ಅತಿಥಿಗಳು: ಶಾಶ್ವತಿ ಮಿಶ್ರ, ಪ್ರವೀಣ್ ಭಾರ್ಗವ್, ಆಯೋಜನೆ ಹಾಗೂ ಸ್ಥಳ: ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.30

'ಪರಂಪರಾ ಪುರಸ್ಕಾರ' ಪ್ರದಾನ ಸಮಾರಂಭ: ಉದ್ಘಾಟನೆ: ಸಿ.ಕೆ. ರಾಮಮೂರ್ತಿ, ಅಧ್ಯಕ್ಷತೆ: ಎಸ್. ರಾಮಕೃಷ್ಣ ಅಡಿಗ, ಮುಖ್ಯ ಅತಿಥಿಗಳು: ಕೆ.ಎನ್.ಭಗವಾನ್, ಅಣುಕು **ರಾಮನಾಥ್, ಸಾಧಕರಿಗೆ 'ಪರಂಪರಾ ಪುರಸ್ಕಾರ':** ಡಾ.ಸಿ.ಆರ್. ಚಂದ್ರಶೇಖರ್, ರಾವಲ್ ಅನಂತಪದ್ಮನಾಭ ಸೋಮಯಾಜಿ, ರಾಜೇಶ್ ಭಟ್, ಗಣೇಶ್ ಕಾಸರಗೋಡು, ಬೇಳೂರು ರಾಘವೇಂದ್ರ ಶೆಟ್ಟಿ, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಶನ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10

'ಬ್ರೇಕಿಂಗ್ ಬ್ಯಾರಿಯರ್ಸ್–ಬಿಲ್ಡಿಂಗ್ ಬ್ರಿಡ್ಜಸ್' ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ನ್ಯಾ. ಬೇಲಾ ಎಂ. ತ್ರಿವೇದಿ, ಸ್ಮರಣಿಕೆ ಬಿಡುಗಡೆ: ನ್ಯಾ. ಅರವಿಂದ್ ಕುಮಾರ್, ಗೌರವ ಅತಿಥಿಗಳು: ನ್ಯಾ. ಎನ್.ವಿ. ಅಂಜಾರಿಯಾ, ನ್ಯಾ.ಕುಮುದಿನಿ, ಅರ್ಜುನ್ ರಾಮ್ ಮೇಘವಾಲ್, ಶೋಭಾ ಕರಂದ್ಲಾಜೆ, ಎಚ್.ಕೆ. ಪಾಟೀಲ, ಎ.ಎಸ್. ಪೊನ್ನಣ್ಣ, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಆಲ್ ಇಂಡಿಯಾ ಫೆಡರೇಷನ್ ಆಫ್ ವುಮೆನ್ ಲಾಯರ್ಸ್, ಕರ್ನಾಟಕ ಫೆಡರೇಷನ್ ಆಫ್ ವುಮೆನ್ ಲಾಯರ್ಸ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ರಾಜ್ಯಮಟ್ಟದ ಕಾವ್ಯ ಕಮ್ಮಟ: ಉದ್ಘಾಟನೆ: ಆರ್.ಯೋಗಾನಂದ ಬಾಬು, ಪ್ರಾಸ್ತಾವಿಕ ನುಡಿ: ಎಂ.ಪ್ರಕಾಶಮೂರ್ತಿ, ಅಧ್ಯಕ್ಷತೆ: ಟಿ. ವೀರಭದ್ರಪ್ಪ, ಉಪಸ್ಥಿತಿ: ಆರ್. ಸಂಪತ್ ಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಮಹಾದೇವಪುರ ವಿಧಾನಸಭೆ ಕ್ಷೇತ್ರ, ಸ್ಥಳ: ಕರಿಯಮ್ಮನ ಅಗ್ರಹಾರ, ಬೆಳ್ಳಂದೂರು, ಬೆಳಿಗ್ಗೆ 10

'ವಾಲಿ ವಧೆ' ತಾಳಮದ್ದಳೆ ಪ್ರದರ್ಶನ: ಮುಖ್ಯ ಅತಿಥಿ: ನ್ಯಾ.ಬಿ.ವೀರಪ್ಪ, ಹಿಮ್ಮೇಳ: ಆಕಾಶ್ ಕಾಶಿ, ಆಕಾಶ್ ರಾವ್, ಶ್ರೀಶ ರಾವ್, ಶ್ರೀಶಂಕರ ಜೋಯಿಸ್, ಮುಮ್ಮೇಳ: ನಾರಾಯಣ ಯಾಜಿ, ಕೆ.ಈ.ರಾಧಾಕೃಷ್ಣ, ಶಿವಕುಮಾರ್ ಬೇಗಾರ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಎಚ್.ಎ. ಪುರೋಷತ್ತಮ ರಾವ್ ಅವರ ಮರು ಮುದ್ರಿತ 'ಕಾಡು ಪ್ರತಿಭೆ ಮಾರಪ್ಪ' ಪುಸ್ತಕ ಬಿಡುಗಡೆ: ಎಂ.ಆರ್.ನಾಗರಾಜು, ಅಧ್ಯಕ್ಷತೆ: ಅಜಯ್ ಮಿಶ್ರ, ಪುಸ್ತಕದ ಬಗ್ಗೆ: ವಿ.ಚಂದ್ರಶೇಖರ ನಂಗಲಿ, ಆಯೋಜನೆ: ಕದಂಬ ಪ್ರಕಾಶನ, ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಸ್ಥಳ: ಅಲ್ಯುಮ್ನಿ ಅಸೋಸಿಯೇಷನ್ ಸಭಾಂಗಣ, ಪಶು ವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಳಿಗ್ಗೆ 10

'ಸೌಹಾರ್ದತೆ–ವೈವಿಧ್ಯತೆ' ರಾಜ್ಯ ಮಟ್ಟದ ಚಿಂತನ ಶಿಬಿರ: ಉದ್ಘಾಟನೆ: ಅಜಯ್ ಕುಮಾರ್ ಸಿಂಗ್, ಮುಖ್ಯ ಅತಿಥಿ: ಯು. ನಿಸಾರ್ ಅಹಮದ್, ಅಧ್ಯಕ್ಷತೆ: ಮೂಡ್ನಾಕೂಡು ಚಿನ್ನಸ್ವಾಮಿ, ಪ್ರಸ್ತಾವನೆ: ಎಸ್.ವೈ. ಗುರುಶಾಂತ್, 'ಕರ್ನಾಟಕದ ಸೌಹಾರ್ದ ಪರಂಪರೆ–ಪ್ರಸಕ್ತ ಸವಾಲುಗಳು' ಗೋಷ್ಠಿ, ಅಧ್ಯಕ್ಷತೆ: ಎಂ.ಎಸ್. ಆಶಾದೇವಿ, ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಸೌಹಾರ್ದ, ಸುಬ್ಬಯ್ಯ ವೃತ್ತದ ಸಮೀಪ, ಬೆಳಿಗ್ಗೆ 10.30

ಗಜಾನನ ಶರ್ಮಾ ಅವರ 'ರಾಜಮಾತೆ ಕೆಂಪನಂಜಮ್ಮಣ್ಣಿ' ಪುಸ್ತಕ ಬಿಡುಗಡೆ: ರಾಜಾಚಂದ್ರ ಅರಸ, ಕಾಮಾಕ್ಷಿದೇವಿ, ಇಂದ್ರಾಕ್ಷಿದೇವಿ, ಮುಖ್ಯ ಅತಿಥಿಗಳು: ಜೋಗಿ, ಕೆ.ಎನ್. ಗಣೇಶಯ್ಯ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30



ಗಜಾನನ ಶರ್ಮಾ

'ಮೀಟ್ ಎಂಡ್ ಗ್ರೀಟ್ ವಿತ್ ಸೆಲಿಬ್ರೆಟಿ': ಅತಿಥಿ: ರಾಮಕೃಷ್ಣ,




'ನೃತ್ಯಾಂಕುರ' ಭರತನಾಟ್ಯ ರಂಗ ಪ್ರವೇಶ: ನಿವೇದಿತಾ ಆರ್. ನಿಟ್ಟೂರ್, ಗೌರವ ಅತಿಥಿ: ನಮಿತಾ ಶಂಕರ್, ನಂಜುಂಡ ರಾವ್, ನಾಗಲಕ್ಷ್ಮಿ ಕಣಗಾಲ್, ಗುರುಗಳು: ರಾಮು ಕಣಗಾಲ್, ರಾಗಶ್ರೀ ಪ್ರಸಾದ್, ಆಯೋಜನೆ: ರಂಗಶ್ರೀ ಮ್ಯೂಸಿಕ್ ಅಕಾಡೆಮಿ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6.30

ಉಪಸ್ಥಿತಿ: ದೇವರಾಜ್, ಲಕ್ಷ್ಮೀಶ್ ಸೋಂದಾ, ಆಯೋಜನೆ ಹಾಗೂ ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 11

'ಆರಕ್ಷಕ ಜನರ ಜೀವ ರಕ್ಷಕ' ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ರಘು ಕುಮಾರ್ ಆರ್., ಆಯೋಜನೆ: ಜನಪರ ಸಮಾನ ಮನಸ್ಕರ ತಂಡ, ಜಯಪ್ರಕಾಶ್ ನಾರಾಯಣ ವಿಚಾರ ವೇದಿಕೆ, ಕೆಂಗೇರಿ ಪತ್ರಕರ್ತರ ವೇದಿಕೆ, ಸ್ಥಳ: ಕೃಷ್ಣ ಗ್ರ್ಯಾಂಡ್ ಹೋಟೆಲ್, 1ನೇ ಮುಖ್ಯರಸ್ತೆ, ಕೆಂಗೇರಿ ಉಪನಗರ, ಬೆಳಿಗ್ಗೆ 11

'ಪಾಂಚಜನ್ಯ ಪುರಸ್ಕಾರ' ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಡಾ.ಸಿ.ಆರ್. ಚಂದ್ರಶೇಖರ್, ಪ್ರಶಸ್ತಿ ಪುರಸ್ಕೃತರು: ಡಾ.ನಾ. ಸೋಮೇಶ್ವರ, ಉಪಸ್ಥಿತಿ: ಟಿ.ವಿ. ರಾಜು, ಕೆ.ಎಸ್. ಸಮೀರ ಸಿಂಹ, ಆಯೋಜನೆ: ಪಾಂಚಜನ್ಯ ಪ್ರತಿಷ್ಠಾನ, ಸ್ಥಳ: ವಿವೇಕ ಸಭಾಂಗಣ, ಯುವ ಪಥ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 11.30



ನಾ. ಸೋಮೇಶ್ವರ

ರಾಜಧಾನಿ ಬೆಂಗಳೂರಿನಿಂದ ಕಲಬುರಗಿ ಕಡೆಗೆ ಕಾವ್ಯ ದೀವಟಿಗೆಯ ಪಯಣ: ಉದ್ಘಾಟನೆ: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಲಕ್ಷ್ಮೀಪತಿ ಕೋಲಾರ, ಉಪಸ್ಥಿತಿ: ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಕೆ. ರೇವಣ್ಣ, ಆಯೋಜನೆ: ರಂಗಮಂಡಲ, ಭಾಗವತರು ಸಾಂಸ್ಕೃತಿಕ ಸಂಘಟನೆ, ಸ್ಥಳ: ಚಾವಡಿ, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

'ಕಾವ್ಯೇಷು ರಮ್ಯಂ ನಾಟಕಂ' ಬಹುಭಾಷಾ ನಾಟಕ ಸ್ಪರ್ಧೆ ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ: ಬಹುಮಾನ ವಿತರಣೆ: ಚೇತನ್ ಜಯಸಿಂಗ್ ಪಾಟೀಲ, ಯೋಗಿತ ಪಾಟೀಲ, ಮುಖ್ಯ ಅತಿಥಿ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 6

'ಚಿಗುರು' ಚಿಣ್ಣರ ನೃತ್ಯ ಲೋಕ: ಉಪಸ್ಥಿತಿ: ಉಷಾ ಬಸಪ್ಪ, ಸ್ನೇಹಾ ಕಪ್ಪಣ್ಣ, ಎಂ. ಸ್ವಾಮಿ, ಆಯೋಜನೆ: ಅಚ್ಚಿ ಕ್ಲಾಸಿಕಲ್ ಡ್ಯಾನ್ಸ್ ಸೆಂಟರ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

'ಸುಶೀಲಾ ಮೆಮೊರಿಯಲ್ ಯುವ ಪುರಸ್ಕಾರ' ಪ್ರಶಸ್ತಿ ಪ್ರದಾನ: ಮುಖ್ಯ ಅತಿಥಿಗಳು: ವೈ.ಕೆ.ಸಂಧ್ಯಾ ಶರ್ಮ, ಪ್ರವೀಣಾ ಕುಲಕರ್ಣಿ, ಪ್ರಶಸ್ತಿ ಪುರಸ್ಕೃತರು: ವಿಷ್ಣು ಶಾಸ್ತ್ರಿ, ಆಯೋಜನೆ: ನೃತ್ಯಾಂಕುರ ಫೌಂಡೇಶನ್, ಸ್ಥಳ: ಆರ್ಟ್ ಖೋಜ್ ಸಭಾಂಗಣ, ಜೆ.ಪಿ. ನಗರ, ಸಂಜೆ 6

'ಧ್ವನಿ' ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್ ಹಿಂದೂಸ್ತಾನಿ ಸಂಗೀತ ಉತ್ಸವ: ಅತಿಥಿಗಳು: ಗುರುರಾಜ ಕರಜಗಿ, ಶ್ರೀನಾಥ್ ಜೋಶಿ, ಡಾ. ವಿವೇಕ ಜವಳಿ, 'ಬಿಕೆಎಫ್ ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್ ಪ್ರಶಸ್ತಿ': ಎಂ. ವೆಂಕಟೇಶ್ ಕುಮಾರ್, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಶನ್, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6.40



ಎಂ.ವೆಂಕಟೇಶ್ ಕುಮಾರ್

***

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಮೇಕ್ ಇನ್ ಇಂಡಿಯಾದಿಂದ ಎಚ್‌ಎಎಲ್ ಅಭಿವೃದ್ಧಿ

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ 'ಆತ್ಮ ನಿರ್ಭರ್ ಭಾರತ್' ಉತ್ತೇಜನ



'ಮೇಕ್ ಇನ್ ಇಂಡಿಯಾ' (ಆತ್ಮ ನಿರ್ಭರ್) ಉಪಕ್ರಮ ಭಾರತ ದೇಶವನ್ನು ರಕ್ಷಣಾ ವಲಯ ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಪರಿವರ್ತಿಸಿದೆ. ಕಳೆದ ದಶಕದಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL)ನಲ್ಲಿ ಆಗಿರುವ ಗಮನಾರ್ಹ ಬದಲಾವಣೆಗಳಿಗೆ ಇದು ಸಾಕ್ಷಿಯಾಗಿದೆ. ಇಂದು ದೇಶದ ರಕ್ಷಣಾ ಸಾಮರ್ಥ್ಯ ಹೆಚ್ಚಿಸುವಲ್ಲಿ ಹೆಚ್‌ಎಎಲ್ ಪ್ರಮುಖ ಪಾತ್ರ ವಹಿಸಿದೆ.

ಡಾ.ಡಿ.ಕೆ.ಸುನೀಲ್,
ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ, ಎಚ್‌ಎಎಲ್

ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಗಳು ಪ್ರಾರಂಭಿಸಿದ 'ಮೇಕ್ ಇನ್ ಇಂಡಿಯಾ' (ಆತ್ಮ ನಿರ್ಭರ್ ಭಾರತ್) ಉಪಕ್ರಮ ಭಾರತ ದೇಶವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಪರಿವರ್ತಿಸಲು ವಿನ್ಯಾಸಗೊಳಿಸಲಾಗಿದೆ. ಈ ಉಪಕ್ರಮದ ಪ್ರಮುಖ ಆಧಾರಸ್ತಂಭ ಆಗಿರುವ ರಕ್ಷಣಾ ವಲಯದಲ್ಲಿ ಆಗಿರುವ ಗಮನಾರ್ಹ ಬದಲಾವಣೆಗಳು ಇದಕ್ಕೆ ಸಾಕ್ಷಿಯಾಗಿವೆ. ಅದರಲ್ಲೂ ವಿಶೇಷವಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಕಳೆದ 10 ವರ್ಷಗಳಲ್ಲಿ ತನ್ನ ಕಾರ್ಯಚರಣೆಯ ವಿಧಾನದಲ್ಲಿ ಬಹಳಷ್ಟು ಬದಲಾವಣೆ ಮಾಡಿಕೊಂಡು ಉತ್ಪಾದನೆಗೆ ವೇಗ ಕೊಟ್ಟಿರುವುದು ಕಂಡುಬಂದಿದೆ.

1940ರಲ್ಲಿ ಪ್ರಾರಂಭವಾದ ಎಚ್‌ಎಎಲ್, ದೇಶದ ರಕ್ಷಣಾ ಸಾಮರ್ಥ್ಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಭಾರತೀಯ ರಕ್ಷಣಾ ಪಡೆಗಳಿಗೆ ಅಗತ್ಯವಾಗಿ ಬೇಕಾದ ಪ್ರಮುಖವಾದ ವಿಮಾನಗಳು, ಹೆಲಿಕಾಪ್ಟರ್‌ಗಳು ಹಾಗೂ ಇತರ ವಾಯುಯಾನ ವ್ಯವಸ್ಥೆಗಳನ್ನು ತಯಾರಿಸುತ್ತಲಿದೆ. ಕಳೆದ ಹಲವಾರು ವರ್ಷಗಳಲ್ಲಿ ಸಂಸ್ಥೆ ಅತ್ಯಾಧುನಿಕ ತಂತ್ರಜ್ಞಾನದ ಎಎಲ್‌ಹೆಚ್ ಧ್ರುವ, ರುದ್ರ ಮತ್ತು ಎಲ್‌ಸಿಎ ತೇಜಸ್‌ನಂತಹ ಸ್ವದೇಶಿ ಉತ್ಪನ್ನಗಳ ಸಾಲುಗಳನ್ನು ಹೊಂದಿರುವ ಹೈಟೆಕ್ ಕಂಪನಿಯಾಗಿ ರೂಪುಗೊಂಡಿದೆ.

ನೀತಿ ಬದಲಾವಣೆ

ಕಳೆದ ಕೆಲವು ವರ್ಷಗಳಲ್ಲಿ ಕೇಂದ್ರ ಸರ್ಕಾರ ಹಲವು ನೀತಿಗಳಲ್ಲಿ ಬದಲಾವಣೆ ತಂದು ಮಹತ್ವದ ಉಪಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ರಕ್ಷಣಾ ಸಾಧನಗಳ ತಯಾರಿಕೆಗೆ ಉತ್ತೇಜನ ನೀಡಿ ಬಹಳಷ್ಟು ಸುಧಾರಣೆ ಮಾಡಿದೆ. ಇದರಿಂದಾಗಿ ದೇಶದಲ್ಲಿ ರಕ್ಷಣಾ ಉತ್ಪಾದನೆ ಮತ್ತು ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವತ್ತ ಹೆಜ್ಜೆ ಇಟ್ಟಿದೆ. ಈ ಉಪಕ್ರಮಗಳು, ಅಂತರ–ಉಪನಾಮ (inter-alia), 2020ರ ರಕ್ಷಣಾ ಸ್ವಾಧೀನ ಪ್ರಕ್ರಿಯೆ (DAP) ಅಡಿಯಲ್ಲಿ ದೇಶೀಯ ಮೂಲಗಳಿಂದ ಬಂಡವಾಳ ವಸ್ತುಗಳ ಸಂಗ್ರಹಣೆಗೆ ಆದ್ಯತೆ ನೀಡಿ 70:30 ಅನುಪಾತದಲ್ಲಿ ಆಮದು ಮತ್ತು ರಫ್ತಿಗೆ ಕಾರಣವಾಗಿದೆ.



ಉದ್ಯಮ ನೇತೃತ್ವದಲ್ಲಿ ವಿನ್ಯಾಸ ಮತ್ತು ಅಭಿವೃದ್ಧಿಗಾಗಿ 18 ಪ್ರಮುಖ ರಕ್ಷಣಾ ವೇದಿಕೆಗಳ ಘೋಷಣೆಯನ್ನು ಮಾರ್ಚ್ 22ರಲ್ಲಿ ಮಾಡಲಾಯಿತು. ರಕ್ಷಣಾ ಸಾರ್ವಜನಿಕ ವಲಯದ ಉದ್ಯಮಗಳಿಗೆ (DPSUs)ಮತ್ತು ಸೇವೆಗಳಿಗೆ 'ಧನಾತ್ಮಕ ಸ್ವದೇಶೀಕರಣ ಪಟ್ಟಿಗಳ' ಅಧಿಸೂಚನೆ ಹೊರಡಿಸಲಾಯಿತು. ಆದರೆ, ಇದಕ್ಕಾಗಿ ಸಮಯೋಚಿತತೆ ಮೀರಿ ಆಮದು ಮಾಡಿಕೊಳ್ಳಲು ನಿರ್ಬಂಧವಿರುತ್ತದೆ.

ಕಾರ್ಯತಂತ್ರದ ಸ್ವಾಯತ್ತತೆ, ಭದ್ರತೆ

1940ರ ದಶಕದಲ್ಲಿ ಮಿತ್ರ ಪಡೆಗಳಿಗೆ MRO ಆಗಿ ಎಚ್‌ಎಎಲ್ ಪ್ರಾರಂಭಿಸಲಾಯಿತು. 60 ರ ದಶಕದ ಆರಂಭದಲ್ಲಿ ಮೊದಲ ಸ್ವದೇಶಿ ಸೂಪರ್‌ಸಾನಿಕ್ ಫೈಟರ್ 'ಹಿಂದೂಸ್ತಾನ್ ಫೈಟರ್ - 24 (ಮಾರುತ್)'ದ ಅನ್ನು ಎಚ್‌ಎಎಲ್ ಉತ್ಪಾದಿಸುತ್ತದೆ ಎಂದು ಕೆಲವೇ ಕೆಲವರು ಎಣಿಸಿದ್ದರು. ಆದಾಗ್ಯೂ, 70 ಮತ್ತು 80 ರ ದಶಕದಲ್ಲಿ, ಭೌಗೋಳಿಕ ರಾಜಕೀಯ ಒತ್ತಡಗಳಿಂದ ದೇಶದ ಗಮನ ತಯಾರಿಕೆ ಪರವಾನಗಿ ಕಡೆಗೆ ಬದಲಾಯಿತು.



90 ರ ದಶಕದಲ್ಲಿ LCA ತೇಜಸ್ ಮತ್ತು ALH ಧ್ರುವ ವಿನ್ಯಾಸವು ದೇಶವನ್ನು ಸ್ವದೇಶೀಕರಣದತ್ತ ಕೊಂಡೊಯ್ದರೆ, 2014 ರಲ್ಲಿ 'ಮೇಕ್ ಇನ್ ಇಂಡಿಯಾ' ಉಪಕ್ರಮದ ಮೂಲಕ ಸ್ಥಳೀಯ ಸಾಮರ್ಥ್ಯ ಮತ್ತು ಸಾಮರ್ಥ್ಯದ ಅಭಿವೃದ್ಧಿಗೆ ನೈಜ ಪೂರಕ ಆಗಿದೆ. ಮೇಕ್ ಇನ್ ಇಂಡಿಯಾ ಉಪಕ್ರಮಗಳು HAL ಗೆ ಪರವಾನಗಿ / ToT ಉತ್ಪಾದನೆಗೆ ಉತ್ಪಾದನಾ ಏಜೆನ್ಸಿಯಿಂದ ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ಸ್ಥಿರ ಮತ್ತು ರೋಟರಿ ವಿಂಗ್ ಪ್ಲಾಟ್‌ಫಾರ್ಮ್‌ಗಳ ಉತ್ಪಾದನೆಯ ಮೂಲಕ ಉನ್ನತ ತಂತ್ರಜ್ಞಾನ ಪರಿಹಾರಗಳ ಸಮಗ್ರ ಪೂರೈಕೆದಾರರಾಗಿ ರೂಪಾಂತರಗೊಳ್ಳಲು ಸಹಾಯ ಮಾಡಿದೆ.

ಆದರೆ, ಮೇಕ್ ಇನ್ ಇಂಡಿಯಾ ಉಪಕ್ರಮವು ರಕ್ಷಣಾ ಯೋಜನೆಗಳಲ್ಲಿ ದೇಶೀಯತೆ ಹೆಚ್ಚಿಸುವುದನ್ನು ಕಡ್ಡಾಯಗೊಳಿಸಿದೆ. ಅದಕ್ಕನುಗುಣವಾಗಿ ಎಚ್‌ಎಎಲ್ ಸ್ವದೇಶಿ ವಿಷಯದೊಂದಿಗೆ ಹೊಸ ಪ್ಲಾಟ್‌ಫಾರ್ಮ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಪ್ರತಿಕ್ರಿಯಿಸಿದೆ. ಇದಕ್ಕೆ ಲಘು ಯುದ್ಧ ವಿಮಾನ ತೇಜಸ್, ಹಿಂದೂಸ್ತಾನ್ ಟರ್ಬೊ ಟ್ರೈನರ್-40, ಲೈಟ್ ಯುದ್ಧ ಹೆಲಿಕಾಪ್ಟರ್ ಪ್ರಚಂಡ್, ಲೈಟ್ ಯುಟಿಲಿಟಿ ಹೆಲಿಕಾಪ್ಟರ್, ಅಡ್ವಾನ್ಸ್‌ಡ್ ಲೈಟ್ ಹೆಲಿಕಾಪ್ಟರ್ ಧ್ರುವ್ ಸಾಕ್ಷಿಯಾಗಿವೆ.

ಸ್ವಾವಲಂಬನೆ ಮತ್ತು ಸ್ವದೇಶಿ ಸಾಮರ್ಥ್ಯ ನಿರ್ಮಾಣ

ಈ ಉಪಕ್ರಮವು ಭಾರತದ ರಕ್ಷಣಾ ಉತ್ಪಾದನಾ ಸಾಮರ್ಥ್ಯಗಳನ್ನು ಗಣನೀಯವಾಗಿ ಹೆಚ್ಚಿಸಿದ್ದು, 2023-24ನೇ ಸಾಲಿನ ವಿತ್ತೀಯ ವರ್ಷದಲ್ಲಿ, ರಕ್ಷಣಾ ಉತ್ಪಾದನಾ ಮೌಲ್ಯ ಸುಮಾರು ₹1.27 ಲಕ್ಷ ಕೋಟಿಗಳನ್ನು ತಲುಪಿದೆ. ಇದು ಹಿಂದಿನ ಹಣಕಾಸು ವರ್ಷಕ್ಕಿಂತ ಶೇ.16.7 ಬೆಳವಣಿಗೆ ಕಂಡಿರುವುದನ್ನು ಸೂಚಿಸುತ್ತದೆ. ಕಳೆದ ಐದು ವರ್ಷಗಳಲ್ಲಿ ಎಚ್‌ಎಎಲ್ ಶೇ.60 ರಷ್ಟು ಪ್ರಗತಿ ಸಾಧಿಸಿದೆ. ಶೇ.23.7ರಷ್ಟು ಪಾಲು ನೀಡುವ ಮೂಲಕ ರಕ್ಷಣಾ ವಲಯದ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

2019-20ರ ಆರ್ಥಿಕ ವರ್ಷದಲ್ಲಿ ಉತ್ಪಾದನೆಯ ಮೌಲ್ಯವು ₹20,590 ಕೋಟಿ ಇದ್ದದ್ದು 2023-24ರ ಹಣಕಾಸು ವರ್ಷದಲ್ಲಿ ₹30,118 ಕೋಟಿಗಳವರೆಗೆ ಬೆಳೆದಿದೆ. ಒಟ್ಟಾರೆ, ವಿದೇಶಿ OEM ಗಳ ಮೇಲಿನ ಅವಲಂಬನೆ ಯಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ. ಮೇಕ್ ಇನ್ ಇಂಡಿಯಾ ಉಪಕ್ರಮದ ಸ್ವದೇಶೀಕರಣದ ಪ್ರಯತ್ನಗಳಿಂದ ಎಚ್‌ಎಎಲ್ ಕಳೆದ ಹತ್ತು ವರ್ಷಗಳಲ್ಲಿ ಚುರುಕುತನ ಕಂಡುಕೊಂಡಿದ್ದು, ಭೌಗೋಳಿಕ ರಾಜಕೀಯ ಪರಿಸ್ಥಿತಿಯಿಂದಾಗಿ ಪೂರೈಕೆ ಸರಪಳಿ (supply chain) ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಪಡೆದಿದೆ. ಅಲ್ಲದೆ, ವಾರ್ಷಿಕ ವಿದೇಶಿ ವಿನಿಮಯ ಉಳಿತಾಯದಲ್ಲಿ ನಾಲ್ಕು ಪಟ್ಟು ಹೆಚ್ಚಳ ಹಾಗೂ ಮಾರಾಟಗಾರರ ನೆಲೆಯಲ್ಲಿ ಬಹುಪಾಲು ಹೆಚ್ಚಳವಾಗಿರುವುದು ಕಂಡುಬಂದಿದೆ.

ವಿದೇಶಿ ನೇರ ಹೂಡಿಕೆ ಹೆಚ್ಚಳ– ತಂತ್ರಜ್ಞಾನ ವರ್ಗಾವಣೆ

ವಿದೇಶಿ ನೇರ ಹೂಡಿಕೆಗೆ (FDI) ವಲಯ ಉಪಕ್ರಮದಿಂದ ಶೇ.74 ವರೆಗೆ ಸ್ವಯಂಚಾಲಿತ ಮಾರ್ಗದ ಮೂಲಕ ಹಾಗೂ ಶೇ.100 ರಷ್ಟು ನಿರ್ದಿಷ್ಟ ಸಂದರ್ಭಗಳಲ್ಲಿ ಸರ್ಕಾರದ ಅನುಮೋದನೆ ಮೇರೆಗೆ ಅನುಮತಿ ನೀಡಲಾಗಿದೆ. ಇದು ಭಾರತೀಯ ಕಂಪನಿಗಳು ಮತ್ತು ಜಾಗತಿಕ ಏರೋಸ್ಪೇಸ್ ಹಾಗೂ ರಕ್ಷಣಾ ದೈತ್ಯರ ನಡುವೆ ಜಂಟಿ ಉದ್ಯಮಗಳು, ಪಾಲುದಾರಿಕೆಗಳು ಮತ್ತು ತಂತ್ರಜ್ಞಾನ ವರ್ಗಾವಣೆಗಳಿಗೆ ಕಾರಣವೂ ಆಗಿದೆ. ಇದರಿಂದ ಭಾರತೀಯ ತಯಾರಕರು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಜೂನ್ 2023 ರಲ್ಲಿ ಅಮೆರಿಕದ ಜನರಲ್ ಎಲೆಕ್ಟ್ರಿಕ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ ಎಚ್‌ಎಎಲ್ ಶೇ.80 ರಷ್ಟು ತಂತ್ರಜ್ಞಾನ ವರ್ಗಾವಣೆಯೊಂದಿಗೆ LCA MK2 ಏರ್‌ಕ್ರಾಫ್ಟ್‌ಗಾಗಿ ಭಾರತದಲ್ಲಿ GE-414 ಏರೋ-ಎಂಜಿನ್‌ನ ToT ಮತ್ತು ತಯಾರಿಕೆಯ ಒಪ್ಪಂದಕ್ಕೆ ಸಹಿ ಹಾಕಿದೆ. 50:50ರ ಸರಾಸರಿಯಲ್ಲಿ ಜಂಟಿ ಉದ್ಯಮ 'SAFHAL ಹೆಲಿಕಾಪ್ಟರ್ ಇಂಜಿನ್ಸ್ ಪ್ರೈ. ಲಿಮಿಟೆಡ್' ಭಾರತೀಯ ಮಲ್ಟಿ ರೋಲ್ ಹೆಲಿಕಾಪ್ಟರ್ ಮತ್ತು ಡೆಕ್ ಬೇಸ್ಡ್ ಮಲ್ಟಿ ರೋಲ್ ಹೆಲಿಕಾಪ್ಟರ್‌ಗಾಗಿ ಇಂಜಿನ್‌ಗಳ ಸ್ಥಳೀಯ ವಿನ್ಯಾಸ ಮತ್ತು ಅಭಿವೃದ್ಧಿಗಾಗಿ ನವೆಂಬರ್ 2023 ರಲ್ಲಿ ಫ್ರಾನ್ಸ್‌ನ ಸಫ್ರಾನ್ ಹೆಲಿಕಾಪ್ಟರ್ ಎಂಜಿನ್‌ಗಳೊಂದಿಗೆ ರಚಿಸಲಾಗಿದೆ.

ರಕ್ಷಣಾ ರಫ್ತುಗಳಲ್ಲಿ ಉತ್ತೇಜನ

ಭಾರತೀಯ ನಿರ್ಮಿತ ರಕ್ಷಣಾ ಮತ್ತು ಏರೋಸ್ಪೇಸ್ ಉತ್ಪನ್ನಗಳಿಗೆ ರಫ್ತು ಅವಕಾಶಗಳನ್ನು ಹೆಚ್ಚಿಸಿರುವುದರಿಂದ ರಕ್ಷಣಾ ರಫ್ತು ಗಮನಾರ್ಹ ಏರಿಕೆ ಕಂಡಿಕೊಂಡಿದೆ. ಇದು 2023-24ರಲ್ಲಿ ₹21,083 ಕೋಟಿಗೆ ತಲುಪಿದೆ. ಒಟ್ಟಾರೆ, ಕಳೆದ ಹಣಕಾಸು ವರ್ಷಕ್ಕಿಂತ ಶೇ. 32.5ರಷ್ಟು ಹೆಚ್ಚಳವಾಗಿರುವುದು ಕಂಡುಬಂದಿದೆ.

ಎಚ್‌ಎಎಲ್ 2 ಹಿಂದೂಸ್ತಾನ್ 228 ವಿಮಾನಗಳನ್ನು ಗಯಾನಾ ರಕ್ಷಣಾ ಪಡೆಗಳಿಗೆ ರಫ್ತು ಮಾಡಿದ್ದಲ್ಲದೆ, ಸ್ಥಳೀಯ ವೇದಿಕೆಗಳನ್ನು ಉತ್ತೇಜಿಸುವ ಸಲುವಾಗಿ ಜುಲೈ 2023 ರಲ್ಲಿ ಮಲೇಷ್ಯಾದ ಕೌಲಾಲಂಪುರ್‌ನಲ್ಲಿ ಹೊಸ ಪ್ರಾದೇಶಿಕ ಮಾರುಕಟ್ಟೆ ಕಚೇರಿ ಸ್ಥಾಪಿಸಿದೆ. ಈ ಪ್ರಾದೇಶಿಕ ಕಚೇರಿಯು ಇತರ ಆಗ್ನೇಯ ಏಷ್ಯಾದ ದೇಶಗಳೊಂದಿಗೆ ಸಂಸ್ಥೆ ತೊಡಗಿಸಿಕೊಳ್ಳುವಿಕೆಗೆ ಹಾಗೂ ಇತರ ಭಾರತೀಯ ರಕ್ಷಣಾ PSUಗಳಿಗೆ ದಾರಿಯಾಗಿ ಕಾರ್ಯನಿರ್ವಹಿಸುತ್ತದೆ.

ಸಣ್ಣ ಮತ್ತು ಮಧ್ಯಮ ಉದ್ಯಮಗಳ (SME) ಆರ್ಥಿಕ ಪ್ರಯೋಜನಗಳು ಮತ್ತು ಬೆಳವಣಿಗೆ ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ವಲಯವು ಉತ್ತೇಜಿಸಿದೆ. ಖಾಸಗಿ ಪಾಲುದಾರಿಕೆಗಳ ಮೂಲಕ ಪ್ರಮುಖ ಏರೋಸ್ಪೇಸ್ ಇಂಟಿಗ್ರೇಟರ್ ಆಗುವ ಗುರಿಯನ್ನು HAL ಹೊಂದಿದೆ. ಸಂಸ್ಥೆ ಖಾಸಗಿ ಕೈಗಾರಿಕೆಗಳನ್ನು (MSME) ಒಳಗೊಂಡಂತೆ ಬೆಂಬಲಿಸುತ್ತಿದೆ.

ಉದ್ಯೋಗ ಸೃಷ್ಟಿ ಮತ್ತು ಕೌಶಲ್ಯ ಅಭಿವೃದ್ಧಿ

ಮೇಕ್ ಇನ್ ಇಂಡಿಯಾ ಉಪಕ್ರಮ ಏರೋಸ್ಪೇಸ್ ಹಾಗೂ ರಕ್ಷಣಾ ವಲಯದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ. ಏರೋಸ್ಪೇಸ್ ವಲಯದಲ್ಲಿ ನುರಿತ ಕಾರ್ಮಿಕರ ಬೇಡಿಕೆಯು ಉತ್ಪಾದನೆ ಮತ್ತು ಅಸೆಂಬ್ಲಿ ಲೈನ್‌ಗಳಿಗೆ ಉನ್ನತಮಟ್ಟದ ಸಂಶೋಧನಾ ಮತ್ತು ಅಭಿವೃದ್ಧಿಯನ್ನು ಹೆಚ್ಚಿಸಿದೆ.

ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ವಿಶೇಷ ಕಾರ್ಯಪಡೆಯ ಅಭಿವೃದ್ಧಿಯ ಅಗತ್ಯವನ್ನು ಪರಿಹರಿಸಲು ಮತ್ತು ವಿನ್ಯಾಸ ಮತ್ತು ಅಭಿವೃದ್ಧಿ, ಉತ್ಪಾದನೆಗೆ MRO, ಮುಂತಾದ ಕ್ಷೇತ್ರಗಳಲ್ಲಿ ಕೌಶಲ್ಯಪೂರ್ಣ ಮಾನವಶಕ್ತಿಯ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವನ್ನು ನಿವಾರಿಸಲು HAL ಏರೋಸ್ಪೇಸ್ ಮತ್ತು ಏವಿಯೇಷನ್ ಸೆಕ್ಟರ್ ಸ್ಕಿಲ್ ಕೌನ್ಸಿಲ್ (AASSC) ಅನ್ನು ರಚಿಸಿದೆ.

ಭಾರತೀಯ ರಕ್ಷಣಾ ಸೇವೆಗಳು, DRDO, ADA, ADE, RCMA, DGAQA, DGCA, ಉದ್ಯಮ ಪಾಲುದಾರರು ಮತ್ತು MSME ಗಳಂತಹ ಮಧ್ಯಸ್ಥಗಾರರ ಸಕ್ರಿಯ ಬೆಂಬಲದಿಂದಾಗಿ HAL ನಲ್ಲಿ ಮೇಕ್ ಇನ್ ಇಂಡಿಯಾ ಉಪಕ್ರಮಗಳು ಸಾಧ್ಯವಾಗಿದೆ.

ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಎಚ್‌ಎಎಲ್‌ನ ಯಶಸ್ಸು ಸರ್ಕಾರದಿಂದ ಬಂದ ಆದೇಶಗಳಿಂದ ಉತ್ತೇಜಿಸಲ್ಪಟ್ಟಿದೆ. ಇದು ರಾಷ್ಟ್ರದ ರಕ್ಷಣೆ ಮತ್ತು ಆರ್ಥಿಕ ಭವಿಷ್ಯವನ್ನು ರೂಪಿಸುವಲ್ಲಿ ಉತ್ತಮವಾಗಿ ಕಾರ್ಯಗತಗೊಳಿಸಿದ ಕೈಗಾರಿಕಾ ನೀತಿಯ ಶಕ್ತಿಗೆ ಸಾಕ್ಷಿಯಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

www.hal-india.co.in | @HALHQBLR

'ಸಿದ್ದರಾಮಯ್ಯ ತಮ್ಮ ಕಾಲು ಮೇಲೆ ಕಲ್ಲು ಹಾಕಿಕೊಂಡಿದ್ದಾರೆ'

ಪ್ರಜಾವಾಣಿ ವಾರ್ತೆ

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಕಾಲು ಮೇಲೆ ತಾವೇ ಕಲ್ಲು ಹಾಕಿಕೊಳ್ಳುತ್ತಿದ್ದಾರೆ. ಒಂದು ತಪ್ಪು ಮುಚ್ಚಿಕೊಳ್ಳಲು ಮತ್ತಷ್ಟು ತಪ್ಪು ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ಸಿಬಿಐ ತನಿಖೆ ನಡೆಸುವ ಮುನ್ನ ರಾಜ್ಯ ಸರ್ಕಾರದ ಒಪ್ಪಿಗೆ ಪಡೆಯಬೇಕು' ಎಂದು ಸಚಿವ ಸಂಪುಟ ಕೈಗೊಂಡ ನಿರ್ಧಾರದ ಬಗ್ಗೆ ಪ್ರತಿಕ್ರಿಯಿಸಿದರು.

ರಾಜ್ಯ ಸರ್ಕಾರ ಇಂತಹ ನಿರ್ಧಾರ ತೆಗೆದುಕೊಂಡಾಗ ನ್ಯಾಯಾಂಗವಿದೆ. ಅದರ ಮೇಲೆ ಇನ್ನೊಂದು ಇರುತ್ತದೆ. ಸಿಬಿಐ ನಿರ್ಬಂಧಿಸಿ ದಿಢೀರ್ ನಿರ್ಧಾರ ಕೈಗೊಳ್ಳಲಾಗಿದೆ. ಇಂತಹ ನಿರ್ಧಾರ ಒಳ್ಳೆಯದಲ್ಲ ಎಂದು ಅಭಿಪ್ರಾಯಪಟ್ಟರು.

ತುಮಕೂರು– ಯಶವಂತಪುರ ಮೆಮು ರೈಲು ಸಂಚಾರ ಆರಂಭ: ಕೇಂದ್ರ ಸಚಿವ ವಿ. ಸೋಮಣ್ಣ

ಬೆಂಗಳೂರು ರೈಲ್ವೆ ಮಾರ್ಗ ಚತುಷ್ಪಥ

ಪ್ರಜಾವಾಣಿ ವಾರ್ತೆ

ತುಮಕೂರು: 'ತುಮಕೂರು-ಬೆಂಗಳೂರು ನಡುವೆ ಚತುಷ್ಪಥ ರೈಲು ಮಾರ್ಗ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಭರವಸೆ ನೀಡಿದರು.

ನಗರದ ರೈಲು ನಿಲ್ದಾಣದಲ್ಲಿ ಶುಕ್ರವಾರ ತುಮಕೂರು–ಯಶವಂತಪುರ ನಡುವಿನ ಹೊಸ ಮೆಮು ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿಸಿದ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

ತುಮಕೂರು– ಬೆಂಗಳೂರು ನಡುವೆ ಪ್ರಸ್ತುತ ದ್ವಿಪಥ ಮಾರ್ಗವಿದೆ. ದಟ್ಟಣೆ ಹೆಚ್ಚುತ್ತಲೇ ಇದೆ. ಜತೆಗೆ ಬೆಂಗಳೂರಿಗೆ ತುಮಕೂರು ಪರ್ಯಾಯ ನಗರವಾಗಿ ಬೆಳೆಯುತ್ತಿದೆ. ಮುಂದಿನ ಬೆಳವಣಿಗೆ ದೃಷ್ಟಿಯಿಂದ ಚತುಷ್ಪಥ ರೈಲು ಮಾರ್ಗ ನಿರ್ಮಾಣ ಮಾಡಲಾಗುವುದು ಎಂದರು.

ತುಮಕೂರು– ದಾವಣಗೆರೆ ಹಾಗೂ ತುಮಕೂರು– ರಾಯದುರ್ಗ ರೈಲ್ವೆ ಮಾರ್ಗವನ್ನು 2027ರ ಮಾರ್ಚ್ ಒಳಗೆ ಪೂರ್ಣಗೊಳಿಸಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕರೆತಂದು ಉದ್ಘಾಟನೆ ಮಾಡಿಸಲಾಗುವುದು. ತುಮಕೂರು– ಅರಸೀಕೆರೆ ಮಾರ್ಗದಲ್ಲಿ ₹220ಕೋಟಿ ವೆಚ್ಚದಲ್ಲಿ ಸ್ವಯಂಪ್ರೇರಿತ ಸಿಗ್ನಲ್ ಅಳವಡಿಸುವ ಯೋಜನೆಯನ್ನೂ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

ರೈಲು ಸಂಚಾರ ಸಮಯ

ಮೆಮು ರೈಲು ನಗರದಿಂದ ಬೆಳಿಗ್ಗೆ 8.45ಕ್ಕೆ ಹೊರಟು 10.25 ಗಂಟೆಗೆ ಯಶವಂತಪುರ ತಲುಪಲಿದೆ. ಸಂಜೆ 5.40ಕ್ಕೆ ಹೊರಟು ರಾತ್ರಿ 7.05 ಗಂಟೆಗೆ ತುಮಕೂರಿಗೆ ಬರಲಿದೆ. ಭಾನುವಾರ ಸಂಚಾರ ಇರುವುದಿಲ್ಲ. ಎಲ್ಲಾ ನಿಲ್ದಾಣದಲ್ಲೂ ನಿಲುಗಡೆ ಇರಲಿದೆ.

ಪ್ರತಿ ಸೋಮವಾರ (ವಾರಕ್ಕೊಮ್ಮೆ) ಬೆಂಗಳೂರು ಬಾಣಸವಾಡಿಯಿಂದ ಬೆಳಿಗ್ಗೆ 6.15ಕ್ಕೆ ಮತ್ತೊಂದು ಮೆಮು ರೈಲು ಚಿಕ್ಕಬಾಣಾವರದ ಮೂಲಕ (ಯಶವಂತಪುರದ ಮೂಲಕ ಅಲ್ಲ) ಸಂಚರಿಸಲಿದೆ. ಬೆಳಿಗ್ಗೆ 8.35ಕ್ಕೆ ತುಮಕೂರು ತಲುಪಲಿದೆ. ಪ್ರತಿ ಶನಿವಾರ (ವಾರಕ್ಕೊಮ್ಮೆ) ರಾತ್ರಿ 7.40ಕ್ಕೆ ತುಮಕೂರಿನಿಂದ ಹೊರಟು ರಾತ್ರಿ 10.05ಕ್ಕೆ ಬಾಣಸವಾಡಿ ತಲುಪಲಿದೆ.



ತುಮಕೂರು ರೈಲು ನಿಲ್ದಾಣದಲ್ಲಿ ಶುಕ್ರವಾರ ತುಮಕೂರು– ಯಶವಂತಪುರ ನಡುವಿನ ಹೊಸ ಮೆಮು ರೈಲು ಸಂಚಾರಕ್ಕೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹಸಿರು ನಿಶಾನೆ ತೋರಿದರು

ಬ್ಲಾಕ್‌ಮೇಲ್ ಸಂಘಗಳ ಹೆಚ್ಚಳ: ಹೈಕೋರ್ಟ್ ಆತಂಕ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಸಮಾಜದಲ್ಲಿ ಬ್ಲಾಕ್‌ಮೇಲ್ ಮಾಡುವ ಸಂಘಗಳ ಹಾವಳಿ ಹೆಚ್ಚಾಗಿದೆ' ಎಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, 'ಇಂತಹದ್ದಕ್ಕೆಲ್ಲಾ ಅವಕಾಶ ಸಿಗಬಾರದು. ಸರ್ಕಾರ ಕೂಡಲೇ ಇಂತಹ ಸಂಘಗಳಿಗೆ ಕಡಿವಾಣ ಹಾಕಬೇಕು' ಎಂದು ಖಡಕ್ಕಾಗಿ ಎಚ್ಚರಿಸಿದೆ.

'ಕರ್ನಾಟಕ ರಾಜ್ಯ ಎಲ್‌ಪಿಜಿ ಗ್ರಾಹಕರ ಸಂಘ'ದ ಹೆಸರಲ್ಲಿ ಸಲ್ಲಿಕೆ ಆಗಿದ್ದ ಅರ್ಜಿಯೊಂದನ್ನು ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪೀಠವು, ಅರ್ಜಿದಾರರಾದ ಉಡುಪಿ ಜಿಲ್ಲೆಯ ಬಡಗಬೆಟ್ಟಿನ, 'ಕರ್ನಾಟಕ ರಾಜ್ಯ ಎಲ್‌ಪಿಜಿ ಗ್ರಾಹಕರ ಸಂಘ'ದ ಶೀರ್ಷಿಕೆ ಗಮನಿಸಿ, 'ಇದೇನಿದು, ಇದ್ಯಾವ ಸಂಘ, ಗ್ರಾಹಕರ ಅನುಮತಿ ಇಲ್ಲದೆ ಈ ಸಂಘ ಅಧಿಕಾರ ಚಲಾಯಿಸುತ್ತಿದೆ' ಎಂದು ಹೇಳಿತು.

'ಇಂತಹ ಸಂಘಗಳ ಹೆಸರಲ್ಲಿ ಬ್ಲಾಕ್‌ಮೇಲ್ ಮಾಡಬೇಡಿ. ಅಷ್ಟಕ್ಕೂ ಸಹಕಾರ ಸಂಘಗಳ ನೋಂದಣಿ ಕಾಯ್ದೆಯಡಿ ಇಂತಹ ಸಂಘ ಸ್ಥಾಪಿಸಲು ಅವಕಾಶ ಇದೆಯೇ? ಇಂತಹುದ್ದೊಂದು ಸಂಘ ಅಸ್ತಿತ್ವಕ್ಕೆ ಬರಲು ಅವಕಾಶ ಸಿಕ್ಕಿದ್ದಾದರೂ ಹೇಗೆ? ಅವಕಾಶ ಕೊಟ್ಟವರು ಯಾರು? ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದೂ ತಾಕೀತು ಮಾಡಿತು.

ಅರ್ಜಿಯಲ್ಲಿ ಸಹಕಾರ ಸಂಘಗಳ ನೋಂದಣಿಗೆ ಸಂಬಂಧಿಸಿದ ಅಧಿಕಾರಿಯನ್ನು ಪ್ರತಿವಾದಿಯನ್ನಾಗಿ ಮಾಡಲು ಅರ್ಜಿದಾರರಿಗೆ ಸೂಚಿಸಿದ ನ್ಯಾಯಪೀಠ ಈ ಸಂಬಂಧ ವರದಿ ಸಲ್ಲಿಸಿ ಎಂದು ಸರ್ಕಾರದ ವಕೀಲರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.



ನಗರದ ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಮುರಳೀಧರ ಬಿ.ಎಲ್.(ಬಲ ಬದಿ)ಅವರ 'ಮನಸು ಮನಸಿನಾ ಮಾತು' ಪುಸ್ತಕ ಬಿಡುಗಡೆಯನ್ನು ಕವಿ ಮೂಡ್ನಾಕೂಡು ಚಿನ್ನಸ್ವಾಮಿ (ಎಡದಿಂದ ಎರಡನೆಯವರು) ನೆರವೇರಿಸಿದರು. ಎಡದಿಂದ ವಿಮರ್ಶಕ ಎಚ್. ದಂಡಪ್ಪ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ., ಚಿಂತಕ ಬಂಜಗೆರೆ ಜಯಪ್ರಕಾಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಐಎಫ್‌ಎಸ್ ಅಧಿಕಾರಿ ವಿರುದ್ಧ ಕ್ರಮಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕನ್ನಡದ ಕಾಳಿ ಹುಲಿ ಅಭಯಾರಣ್ಯದಲ್ಲಿ ಪ್ರವಾಸೋದ್ಯಮ ಚಟುವಟಿಕೆಗೆ ನಿಯಮಬಾಹಿರವಾಗಿ ಅನುವು ಮಾಡಿಕೊಟ್ಟ ಆರೋಪದಲ್ಲಿ ಐಎಫ್‌ಎಸ್ ಅಧಿಕಾರಿ ಮರಿಯಾ ಕ್ರಿಸ್ತು ರಾಜ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕದ ಮುಖ್ಯ ಕಾರ್ಯದರ್ಶಿ ಅವರಿಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ನಿರ್ದೇಶನ ನೀಡಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಉಲ್ಲಂಘಿಸಿ ಹಲವು ಕಾಮಗಾರಿಗಳನ್ನು ನಡೆಸಿರುವ ಮರಿಯಾ ಕ್ರಿಸ್ತು ರಾಜ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಾಮಾಜಿಕ ಕಾರ್ಯಕರ್ತ ಅಕ್ಷೀವ್ ದೂರು ಸಲ್ಲಿಸಿದ್ದರು.

ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಪ್ರಧಾನಿಯವರ ಸಚಿವಾಲಯವು ಅರಣ್ಯ ಸಚಿವಾಲಯಕ್ಕೆ ಸೂಚಿಸಿತ್ತು. 'ಈ ಪ್ರಕರಣದಲ್ಲಿ ಐಎಫ್‌ಎಸ್ ಅಧಿಕಾರಿ ವಿರುದ್ಧ ಆರೋಪವಿದೆ. ಶಿಸ್ತು ಪ್ರಾಧಿಕಾರವಾಗಿರುವ ರಾಜ್ಯ ಸರ್ಕಾರವೇ ಕ್ರಮ ಕೈಗೊಳ್ಳಬೇಕಿದೆ. ನಿಯಮಗಳನ್ನು ಪರಿಶೀಲಿಸಿ ಅಧಿಕಾರಿ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸಚಿವಾಲಯವು ಸೆಪ್ಟೆಂಬರ್ 20ರಂದು ಪತ್ರ ಬರೆದು ಸೂಚಿಸಿದೆ.

ದೂರಿನಲ್ಲಿ ಏನಿತ್ತು?: 'ಹುಲಿ ಮೀಸಲು ಪ್ರದೇಶದ ಕೋರ್ ಪ್ರದೇಶವಾದ ನುಜ್ಜಿ ನರ್ಸರಿ ಪ್ರದೇಶದಲ್ಲಿ ಬೃಹತ್ ಮರಗಳನ್ನು ಕಡಿದು ಆರ್ಕಿಡೇರಿಯಂ ನಿರ್ಮಿಸಲಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಕೋರ್ ಪ್ರದೇಶದಲ್ಲಿ ಯಾವುದೇ ಹೊಸ ಪ್ರವಾಸಿ ನಿರ್ಮಾಣ ಕಾಮಗಾರಿಗೆ ಅನುವು ಮಾಡಿಕೊಡುವುದಿಲ್ಲ ಎಂದು ಎನ್‌ಟಿಸಿಎ ಈ ಹಿಂದೆಯೇ ತೀರ್ಮಾನ ತೆಗೆದುಕೊಂಡಿದೆ. ಆದರೆ, ಈ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಕಾಮಗಾರಿ ನಡೆಸಲಾಗಿದೆ' ಎಂದು ಅವರು ದೂರಿದ್ದರು.

'ಹುಲಿ ಸಂರಕ್ಷಣಾ ಯೋಜನೆಯಲ್ಲಿ ಉಲ್ಲೇಖವಿರದಿದ್ದರೂ ಕ್ಯಾಸಲ್ ರಾಕ್ ವಲಯದಲ್ಲಿ ಕಾನೂನುಬಾಹಿರವಾಗಿ ಜಂಗಲ್ ರೈಡ್ ಹೆಸರಿನಲ್ಲಿ ಕೆನೋಪಿ ವಾಕ್ ಪ್ರದೇಶ, ಪಾಪುಲ್ವಾಡಿ ಜಲಪಾತ ಪ್ರದೇಶ ಸೇರಿದಂತೆ ಹಲವೆಡೆ ಜಂಗಲ್ ಸಫಾರಿ ಆರಂಭಿಸಲಾಗಿದೆ. ಅನುಮತಿ ನೀಡಿರುವ ಚಾರಣ ಪಥಗಳನ್ನು ಹೊರತುಪಡಿಸಿ ಇನ್ನೂ ಐದು ದಾರಿಗಳಲ್ಲಿ ಅಕ್ರಮವಾಗಿ ಚಾರಣಕ್ಕೆ ಅವಕಾಶ ಕಲ್ಪಿಸಿದ್ದಾರೆ' ಎಂದು ದೂರಲಾಗಿತ್ತು.

'ಸೂಕ್ಷ್ಮ ವಲಯ: ವಿಸ್ತೀರ್ಣ ಇಳಿಕೆಗೆ ವಿರೋಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ವಲಯ ಪ್ರದೇಶವನ್ನು 16,114 ಚ. ಕಿ.ಮೀಗೆ ಇಳಿಸುವ ರಾಜ್ಯ ಸರ್ಕಾರದ ನಿಲುವನ್ನು ವಿರೋಧಿಸಿರುವ 'ಪರಿಸರಕ್ಕಾಗಿ ನಾವು' ಸಂಘಟನೆ, 'ಮಾಧವ ಗಾಡ್ಗೀಳ್ ಸಮಿತಿ ವರದಿ ಜಾರಿಗೊಳಿಸುವಂತೆ ಒತ್ತಾಯಿಸಿದೆ.

'ಸಚಿವ ಸಂಪುಟ ಸಭೆ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸುವ ತೀರ್ಮಾನ ತೆಗೆದುಕೊಂಡಿದೆ. ಆದರೆ, ಪಶ್ಚಿಮ ಘಟ್ಟಗಳ ಸಂರಕ್ಷಿಸುವ ಕುರಿತು ಯಾವುದೇ ಕ್ರಮಗಳನ್ನು ಪ್ರಸ್ತಾಪಿಸಿದ ಬಗ್ಗೆ ಸರ್ಕಾರ ಏನೂ ಹೇಳಿಲ್ಲ' ಎಂದು ದೂರಿದ್ದಾರೆ.

'ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಪಶ್ಚಿಮ ಘಟ್ಟಗಳ ವ್ಯಾಪ್ತಿಯ 11 ಜಿಲ್ಲೆಗಳ ಸಚಿವರು, ಶಾಸಕರ ಸಭೆಯಲ್ಲಿಯೂ ಇಂಥದ್ದೇ ಸಲಹೆಗಳು ವ್ಯಕ್ತವಾಗಿದ್ದವು.

ದಶಕಗಳಿಂದ ನಡೆಯುತ್ತಿರುವ ಪಶ್ಚಿಮ ಘಟ್ಟ ಉಳಿಸಿ ಆಂದೋಲನದ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳಿಗೆ ಅರಿವಿಲ್ಲ. ಘಟ್ಟದ ಜನರಿಂದಲೇ ಆರಿಸಿ ಹೋದ ಈ ಜನ ಪ್ರತಿನಿಧಿಗಳು ಯಾರ ಹಿತಾಸಕ್ತಿ ಪ್ರತಿನಿಧಿಸುತ್ತಿದ್ದಾರೆ? ಎಂದು ಪ್ರಶ್ನಿಸಿದ್ದಾರೆ.

'ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಎಲ್ಲಾ ಬಗೆಯ ಗಣಿಗಾರಿಕೆಯನ್ನು ತಕ್ಷಣ ನಿಷೇಧಿಸಬೇಕು ಮತ್ತು ಮರಗಳನ್ನು ಕಡಿದು ರಸ್ತೆ ವಿಸ್ತರಿಸುತ್ತಿರುವುದನ್ನು ನಿಲ್ಲಿಸಬೇಕು' ಎಂದು ಸಂಘಟನೆ ಪರವಾಗಿ, ದಿಲೀಪ್ ಕಾಮತ್, ಆರ್.ಪಿ. ವೆಂಕಟೇಶ್ ಮೂರ್ತಿ, ಶಾರದಾ ಗೋಪಾಲ್, ನಿತಿನ್ ಧೋಂಡ್, ನೈಲಾ ಕೊಯ್ಲಿಲೋ, ಪರಶುರಾಮೇಗೌಡ, ಮಮತಾ ರೈ, ಆಂಜನೇಯ ರೆಡ್ಡಿ, ಆರ್. ಶೋಭಾ ಭಟ್, ಪಾರ್ವತಿ ಶ್ರೀರಾಮ್, ಮಹೇಶ್ ಬಸಾಪುರ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಎಸ್‌.ಜೆ.ಎಸ್ ಎಂಟರ್‌ಪ್ರೈಸಸ್: 192 ಕಾರ್ಮಿಕರ ವಜಾಗೆ ಖಂಡನೆ

84ನೇ ದಿನಕ್ಕೆ ಕಾಲಿಟ್ಟ ಕಾರ್ಮಿಕರ ಧರಣಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ತಾತಗುಣಿಯಲ್ಲಿರುವ ಎಸ್.ಜೆ.ಎಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯ 192 ಕಾಯಂ ಕಾರ್ಮಿಕರನ್ನು ಕಾನೂನುಬಾಹಿರವಾಗಿ ವಜಾ ಮಾಡಿರುವ ಕ್ರಮವನ್ನು ಖಂಡಿಸಿ ನಡೆಸುತ್ತಿರುವ ಕಾರ್ಮಿಕರ ಧರಣಿ (ಸತ್ಯಾಗ್ರಹ) 84ನೇ ದಿನಕ್ಕೆ ಕಾಲಿಟ್ಟಿದೆ.

ಎಸ್ ಜೆ ಎಸ್ ಕಂಪನಿಯಲ್ಲಿ 1500 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಬಹುತೇಕರು ಕಾಯಂಗೊಂಡಿದ್ದಾರೆ. ಕೆಲವರನ್ನು ದಿನಗೂಲಿ ಮೇಲೆ ನೌಕರರು ದುಡಿಸಿಕೊಳ್ಳಲಾಗುತ್ತಿದೆ. ಕಂಪನಿಯಲ್ಲಿ ಸಕಾಲಕ್ಕೆ ವೇತನ ನೀಡದಿರುವುದು, ಮಹಿಳಾ ಕಾರ್ಮಿಕರಿಗೆ ಲೈಂಗಿಕ ಕಿರುಕುಳ ನೀಡುತ್ತಿರುವುದು ಸೇರಿದಂತೆ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು, ನ್ಯಾಯ ಕೇಳಲು ಕಾರ್ಮಿಕರು ಎಸ್.ಜೆ.ಎಸ್ ಎಂಟಪ್ರೈಸಸ್ ಲಿಮಿಟೆಡ್ ಕಾರ್ಮಿಕರ ಸಂಘ ಸ್ಥಾಪಿಸಿಕೊಂಡಿದ್ದಾರೆ. ಆ ಸಂಘದಲ್ಲಿ ಗುರುತಿಸಿಕೊಂಡಿರುವ 192 ಕಾಯಂ ಕಾರ್ಮಿಕರನ್ನು ಕಂಪನಿ ಏಕಾಏಕಿ ತೆಗೆದು ಹಾಕಿದ್ದು, ಆ ಕ್ರಮವನ್ನು ಖಂಡಿಸಿ ಕಾರ್ಮಿಕರು ಧರಣಿ ನಡಸುತ್ತಿದ್ದಾರೆ.

ನ್ಯಾಯಯುತ ಬೇಡಿಕೆಗೆ ಆಗ್ರಹಿಸಿದರೆ, ಕನ್ನಡಿಗ ಕಾರ್ಮಿರನ್ನು ತೆಗೆದುಹಾಕಿ ಗುಜರಾತ್, ಉತ್ತರಪ್ರದೇಶ, ಸಿಕ್ಕಿಂ, ಅಸ್ಸಾಂ, ಮಧ್ಯಪ್ರದೇಶದಿಂದ ದಿನಗೂಲಿ ನೌಕರರನ್ನು ಕರೆತಂದು ನೇಮಕ ಮಾಡಿಕೊಳ್ಳಲು ಕಂಪನಿ ಮುಂದಾಗಿದೆ ಎಂದು ಪ್ರತಿಭಟನಾ ನಿರತರು ಆರೋಪಿಸಿದರು.

ಪ್ರತಿಭಟನಾ ನಿರತರ ಆರೋಪಗಳಿಗೆ ಪ್ರತಿಕ್ರಿಯೆ ಕೇಳುವುದಕ್ಕಾಗಿ ಎಸ್‌ಜೆಎಸ್ ಕಂಪನಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಅಧಿಕಾರಿ ಉಮಾದೇವಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ಕರೆಯನ್ನು ಸ್ವೀಕರಿಸಲಿಲ್ಲ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಭೇಟಿಗೂ ಭದ್ರತಾ ಸಿಬ್ಬಂದಿ ಅವಕಾಶ ಮಾಡಿಕೊಡಲಿಲ್ಲ.



ಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿದ್ದು, 84ನೇ ದಿನಕ್ಕೆ ಕಾಲಿಟ್ಟಿದೆ

ಬಿಜೆಪಿಗೆ ಈಶ್ವರಪ್ಪ ಕರೆತರಲು ಯತ್ನಿಸಿಲ್ಲ: ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನಾನು ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೇರಿ ಕೆ.ಎಸ್. ಈಶ್ವರಪ್ಪ ಅವರನ್ನು ಮತ್ತೆ ಬಿಜೆಪಿಗೆ ಕರೆತರಲು ಯತ್ನಿಸುತ್ತಿದ್ದೇವೆ ಎಂಬುದು ಸುಳ್ಳು. ಈಶ್ವರಪ್ಪ ಅವರನ್ನು ಪಕ್ಷದಿಂದ ಹೊರಹಾಕಿದ್ದು ರಾಷ್ಟ್ರೀಯ ನಾಯಕರು. ಸೇರಿಸಿಕೊಳ್ಳ ಬೇಕಾದವರೂ ಅವರೇ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

'ಈಶ್ವರಪ್ಪ ಅವರ ಬೆಂಗಳೂರು ನಿವಾಸದಲ್ಲಿ ನಾವೆಲ್ಲ ಸೇರಿದ್ದು ನಿಜ. ಆದರೆ, ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಮತ್ತು ಕುರುಬ ಸಮಾಜಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿಯ ಬೇಡಿಕೆ ಕುರಿತು ಚರ್ಚಿಸಿದ್ದೇವೆ. ಆ ಸಭೆಯಲ್ಲಿದ್ದ ಮಾಜಿ ಶಾಸಕ ರಾಜೂಗೌಡ ಅವರ ಹೇಳಿಕೆ ಬರೀ ಸುಳ್ಳು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಅದು ಬಿಜೆಪಿಯ ಭಿನ್ನಮತೀಯರ ಸಭೆಯೂ ಅಲ್ಲ. ಬಿಜೆಪಿ ಅಥವಾ ಕಾಂಗ್ರೆಸ್ ಕುರಿತು ರಾಜಕೀಯ ಚರ್ಚೆಯೂ ಆಗಿಲ್ಲ. ಕಾಂಗ್ರೆಸ್ ಸರ್ಕಾರ ಬೀಳಿಸುವಂಥ ಯಾವುದೇ ಪ್ರಯತ್ನ ಕೂಡ ಮಾಡುತ್ತಿಲ್ಲ. ಬದಲಾಗಿ, ಮುಂದಿನ ಚುನಾವಣೆಯಲ್ಲಿ ಹೇಗೆ ಬಹುಮತ ಪಡೆಯಬೇಕು ಎಂಬ ಬಗ್ಗೆ ಚಿಂತಿಸುತ್ತಿದ್ದೇವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಏನು ಮಾಡುತ್ತಿದ್ದಾರೆ ಎಂಬುದು ನಮಗೆ ಬೇಕಿಲ್ಲ. ನಮ್ಮ ಪ್ರಯತ್ನದ ಬಗ್ಗೆ ಮಾತ್ರ ಮಾತನಾಡುತ್ತೇವೆ' ಎಂದೂ ಹೇಳಿದರು.

ನಾಗಮಂಗಲ ಗಲಭೆ: ಎಲ್ಲ ಆರೋಪಿಗಳಿಗೂ ಜಾಮೀನು

ಪ್ರಜಾವಾಣಿ ವಾರ್ತೆ

ಮಂಡ್ಯ: ನಾಗಮಂಗಲ ಪಟ್ಟಣದಲ್ಲಿ ಸೆ.11ರಂದು ಗಣೇಶ ವಿಗ್ರಹ ಮೆರವಣಿಗೆ ವೇಳೆ ನಡೆದ ಗಲಭೆ ಪ್ರಕರಣದ ಎಲ್ಲ 55 ಆರೋಪಿಗಳಿಗೂ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರು ಶುಕ್ರವಾರ ಜಾಮೀನು ಮಂಜೂರು ಮಾಡಿದ್ದಾರೆ.

ನ್ಯಾಯಾಂಗ ಬಂಧನದಲ್ಲಿದ್ದ ಹಿಂದೂ ಸಮುದಾಯದ 18 ಮತ್ತು ಮುಸ್ಲಿಂ ಸಮುದಾಯದ 37 ಆರೋಪಿಗಳಿಗೆ ಜಾಮೀನು ನೀಡಲಾಗಿದೆ.

'ಆರೋಪಿಗಳು ಈಗ ಜಿಲ್ಲಾ ಕಾರಾಗೃಹದಲ್ಲಿದ್ದಾರೆ. ₹1 ಲಕ್ಷ ಮೌಲ್ಯದ ಬಾಂಡ್ ಹಾಗೂ ಇಬ್ಬರ ಶ್ಯೂರಿಟಿ ನೀಡಿದ ನಂತರ ಅವರು ಕಾರಾಗೃಹದಿಂದ ಬಿಡುಗಡೆ ಆಗುತ್ತಾರೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಂಕ್ ನೋಟಿಸ್‌ಗೆ ಹೆದರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಪಾಂಡಪ್ಪ ಕೋರವನ್

ಚಿಂಚೋಳಿ (ಕಲಬುರಗಿ ಜಿಲ್ಲೆ): ಸಾಲ ತೀರಿಸುವಂತೆ ಬ್ಯಾಂಕಿನ ಅಧಿಕಾರಿಗಳು ವಕೀಲರ ಮೂಲಕ ಕಳುಹಿಸಿದ ನೋಟಿಸ್‌ಗೆ ಹೆದರಿ ತಾಲ್ಲೂಕಿನ ಪೊತಂಗಲ ಗ್ರಾಮದ ರೈತ ಪಾಂಡಪ್ಪ ತಿಪ್ಪಣ್ಣ ಕೋರವನ್ (45) ಗುರುವಾರ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೂರು ಎಕರೆ ಜಮೀನು ಹೊಂದಿದ್ದ ಪಾಂಡಪ್ಪ, ಕರ್ನಾಟಕ ಗ್ರಾಮೀಣ ಬ್ಯಾಂಕಿನ (ಕೆಜಿಬಿ) ನಿಡಗುಂದಾ ಶಾಖೆಯಲ್ಲಿ ₹ 1 ಲಕ್ಷ ಸಾಲ ಪಡೆದಿದ್ದರು. ಸಾಲ ತೀರಿಸುವಂತೆ ಬ್ಯಾಂಕ್ ಅಧಿಕಾರಿಗಳು ವಕೀಲರ ಮೂಲಕ ರೈತನಿಗೆ ಎರಡು ಬಾರಿ ನೋಟಿಸ್ ನೀಡಿದ್ದರು. ಎತ್ತುಗಳನ್ನು ಮಾರಾಟ ಮಾಡಿ ಸಾಲ ತೀರಿಸಲು ಮುಂದಾದಾಗ ಪತ್ನಿ ವಿರೋಧಿಸಿದ್ದಾರೆ. ಬ್ಯಾಂಕ್ ಸಾಲದ ಜತೆಗೆ ಖಾಸಗಿ ಸಾಲವೂ ಇತ್ತು.

ಹೊಲದಲ್ಲಿ ಮಳೆಯಿಂದ ತೊಗರಿ ಬೆಳೆ ಹಾಳಾಗಿದೆ. ಇನ್ನೊಂದೆಡೆ ಸಾಲ ತೀರಿಸಲು ಬ್ಯಾಂಕಿನವರು ನೋಟಿಸ್ ನೀಡಿದ್ದರಿಂದ ಪಾಂಡಪ್ಪ, ಮೂರು ದಿನಗಳಿಂದ ಖಿನ್ನತೆಗೆ ಒಳಗಾಗಿ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡಿದ್ದಾರೆ.

ಶೇ70-80ರಷ್ಟು ಸುಟ್ಟ ಗಾಯಗಳಿಂದ ನರಳುತ್ತಿದ್ದ ಅವರಿಗೆ ನಿಡಗುಂದಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸೇಡಂ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಕರೆತಂದಾಗ ನಿಧನರಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಪಾಂಡಪ್ಪ ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಕರ್ನಾಟಕ ಸರ್ಕಾರ

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628, ಫ್ಯಾಕ್ಸ್ : 080-22226630, ಇಮೇಲ್ : dultbangalore@gmail.com, dult@karnataka.gov.in

ಸಂಖ್ಯೆ: DULT-TECH/19/2024 ದಿನಾಂಕ: 27.09.2024

ಕೊನೆಯ ದಿನಾಂಕದ ವಿಸ್ತರಣೆಗಾಗಿ ಪ್ರಕಟಣೆ

ಮೈಸೂರು ನಗರದ ಸಮಗ್ರ ಮೊಬಿಲಿಟಿ ಯೋಜನೆಯನ್ನು ನುರಿತ ಸೇವಾ ಪೂರೈಕೆದಾರರಿಂದ ಸಿದ್ಧಪಡಿಸುವ ಸಲುವಾಗಿ **ದಿನಾಂಕ:24.08.2024**ರ ಅಧಿಸೂಚನೆಯಲ್ಲಿ ಪ್ರಕಟಣೆ ಮಾಡಲಾದ ಟೆಂಡರ್ ನಂ. **(DULT/2024-25/SE0005)** ನಲ್ಲಿ ಇ-ಬಿಡ್‌ಗಳನ್ನು ಆಹ್ವಾನಿಸಲಾಗಿದ್ದು ಟೆಂಡರ್ ಸಲ್ಲಿಕೆಯ ಕೊನೆಯ **ದಿನಾಂಕವನ್ನು 24.09.2024**ಕ್ಕೆ ನಿಗಧಿಪಡಿಸಲಾಗಿತ್ತು. ಸದರಿ ಟೆಂಡರ್ ಸ್ವೀಕರಿಸಲು ಈಗ ಕೊನೆಯ **ದಿನಾಂಕವನ್ನು 14.10.2024, ಸಂಜೆ 5.30** ವರೆಗೂ ವಿಸ್ತರಿಸಲಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ಬಿಡ್ಡುದಾರರು ಕರ್ನಾಟಕ ಸರ್ಕಾರದ ವೆಬ್‌ಸೈಟ್ https://kppp.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/- ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ

ವಾಸಾಸಂಇ/ವಾಪ್ರ/2254/ಎಸ್‌ಎಸ್‌ಸಿ/2024-25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾ. ಕೃ. ವಿ. ಕೆ, ಬೆಂಗಳೂರು-560 065.

ಸಂಖ್ಯೆ:ಇ.ಒ/ಎಸ್.ಪಿ.ಒ/ಕೆಪಿಪಿಪಿ/11/2024-25 ದಿನಾಂಕ: 26-09-2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ-1 ಮತ್ತು ಕೆ.ಜಿ-2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 10-10-2024 ಸಂಜೆ 4.00 ಘಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14-10-2024 ಸಮಯ ಬೆಳಗ್ಗೆ 10.30 ಕ್ಕೆ** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **18-10-2024 ಬೆಳಗ್ಗೆ 10.30,** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿನಡೆಯುತ್ತದೆ.

ಸೂಚನೆ: ಯಾವುದೇ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಹಾಯವಾಣಿ ಸಂಖ್ಯೆ: **91-80460 10000, 91-8068948777, support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **080-23630128** ಅನ್ನು ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/RO/2237/2024-25

ಕರ್ನಾಟಕ ಸರ್ಕಾರ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ

ಆಯುಕ್ತರ ಕಛೇರಿ, ಕೆ.ಆರ್. ವೃತ್ತ, ಬೆಂಗಳೂರು-560001,
ದೂರವಾಣಿ ಸಂಖ್ಯೆ : 91-080-22212408, ಫ್ಯಾಕ್ಸ್ ನಂ. : 91-080-22277528

ಸಂಖ್ಯೆ: SSLR: E- 1527109/2024-25 ದಿನಾಂಕ : 27.09.2024

ಇ-ಟೆಂಡರ್ ಪ್ರಕಟಣೆ

ವಿಷಯ: ಭೂಮಾಪನ ಇಲಾಖೆಯಲ್ಲಿ ಅಧುನಿಕ ತಂತ್ರಜ್ಞಾನ ಆಧಾರಿತ ಭೂಮಾಪನ ಉಪಕರಣವಾದ Rovers ಗಳನ್ನು (372 Nos) ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸುವ ಬಗ್ಗೆ.

ಭೂಮಾಪನ ಇಲಾಖೆಯಲ್ಲಿ ಅಧುನಿಕ ತಂತ್ರಜ್ಞಾನ ಆಧಾರಿತ ಭೂಮಾಪನ ಉಪಕರಣವಾದ Rovers ಗಳನ್ನು (372 Nos) ಖರೀದಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಇಲಾಖೆಯು 372 Rovers ಒದಗಿಸಲು ಆಸಕ್ತಿಹೊಂದಿರುವಂತಹ ಸಂಸ್ಥೆಗಳಿಂದ ಆರ್ ಎಫ್ ಪಿ ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ-ಟೆಂಡರ್ ಗಳನ್ನು ಆಹ್ವಾನಿಸಿದ್ದು, ದಿನಾಂಕ: **27.09.2024** ರಿಂದ **http://www.eproc.karnataka.gov.in** ರಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ-ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನಾಂಕ: **05.11.2024** ಆಗಿರುತ್ತದೆ.

ಸಂಪರ್ಕಿಸಬೇಕಾದ ಅಧಿಕಾರಿ
ಕೆ.ಜಯಪ್ರಕಾಶ ಬಿ.ಇ. ಕೆಜಿಎಸ್
ಹೆಚ್ಚುವರಿ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು
(080-22214715)

ಸಹಿ/- (ಕೆ.ಜಯಪ್ರಕಾಶ)
ಹೆಚ್ಚುವರಿ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು

ವಾಸಾಸಂಇ/ವಾ.ಪ್ರ/2228/ಎಸ್‌ಎಸ್‌ಸಿ/2024-25

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್, ಗದಗ)

ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2024-25/1439
ದಿನಾಂಕ : 27-09-2024

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1&2&3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ **Standard Bid Document KW-1&2&3**ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **24** ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ.

ಲೆಕ್ಕ ಶೀರ್ಷಿಕೆ : 2023-24ನೇ ಸಾಲಿನ 5054 ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಯೋಜನೆ 2024-25 ನೇ ಸಾಲಿನ 3054 ಸಿ.ಎಮ್.ಜಿ.ಎಸ್.ವಾಯ್ ಯೋಜನೆ, 2023-24 ನೇ ಸಾಲಿನ ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ, 2024-25 ನೇ ಸಾಲಿನ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ(ಒಗ್ಗೂಡಿಸುವಿಕೆ), 2024-25 ನೇ ಸಾಲಿನ ತೋಟಗಾರಿಕೆ ಇಲಾಖೆ (2435-00-101-0-32 ತೋಟಗಾರಿಕೆ ಕಟ್ಟಡಗಳು ಯೋಜನೆ, 2024-25 ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ - 2225-00-103-0-40 ಕಟ್ಟಡಗಳ ನಿರ್ವಹಣೆ ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆ, 2024-25 ನೇ ಸಾಲಿನ 3475-00-101-0-27 ಕೃಷಿ ಮಾರಾಟ ಇಲಾಖೆ ಮಾರುಕಟ್ಟೆ ಮೂಲಭೂತ ಸೌಕರ್ಯ ಯೋಜನೆ, 2024-25 ನೇ ಸಾಲಿನ ಆರೋಗ್ಯ ಇಲಾಖೆಯ ಕಟ್ಟಡಗಳು (ಹೊಸ ಕಾಮಗಾರಿಗಳು), 2024-25 ನೇ ಸಾಲಿನ ಕೆರೆಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ ಅನುದಾನ ಯೋಜನೆ, 2024-25 ನೇ ಸಾಲಿನ ಪಶುಸಂಗೋಪನೆ ಇಲಾಖೆ (2403-00-101-0-28 ಕಟ್ಟಡಗಳ ನಿರ್ವಹಣೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **(https://kppp.karnataka.gov.in)** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

IndentNos : RDPR/2023-24/WORK_INDENT: 3535, 8933, 3650, 9287, 9286, 9153, 9063, 9093, 9023, 9017, 3662, 8961, 8991, 8135, 8787, 8973, 8972, 8970, 8969, 8788, 8598, 8771, 9309, 3640.

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **2.51** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **58.39** ಲಕ್ಷಗಳು

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:- ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **30-09-2024** ರಿಂದ **16-10-2024** ರಂದು 16.30 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **18-10-2024** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/253/2024-25

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ-580005
ದೂರವಾಣಿ: 0836-2214384 / 231, ಇ-ಮೇಲ್: spo@uasd.in

ನಂ. ನಿ.ಅ/ಆಅ/ಟೆಂಡರ್.ಇಪ್ರೋಕ್-04/2024-25 ದಿನಾಂಕ: 25-09-2024

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವೈಜ್ಞಾನಿಕ ಸೇವೆಗಳನ್ನು ಪಡೆಯಲು ಟೆಂಡರ್‌ನ್ನು ಆಹ್ವಾನಿಸಿದ್ದು ನೋಂದಾಯಿತ ಅಧಿಕೃತ ಸೇವಾ ಪೂರೈಕೆದಾರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟ್‌ನ್ನು ಆನ್‌ಲೈನ್ ಮುಖಾಂತರ ಸಂಪರ್ಕಿಸುವುದು http://kppp.karnataka.gov.in (Service Tender Category) ಹಾಗೂ ಟೆಂಡರ್ ದಸ್ತಾವೇಜುಗಳನ್ನು ಡೌನಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 16-10-2024 (ಬುಧವಾರ) **ಸಾಯಂಕಾಲ 4.00 ಗಂಟೆಯವರೆಗೆ.** ಟೆಂಡರ್ ವೇಳಾಪಟ್ಟಿಯ ಇತರ ಮಾಹಿತಿಯನ್ನು **ಇ-ಪೋರ್ಟಲ್‌**ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ 0836-2214231 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಟೆಂಡರಿನಲ್ಲಿ ಭಾಗವಹಿಸಲಿಚ್ಛಿಸುವ ಸೇವಾ ಪೂರೈಕೆದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-46010000. ಭಾಗವಹಿಸುವ ಸೇವಾ ಪೂರೈಕೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ http://kppp.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.

ಸಹಿ/- ಆಸ್ತಿ ಅಧಿಕಾರಿಗಳು,
ಕೃ.ವಿ.ವಿ. ಧಾರವಾಡ.

ವಾಸಾಸಂಇ/ಧಾರವಾಡ/443/ಅಡ್ವರ್ಟೋರ್/2024-25

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ರಾಮನಗರ ಜಿಲ್ಲಾ ಪಂಚಾಯತ್, ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ :
19/768-777/2024-25 ದಿನಾಂಕ : 25-09-2024

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾವಣೆ ಮಾಡಿಸಿಕೊಂಡಿರುವ **ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,** ಕರ್ನಾಟಕ ಸರ್ಕಾರ ಇಲ್ಲಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರ್ಕಾರಿ ನೊಂದಾಯಿತ ಕಂಪನಿಯವರಿಂದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : https://kppp.karnataka.gov.in ಮುಖಾಂತರ **ಈ ಕಛೇರಿ** ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ ಕನಕಪುರ ಮತ್ತು ಮಾಗಡಿ ತಾಲ್ಲೂಕಿನಲ್ಲಿ ಲೆಕ್ಕ ಶೀರ್ಷಿಕೆ ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕನಿಷ್ಠ ಅಂದಾಜು ಮೊತ್ತ ರೂ. 17.63 ಲಕ್ಷಗಳು, ಗರಿಷ್ಠ ಅಂದಾಜು ಮೊತ್ತ ರೂ. 92.99 ಲಕ್ಷಗಳು, ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 04-10-2024 ರ ಸಂಜೆ 4.00 ಗಂಟೆಯವರೆಗೆ. **ಟೆಂಡರ್ ತೆರೆಯುವ ದಿನಾಂಕ :** 05-10-2024 ರ ಸಂಜೆ 4.30 ಗಂಟೆಯ ನಂತರ. **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ :** 07-10-2024 ರ ಸಂಜೆ 4.30 ಗಂಟೆಯ ನಂತರ. (ಕೆ.ಜಿ.-3). ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/363/ಮಣಿಪಾಲ್/2024-25

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ : 08182-222943, ಇ-ಮೇಲ್: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ ಪೋರ್ಟಲ್ ಮೂಲಕ)

ಐ.ಎಫ್.ಟಿ ಸಂಖ್ಯೆ: 13/2024-25 ದಿನಾಂಕ : 26.09.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-3 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 3054-03-337-0-05-200-ರಾಜ್ಯ ಹೆದ್ದಾರಿ ನಿರ್ವಹಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು-ಆನವೇರಿ ರಸ್ತೆಯಿಂದ ಹೊಸ ಸನ್ಯಾಸಿ ಕೊಡಮಗ್ಗೆ, ಮಂಡ್ಯ ಕ್ಯಾಂಪ್, ಕನಸಿನಕಟ್ಟೆ ಮಾರ್ಗವಾಗಿ ಸಿದ್ಲಿಪುರ ಸೇರುವ ರಸ್ತೆ ಸರಪಳಿ 5.20 ರಿಂದ 5.60 ಕಿ.ಮೀ. ರವರೆಗೆ ವಿಶೇಷ ದುರಸ್ತಿ ಕಾಮಗಾರಿಗೆ (ಇಂಡೆಂಟ್ ನಂ-15200) ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 63.51 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 1.27 ಲಕ್ಷ. ಸದರಿ ಕಾಮಗಾರಿಯ ಟೆಂಡರ್ ಅವಧಿ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ನಮೂದಿಸಿರುವಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: **26-09-2024** ರಿಂದ **04-10-2024** ರ **17.00** ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: **04-10-2024** ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: **05-10-2024** ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 06-10-2024 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾಸಾಸಂಇ/ಶಿ/ನಂ.179-09
ಝೇಂಕಾರ್/2024-25

ಕರ್ನಾಟಕ ಸರಕಾರ

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಛೇರಿ, ಉ.ಕ, ಕಾರವಾರ

Email: dtokaukn@rntcp.org Phone: 08382-226277

ಸಂ/ಜಿ.ಕ್ಷ.ನಿ.ಕೇ.ಕಾ./ಟೆಂಡರ/050/2024-25 ದಿನಾಂಕ: 27-09-2024.

ಇ-ಟೆಂಡರ್ ಪ್ರಕಟಣೆ

ವಿಷಯ: ಪ್ರಯೋಗಶಾಲಾ ಸಾಮಗ್ರಿಗಳ ಖರೀದಿಗೆ ಇ-ಟೆಂಡರ್ ಆಹ್ವಾನಿಸುವುದರ ಬಗ್ಗೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಛೇರಿ, ಕಾರವಾರಕ್ಕೆ 2024-25 ನೇ ಸಾಲಿಗೆ (2024-25 ರ ಆರ್.ಓ.ಪಿ ಯಂತೆ) ಅವಶ್ಯಕವಿರುವ ವಿವಿಧ ಪ್ರಯೋಗಶಾಲಾ ಸಾಮಗ್ರಿಗಳನ್ನು ಸರಬರಾಜು ಮಾಡಲು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ www.eproc.karnataka.gov.in ನಲ್ಲಿ ನೋಡಬಹುದಾಗಿದೆ.

(1) ಟೆಂಡರ್ ದಾಖಲೆ ನೀಡುವ ಅವಧಿ: 30-09-2024 ರಿಂದ 14-10-2024 (2) ಟೆಂಡರ್ ದಾಖಲೆ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: 14-10-2024 ರ ಸಂಜೆ 05:30 ಸಾಯಂಕಾಲ (3) ಟೆಂಡರ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 16-10-2024 ಬೆಳಿಗ್ಗೆ 11:00 ಘಂಟೆಗೆ.

ಸಹಿ/- ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ
ಉತ್ತರ ಕನ್ನಡ.

DIPR/ADM/KSMCA/379/
24-25 dt.27.09.2024

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಲೋಕೋಪಯೋಗಿ ಇಲಾಖೆ

ವಿಶೇಷ ವಿಭಾಗ, ಮೈಸೂರು.

ಅಲ್ಪಾವಧಿ ಐಟಂವಾರು ಟೆಂಡರು ಅಧಿಸೂಚನೆ
ಸಂಖ್ಯೆ : 08/2024-25 ದಿನಾಂಕ: 25.09.2024

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಇವರಿಂದ ಒಟ್ಟು 02 ಕಾಮಗಾರಿಗಳಿಗೆ **ಲೆಕ್ಕ ಶೀರ್ಷಿಕೆ : 8443 ಠೇವಣಿವಂತಿಕೆ ಮತ್ತು ಲೆಕ್ಕ ಶೀರ್ಷಿಕೆ : 4059 ಅಡಿಯಲ್ಲಿ KW-4** ರ ನಿಬಂಧನೆ ಮತ್ತು ಷರತ್ತುಗಳನ್ವಯ ಕರ್ನಾಟಕ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು **(http://kppp.karnataka.gov.in)** ಆಹ್ವಾನಿಸಲಾಗಿದ್ದು, ಟೆಂಡರ್ ಕ್ವೋರಿಸ್ ಗೆ **ದಿನಾಂಕ: 14.10.2024** ರವರೆಗೆ ಹಾಗೂ ಪೂರ್ವಭಾವಿ ಸಭೆಯನ್ನು **ದಿನಾಂಕ: 14.10.2024 ರಂದು ಮಧ್ಯಾಹ್ನ 12.00 ಗಂಟೆಗೆ** ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಟೆಂಡರ್‌ನ್ನು **ದಿನಾಂಕ: 18.10.2024 ರಂದು ಸಂಜೆ 4.00 ಘಂಟೆ**ವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಕನಿಷ್ಠ ಮೊತ್ತ **ರೂ.240.76** ಲಕ್ಷಗಳಿಂದ ಮತ್ತು ಗರಿಷ್ಟ ಮೊತ್ತ **ರೂ.299.73** ಲಕ್ಷಗಳವರೆಗೆ ಹಾಗೂ ಇ.ಎಂ.ಡಿ.ಯ ಕನಿಷ್ಠ ಮೊತ್ತ **ರೂ.3.61** ಲಕ್ಷಗಳಿಂದ ಮತ್ತು ಇ.ಎಂ.ಡಿ.ಯ ಗರಿಷ್ಠ ಮೊತ್ತ **ರೂ.4.50** ಲಕ್ಷಗಳಾಗಿರುತ್ತದೆ. ಲೋಕೋಪಯೋಗಿ 2ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಭಾಗವಹಿಸ-ಬಹುದಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

"ಸಂಪರ್ಕಸೌಧ", ಸರ್ವೆ ನಂ.8 (ಬಿ.ಇ.ಪಿ. ಆವರಣ) ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು-560010 ಫೋನ್ ನಂ.080-22024000
ಫ್ಯಾಕ್ಸ್ 080-22024000 ಇ-ಮೇಲ್: mdkrdcl@gmail.com & cekrdcl@gmail.com

ಸಂಖ್ಯೆ. ಕೆಆರ್‌ಡಿಸಿಎಲ್/ಐಎಫ್‌ಬಿ/2024-25/09 ದಿನಾಂಕ: 26-09-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕ.ರ.ಅ.ನಿ.ನಿ), ಬೆಂಗಳೂರು ನಗರ ಸಂಚಾರ ಪೊಲೀಸ್‌ರವರ ಅಗತ್ಯತೆಗೆ ಅನುಗುಣವಾಗಿ ಕೆಳಕಂಡ ಕೆಲಸಕ್ಕೆ ಅನುಭವ ಹೊಂದಿರುವ ಏಜೆನ್ಸಿಗಳಿಂದ ಐಟಂ ದರ ಟೆಂಡರ್ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
   ಕೆಲಸದ ಹೆಸರು : ಬೆಂಗಳೂರು ನಗರ ಸಂಚಾರ ಪೊಲೀಸ್ ಇವರಿಗೆ ಟೆಂಡರ್ ಸಂಖ್ಯೆ ಕೆಆರ್‌ಡಿಸಿಎಲ್/2042-25/ಬಿಟಿ/ಕೆಲಸ_ಇಂಡೆಂಟ್6/ಕರೆ-2 ರ ಅನ್ವಯ ಬೆಂಗಳೂರು ನಗರ ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿರ್ವಹಣೆ ಯೋಜನೆ ಅಡಿಯಲ್ಲಿ ಬೆಂಗಳೂರು ನಗರದ 50 ಪ್ರಮುಖ ಜಂಕ್ಷನ್‌ಗಳಿಗೆ ಸ್ವಯಂಚಾಲಿತ ಸಂಚಾರ ಸಿಗ್ನಲ್‌ಗಳ ಸರಬರಾಜು, ಅಳವಡಿಕೆ, ಕಾರ್ಯಾಚರಣೆ ಮತ್ತು ನಿರ್ವಹಣೆ. **ಅಂದಾಜು ವೆಚ್ಚ** : ರೂ.8,49,00,000/-. **ಮುಂಗಡ ಠೇವಣಿ ಹಣ**: ರೂ.12,73,500/-. **ಪೂರ್ಣಗೊಳಿಸಲು ಕಾಲಾವಧಿ:** ಸರಬರಾಜು, ಅಳವಡಿಕೆ, ಪರೀಕ್ಷಿಸುವುದು, ಕಾರ್ಯಾಚರಣೆ & ತರಬೇತಿಗಾಗಿ 6 (ಆರು) ತಿಂಗಳು.
2. ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಬಿಡ್‌ಗಳನ್ನು ಮತ್ತು ಇಎಂಡಿಯನ್ನು (ಎಲೆಕ್ಟ್ರಾನಿಕ್) ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸುವುದು
3. ವಿವಿಧ ಚಟುವಟಿಕೆಗಳ ವೇಳಾಪಟ್ಟಿ ಕೆಳಕಂಡಂತಿವೆ;
   ಅ) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ **04-10-2024 ರಂದು 17:30 ಗಂಟೆಯವರೆಗೆ.** ಅರ್ಜಿದಾರರು ತಮ್ಮ ವಿಚಾರಣೆಗಳನ್ನು ಎಲೆಕ್ಟ್ರಾನಿಕ್ ಮೇಲ್: cekrdcl@gmail.com ಮೂಲಕ ಸಲ್ಲಿಸಬಹುದು. ಆ) ಬಿಡ್ ಪೂರ್ವ ಸಭೆಯನ್ನು **05-10-2024 ರ 11.30 ಗಂಟೆಗೆ.** ಸ್ಥಳ: ಜಂಟಿ ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು ನಗರ ಪೊಲೀಸ್, ಸಂಖ್ಯೆ.5, ಸಂಚಾರ ನಿರ್ವಹಣಾ ಕೇಂದ್ರ, ಇನ್‌ಫ್ಯಾಂಟರಿ ರಸ್ತೆ, ಬೆಂಗಳೂರು-560 001 ಇಲ್ಲಿ ಏರ್ಪಡಿಸಲಾಗಿದೆ. ಇ) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ **14-10-2024 ರ 17:30 ಗಂಟೆಯವರೆಗೆ.** ಈ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **16-10-2024 ರಂದು 11:00 ಗಂಟೆಗೆ.**

* ಮುಂದುವರೆದು, ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಹಾಗೂ ಎಲ್ಲಾ ಬದಲಾವಣೆಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಎಂದು ಗಮನಿಸತಕ್ಕದ್ದು.

ಸಹಿ/- ಮುಖ್ಯ ಅಭಿಯಂತರರು
ಕ.ರ.ಅ.ನಿ.ನಿ., ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/2234/ಆಕಾರ್/2024-25

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು -560 052.
ದೂರವಾಣಿ: 080-22283366, ಟೆಲಿಫ್ಯಾಕ್ಸ್: 080-22262288

ಸಂಖ್ಯೆ: KREIS/INFR/OTH/79/2024-ADMN ದಿನಾಂಕ: 27.09.2024

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ 27.09.2024 ರಂದು ಪ್ರಕಟವಾದ ಟೆಂಡರ್ ಜಾಹೀರಾತಿನಲ್ಲಿ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕವನ್ನು 09.10.2024 ಎಂದು ಓದುವುದು ಮತ್ತು ಪ್ರಕಟಿಸಿದಂತೆ ಅಲ್ಲ.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು
ಕವಶಿಸಸಂ, ಬೆಂಗಳೂರು

DIPR/CP/2251/Zen/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ನೆಲ ಮಹಡಿ, ಅನೆಕ್ಸ್-3 ಕಟ್ಟಡ, ಪ್ರಧಾನ ಕಛೇರಿ ಎನ್.ಆರ್. ಚೌಕ,
ಬೆಂಗಳೂರು-560 002.

ಸಂಖ್ಯೆ. ಉಅಸಂ/ಟೆಂಡರ್/10/2024-25 ದಿನಾಂಕ: 26-09-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
website: https://kppp.karnataka.gov.in

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೃಬೆಂಮಪಾಲಿಕೆ ಬೆಂಗಳೂರು, ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ಬಿಡಬ್ಲ್ಯೂಎಸ್‌ಎಸ್‌ಬಿ/ರೈಲ್ವೇಸ್/ಎಂಇಎಸ್ ಅಥವಾ ಯಾವುದಾದರು ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1.	ಬನ್ನೇರುಘಟ್ಟ ಜೈವಿಕ ಉದ್ಯಾವನದಲ್ಲಿ ವನ್ಯ ಜೀವಿ ರಕ್ಷಣಾ ಕೇಂದ್ರದ ಅಭಿವೃದ್ಧಿ ಕಾಮಗಾರಿ.	84.65	1,69,298/-

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳು **30.09.2024** ರಿಂದ **ದೊರೆಯುತ್ತವೆ.** (2) ಪೂರ್ವ ಬಿಡ್ **ಸಭೆ: 03.10.2024ರ ಸಂಜೆ : 5:00 ಗಂಟೆಗೆ** (3) ಅನ್‌ಲೈನ್‌ನಲ್ಲಿ ಟೆಂಡರ್ ವಿಚಾರಣೆಗಳು : **03.10.2024ರ ಸಂಜೆ: 5:00 ಗಂಟೆಗೆ.** (4) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **14.10.2024ರ ಸಂಜೆ: 4:30 ಗಂಟೆಯವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 15.10.2024ರ ಸಂಜೆ 5:00 ಗಂಟೆಗೆ.** (6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ.**

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ.

ಕರ್ನಾಟಕ ಸರಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ.
ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು (ಅಂಧತ್ವ ವಿಭಾಗ) ಹಾವೇರಿ ಜಿಲ್ಲೆ.
ಬಿ ಬ್ಲಾಕ್ ಜಿಲ್ಲಾಡಳಿತ ಭವನ ದೇವಗಿರಿ-581110

ದೂರವಾಣಿ/ಫ್ಯಾಕ್ಸ : 08375-249294 ಇ-ಮೇಲ್ : dlohaveri@gmail.com

ಕ್ರ.ಸಂ/ಜಿಕುನಿಅಹಾ/ಅನಿಕಾ/ 92/2024-25 ದಿನಾಂಕ : 25-09-2024

ಮರು ಅಲ್ಪಾವಧಿ ಇ-ಟೆಂಡರ ಪ್ರಕಟಣೆ

E-TENDER NO - DHFWS/2024-25/IND0858/Call-2

ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ಪಾರದರ್ಶಕ ಅಧಿನಿಯಮ 99/2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೊಂದಾಯಿತ ಅರ್ಹ ಸಂಸ್ಥೆಗಳಿಂದ/ಪ್ರತಿಷ್ಠಿತ ಮೂಲ ತಯಾರಕರು/ಅಧೀಕೃತ ಪ್ರತಿನಿಧಿಗಳು/ ಅಧೀಕೃತ ವಿತರಕರಿಂದ **2024-25** ನೇ ಸಾಲಿಗಾಗಿ ಹಾವೇರಿ ಜಿಲ್ಲೆಗೆ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ವಯಸ್ಸಾದ ಫಲಾನುಭವಿಗಳಿಗೆ ಕನ್ನಡಕಗಳನ್ನು ಸರಬರಾಜು ಮಾಡುವ ಕುರಿತು ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯುವುದು.

ಟೆಂಡರ್ ವೇಳಾಪಟ್ಟಿ : 1) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **25-09-2024** 2) ಟೆಂಡರ್‌ನ ಮೊತ್ತ ರೂ. **63.00** ಲಕ್ಷ 3) ಇ ಎಂ ಡಿ ಮೊತ್ತ ರೂ. **1,26,000/-** 4) ಆನ್‌ಲೈನ್‌ನಲ್ಲಿ ಟೆಂಡರ್‌ನ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ವೇಳೆ : **30-09-2024** ಸಾಯಂಕಾಲ 4.00 ಗಂಟೆಯವರೆಗೆ 5) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **03-10-2024** ಸಾಯಂಕಾಲ 4.00 ಗಂಟೆಯವರೆಗೆ 6) ಕನ್ನಡಕಗಳ ಮಾದರಿಗಳನ್ನು ಸಲ್ಲಿಸುವ ದಿನಾಂಕ : **04-10-2024** ರಂದು ಸಾಯಂಕಾಲ 10.30 ಗಂಟೆಗೆ 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ : **05-10-2024** ರಂದು ಸಾಯಂಕಾಲ 10.30 ಗಂಟೆಗೆ 8) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ : **07-10-2024** ರಂದು ಬೆಳಿಗ್ಗೆ 11.30 ಗಂಟೆಗೆ (ತಾತ್ಕಾಲಿಕ) 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ ಬಿ ಬ್ಲಾಕ್ ದೇವಗಿರಿ, **08375-249294/ 8310773971**

ಸಹಿ/- ವ್ಯವಸ್ಥಾಪಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸಂಘ ಹಾವೇರಿ (ಅಂಧತ್ವ ನಿವಾರಣಾ ವಿಭಾಗ)

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/317/2024-25

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ದೂರವಾಣಿ : 08182 - 226268 ಇ-ಮೇಲ್ : ka.shivamogga.dudc@gmail.com

ನಂ:.SMGDC/DUDC/EST1/7/2023(133822/22-23) ದಿನಾಂಕ : 26.09.2024

ಟೆಂಡರ್ ಅಧಿಸೂಚನೆ

ಶಿವಮೊಗ್ಗ ಜಿಲ್ಲೆಯ ನಗರಸಭೆ ಭದ್ರಾವತಿ ಹಾಗೂ ಸಾಗರ ವ್ಯಾಪ್ತಿಯಲ್ಲಿರುವ ಸ್ವಚ್ಛ ಭಾರತ ಮಿಷನ್ 2.0 ಯೋಜನೆಯಡಿಯಲ್ಲಿ ಘನತ್ಯಾಜ್ಯವಸ್ತು ವಿಲೇವಾರಿ ಘಟಕದಲ್ಲಿ ಪಾರಂಪರಿಕ ತ್ಯಾಜ್ಯ ನಿರ್ವಹಣೆ(Legacy Waste) ವಿಲೇವಾರಿ ಮಾಡುವ ಕಾಮಗಾರಿಗಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ ಇವರಿಂದ ಅರ್ಹಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್ಮೆಂಟ್ ಪೋರ್ಟಲ್ ಮೂಖಾಂತರ (https://kppp.karnataka.gov.in) ಟೆಂಡರ್‌ಸಲ್ಲಿಸುವುದು.

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆಅವಧಿ
1	Processing and Disposal of Legacy waste at Survey No 36 & 37 of Hiriyur Village KasabaHobaliOf City municipal council Bhadravathi& at Survey No 93 of Sangala Village KasabaHobali Of City municipal council Sagara as per Central Pollution Board Guidelines DMA/2023-24/OW/WORK_INDENT4032/CALL-2	1065,42,006.30	15,00,000.00	9.5 ತಿಂಗಳು

(1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **27.09.2024** (2) ಪೂರ್ವಭಾವಿ ಸಭೆ (PRE-BID MEETING) : **10.10.2024 ರ ಪೂರ್ವಾಹ್ನ 11.00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ, ಶಿವಮೊಗ್ಗ** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **30.10.2024 ರ ಸಂಜೆ 05.30 ಗಂಟೆಗೆ** (4) ಪೂರ್ವ ಅರ್ಹತಾ ಬಿಡ್ ತೆರೆಯುವ ದಿನಾಂಕ : **04.11.2024 ರ ಬೆಳಗ್ಗೆ 11.00 ಗಂಟೆಗೆ** (5) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.11.2024 ರ ಬೆಳಗ್ಗೆ 11.00 ಗಂಟೆಗೆ** (6) ಟೆಂಡರ್ ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ : **15.11.2024 ರ ಬೆಳಗ್ಗೆ 11.00 ಗಂಟೆಗೆ ಅಥವಾ ಮುಂದೆ ಸೂಚಿಸಿದ ದಿನದಂದು**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ **KPP-** ಪ್ರೋಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- **ಯೋಜನಾ ನಿರ್ದೇಶಕರು,**
ಜಿಲ್ಲಾನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.167-09
ಝೇಂಕಾರ್/2024-25

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು-560001.
ಫೋನ್: 080-22223906, ಇ-ಮೇಲ್: dce.tenders2017@gmail.com

ಸಂಖ್ಯೆ: DCE/ITS/PUR/15/2024-INFO (Computer No.1467999) ದಿನಾಂಕ : 26.09.2024

ಇ-ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ-ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ದತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://kppp.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.


ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀ-ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ : ಡಿಸಿಇ/**2024-25/IND0031** "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ರೂಸಾ 1.0 & 2.0 ಅಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕ್ರೀಡಾ ಉಪಕರಣಗಳ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆ"	26/09/2024	30/09/2024 ಬೆಳಿಗ್ಗೆ 11.00 ಗಂಟೆಗೆ	09/10/2024 ಸಂಜೆ 5.30 ಗಂಟೆಗೆ
2	ಟೆಂಡರ್ ಸಂಖ್ಯೆ:ಡಿಸಿಇ/**2024-25/IND0032** "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಐಡಿಪಿ ಅನ್ವಯ ಪೀಠೋಪಕರಣಗಳ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆ"	26/09/2024	30/09/2024 ಬೆಳಿಗ್ಗೆ 11.30 ಗಂಟೆಗೆ	04/10/2024 ಸಂಜೆ 5.30 ಗಂಟೆಗೆ
3	ಟೆಂಡರ್ ಸಂಖ್ಯೆ:ಡಿಸಿಇ/**2024-25/IND0030 Call-2** "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ರೂಸಾ 1.0 & 2.0 ಅಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವಿಜ್ಞಾನ ಪ್ರಯೋಗಾಲಯದ ಉಪಕರಣಗಳ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆ"	26/09/2024	30/09/2024 ಮಧ್ಯಾಹ್ನ 12.00 ಗಂಟೆಗೆ	08/10/2024 ಸಂಜೆ 5.30 ಗಂಟೆಗೆ

ಸಹಿ/-
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು, ಬೆಂಗಳೂರು

DIPR/CP/2207/Zen/2024-25





ಮೋತಿ ಚೂರ್ ಲಡ್ಡು

ದಸರಾ ಹಬ್ಬಕ್ಕೆ ಸಿಹಿ ತಿನಿಸು

ವೇದಾವತಿ ಎಚ್. ಎಸ್.

ಮೋಹನ್ ಥಾಲ್

ಬೇಕಾಗುವ ಸಾಮಗ್ರಿಗಳು: ಕಡಲೆಹಿಟ್ಟು 2 ಕಪ್ (ಹಿಟ್ಟು ಸ್ವಲ್ಪ ತರಿ ತರಿಯಾಗಿರಲಿ), ಸಕ್ಕರೆ 1 ಕಪ್, ತುಪ್ಪ 1 ಕಪ್ + 2 ಟೇಬಲ್ ಚಮಚ, ಹಾಲು 1/2 ಕಪ್, ನೀರು 3/4 ಕಪ್, ಕೇಸರಿದಳ 8 ರಿಂದ 10, ಏಲಕ್ಕಿಪುಡಿ 1/4 ಟೀ ಚಮಚ, ಚಿಕ್ಕದಾಗಿ ಕತ್ತರಿಸಿದ ಬಾದಾಮಿ ಮತ್ತು ಪಿಸ್ತಾ ಸ್ವಲ್ಪ.

ತಯಾರಿಸುವ ವಿಧಾನ: ಬಟ್ಟಲಿಗೆ ಕಡಲೆಹಿಟ್ಟನ್ನು ಹಾಕಿ ತುಪ್ಪವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ಹಾಲನ್ನು ಸೇರಿಸಿ ಮಿಶ್ರಣ ಮಾಡಿ. ಎಲ್ಲವೂ ಚೆನ್ನಾಗಿ ಹೊಂದಿಕೆಯಾದ ಬಳಿಕ ಮಿಶ್ರಣವನ್ನು ಗಟ್ಟಿಯಾಗಿ ಒತ್ತಿ ಹತ್ತು ನಿಮಿಷ ಮುಚ್ಚಿಡಿ. ಮಿಕ್ಸಿಯಲ್ಲಿ ಒಂದು ಸುತ್ತು ತಿರುಗಿಸಿ ಜರಡಿ ಹಿಡಿಯಿರಿ. ಬಳಿಕ ಕಡಲೆಹಿಟ್ಟನ್ನು ಬಾಣಲೆಗೆ ಹಾಕಿ ಸಣ್ಣ ಉರಿಯಲ್ಲಿ ತಿಳಿ ಕಂದು ಬಣ್ಣ ಬರುವವರೆಗೆ ಹುರಿಯಿರಿ. ಈಗ ತುಪ್ಪ ಸೇರಿಸಿ ಪುನಃ ಹುರಿಯಿರಿ. ಬಣ್ಣ ಬದಲಾದ ಬಳಿಕ ಸ್ವಲ್ಪ ಸ್ವಲ್ಪ ಹಾಲನ್ನು ಸೇರಿಸುತ್ತಾ ಮಗುಚುತ್ತಿರಿ. ಹಾಲು ಪೂರ್ತಿ ಮಿಶ್ರಣದೊಂದಿಗೆ ಸೇರಿ ಉದುರು ಉದುರಾದ ಬಳಿಕ ಒಲೆಯನ್ನು ಆರಿಸಿ ಪಕ್ಕದಲ್ಲಿಡಿ. ಬಾಣಲೆಗೆ ಸಕ್ಕರೆ, ನೀರು, ಕೇಸರಿದಳವನ್ನು ಹಾಕಿ ಮಿಶ್ರಣ ಮಾಡಿ. ಸಕ್ಕರೆ ಪಾಕವು ಒಂದೆಳೆ ಬರುವವರೆಗೆ ಕುದಿಸಿ. ಪಾಕಕ್ಕೆ ಏಲಕ್ಕಿ ಪುಡಿ ಸೇರಿಸಿ ಮಿಶ್ರಣ ಮಾಡಿ ಒಲೆಯನ್ನು ಆರಿಸಿ. ಈಗ ಹುರಿದ ಕಡಲೆಹಿಟ್ಟಿಗೆ ಸಕ್ಕರೆ ಪಾಕವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಐದರಿಂದ ಹತ್ತು ನಿಮಿಷ ಚೆನ್ನಾಗಿ ಬೆರೆಸಿ. ಬಳಿಕ ಅದನ್ನು ತಟ್ಟೆಗೆ ಹಾಕಿ ಸಮತಟ್ಟಾಗಿ ಮಾಡಿ. ಬಾದಾಮಿ ಮತ್ತು ಪಿಸ್ತಾಗಳಿಂದ ಅಲಂಕರಿಸಿ. ಆರಲು ನಾಲ್ಕು ಗಂಟೆ ಬೇಕಾಗಬಹುದು. ಚಾಕುವಿನಿಂದ ಕತ್ತರಿಸಿ.

ಮೋತಿ ಚೂರ್ ಲಡ್ಡು

ಬೇಕಾಗುವ ಸಾಮಗ್ರಿಗಳು: ಬೂಂದಿ ತಯಾರಿಸಲು 250 ಗ್ರಾಂ ಕಡಲೆಹಿಟ್ಟು, 1/4 ಟೀ ಚಮಚ ಕೇಸರಿ ಫುಡ್ ಕಲರ್, ಕರಿಯಲು ಎಣ್ಣೆ. ಸಕ್ಕರೆ ಪಾಕ ತಯಾರಿಸಲು: ಸಕ್ಕರೆ 400 ಗ್ರಾಂ, 300 ಎಮ್ ಎಲ್ ನೀರು, 2 ಚಿಟಿಕೆ ಕೇಸರಿ ಫುಡ್ ಕಲರ್, 3 ಟೀ ಚಮಚ ತುಪ್ಪ, 1 ಟೀ ಚಮಚ ಏಲಕ್ಕಿಪುಡಿ, ಪಚ್ಚಕರ್ಪೂರ 1/2 ಟೀ ಚಮಚ, 20 ಗೋಡಂಬಿ.

ತಯಾರಿಸುವ ವಿಧಾನ: ಬಟ್ಟಲಿಗೆ ಕಡಲೆಹಿಟ್ಟು, ಕೇಸರಿ ಫುಡ್ ಕಲರ್, ನೀರನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಎಣ್ಣೆಯನ್ನು ಬಿಸಿ ಮಾಡಿಕೊಂಡು ಸಣ್ಣ ಕಣ್ಣಿನ ಬೂಂದಿ ಜರಡಿಗೆ ಹಿಟ್ಟನ್ನು ಸ್ವಲ್ಪ ಸ್ವಲ್ಪವೇ ಹಾಕಿ ಗರಿ ಗರಿಯಾಗಿ ಬೂಂದಿ ತಯಾರಿಸಿಕೊಳ್ಳಿ. ಬೂಂದಿ ಎಷ್ಟು ಇರುತ್ತದೆಯೋ ಅಷ್ಟು ಗ್ರಾಂ ಸಕ್ಕರೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಸಕ್ಕರೆಯನ್ನು ಬಾಣಲೆಗೆ ಹಾಕಿ ನೀರನ್ನು ಸೇರಿಸಿ. ಸಕ್ಕರೆ ಕರಗಿದ ಬಳಿಕ ಪಾಕಕ್ಕೆ ಪಚ್ಚಕರ್ಪೂರ, ಕೇಸರಿ ಫುಡ್ ಕಲರ್ ಎರಡು ಚಿಟಿಕೆ ಸೇರಿಸಿ ಮಿಶ್ರಣ ಮಾಡಿ. ನಂತರ ಬೂಂದಿ ಸೇರಿಸಿ. ಸಣ್ಣ ಉರಿಯಲ್ಲಿ ಮಿಶ್ರಣ ಮಾಡಿ. ಬೂಂದಿ ಪಾಕದೊಂದಿಗೆ ಹೊಂದಿಕೆಯಾದದಾಗ ಅದನ್ನು ಸಮತಟ್ಟಾಗಿ ಮಾಡಿ ಮುಚ್ಚಳ ಮುಚ್ಚಿ ಹತ್ತು ನಿಮಿಷ ಬಿಡಿ. ಬಳಿಕ ಏಲಕ್ಕಿ ಪುಡಿ, ಗೋಡಂಬಿ, ತುಪ್ಪವನ್ನು ಸೇರಿಸಿ ಮಿಶ್ರಣ ಮಾಡಿ. ನಂತರ ಉಂಡೆಗಳನ್ನು ಕಟ್ಟಿಕೊಳ್ಳಿ.

ರಸಾಸ್ವಾದ



ಬಾಸುಂದಿ

ಬೇಕಾಗುವ ಸಾಮಗ್ರಿಗಳು: ಹಾಲು 2 ಲೀಟರ್, ಕೇಸರಿದಳ 1 ಟೀ ಚಮಚ, ಗೋಡಂಬಿ 10, ಬಾದಾಮಿ ಹತ್ತು, ಪಿಸ್ತಾ 10, ಸಕ್ಕರೆ 1/2 ಕಪ್, ಏಲಕ್ಕಿಪುಡಿ 1/2 ಟೀ ಚಮಚ.

ತಯಾರಿಸುವ ವಿಧಾನ: ದಪ್ಪ ತಳದ ಬಾಣಲೆಗೆ ಹಾಲನ್ನು ಹಾಕಿ ಜೊತೆಗೆ ಕೇಸರಿದಳವನ್ನು ಸೇರಿಸಿ ಮಧ್ಯಮ ಉರಿಯಲ್ಲಿ ಕುದಿಸಿ. ಹಾಲನ್ನು ಕುದಿಸುತ್ತಲೇ ಇರಿ. ಹಾಲಿನಲ್ಲಿ ಬರುವ ಕೆನೆಯನ್ನು ಕುದಿಯುತ್ತಿರುವ ಹಾಲಿಗೆ ಸೇರಿಸುತ್ತಾ ಬನ್ನಿ. ಹೀಗೆ ಪ್ರತಿ ಬಾರಿಯೂ ಕನೆ ಕಟ್ಟಿದಾಗ ಹಾಲಿಗೆ ಹಾಕುತ್ತಿರಿ. ಹೀಗೆ ಅರ್ಧ ಗಂಟೆ ಮಾಡುತ್ತಿರಬೇಕಾಗುತ್ತದೆ. ಹಾಲು ಗಟ್ಟಿಯಾಗುತ್ತಾ ಬಂದಾಗ ಗೋಡಂಬಿ, ಬಾದಾಮಿ ಮತ್ತು ಪಿಸ್ತಾವನ್ನು ಚಿಕ್ಕದಾಗಿ ಕತ್ತರಿಸಿ ಹಾಕಿ ಮಿಶ್ರಣ ಮಾಡಿ. ಹಾಲು ದಪ್ಪವಾಗುತ್ತಾ ಬಂದಾಗ ಸಕ್ಕರೆ ಸೇರಿಸಿ ಐದು ನಿಮಿಷ ಕುದಿಸಿ. ಬಳಿಕ ಏಲಕ್ಕಿಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಹಾಲು ಸಕ್ಕರೆಯೊಂದಿಗೆ ಸೇರಿ ದಪ್ಪವಾದ ಬಳಿಕ ಒಲೆ ಆರಿಸಿ. ಇದನ್ನು ಬಿಸಿ ಇರುವಾಗಲೂ ಸವಿಯಬಹುದು. ಫ್ರಿಜ್‌ನಲ್ಲಿಟ್ಟು ತಣ್ಣಗಾದ ಮೇಲೆ ಸವಿಯಲು ಇನ್ನೂ ರುಚಿ ಇರುತ್ತದೆ.



ಮಿಲ್ಕ್ ಬರ್ಫಿ

ಬೇಕಾಗುವ ಸಾಮಗ್ರಿಗಳು: ಮಿಲ್ಕ್ ಪೌಡರ್ 3 ಕಪ್, ಒಂದೂವರೆ ಕಪ್ ಹಾಲು, ಸಕ್ಕರೆ 1 ಕಪ್, ತುಪ್ಪ 1/2 ಕಪ್, 1/2 ಟೀ ಚಮಚ ಏಲಕ್ಕಿ ಪುಡಿ, ಅಲಂಕರಿಸಲು ಬಾದಾಮಿ, ಪಿಸ್ತಾ ಚಿಕ್ಕದಾಗಿ ಕತ್ತರಿಸಿದ್ದು ಒಂದೊಂದು ಟೇಬಲ್ ಚಮಚ.

ತಯಾರಿಸುವ ವಿಧಾನ: ಮಿಲ್ಕ್ ಪೌಡರ್‌ಅನ್ನು ಜರಡಿ ಹಿಡಿದು ಬಾಣಲೆಗೆ ಹಾಕಿ. ಹಾಲು, ಸಕ್ಕರೆ ಮತ್ತು ತುಪ್ಪವನ್ನು ಸೇರಿಸಿ ಗಂಟಾಗದ ರೀತಿಯಲ್ಲಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಒಲೆಯ ಮೇಲಿಟ್ಟು ಸಣ್ಣ ಉರಿಯಲ್ಲಿ ಮಗುಚುತ್ತಾ ಬನ್ನಿ. ಗಟ್ಟಿಯಾಗುತ್ತಾ ಬಂದಾಗ ಏಲಕ್ಕಿ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ. ಬಾಣಲೆಯ ತಳ ಬಿಟ್ಟು ಬರುವಾಗ ಒಲೆಯನ್ನು ಆರಿಸಿ ತುಪ್ಪ ಸವರಿದ ಪ್ಲೇಟಿಗೆ ಹಾಕಿ. ಸಮತಟ್ಟಾಗಿ ಮಾಡಿ ಅದರ ಮೇಲೆ ಬಾದಾಮಿ ಮತ್ತು ಪಿಸ್ತಾ ಚೂರುಗಳನ್ನು ಹರಡಿ. ಬಳಿಕ ಫ್ರಿಜ್‌ನಲ್ಲಿ ಒಂದು ಗಂಟೆ ಇಡಿ. ಬಳಿಕ ನಿಮಗೆ ಬೇಕಾದ ಆಕಾರಕ್ಕೆ ಕತ್ತರಿಸಿ.

ಸಂತಸದ ಭಾವಜಗತ್ತಿಗೆ ನವಸೂತ್ರ



ರೂಪಾ ಕೆ.ಎಂ.

ಈಗ ನವದುರ್ಗೆಯರನ್ನು ಆರಾಧಿಸುವ ಸಮಯ. ದುರ್ಗೆಯೆಂದರೆ ಶಕ್ತಿ. ನಮ್ಮೊಳಗಿರುವ ಅಂತಃಸತ್ವ. ಆಗಾಗ್ಗೆ ಹೆಣ್ಣುಮಕ್ಕಳು ತಮ್ಮ ಭಾವಪ್ರಪಂಚದೊಳಗಿಳಿದು ಗಟ್ಟಿ ವ್ಯಕ್ತಿತ್ವ ರೂಪಿಸಿಕೊಳ್ಳುವ ಹಾದಿಯೇನೆಂಬುದನ್ನು ಗಮನಿಸಬೇಕು. ಈವರೆಗಿನ ಬದುಕಿನಲ್ಲಿ ಎಲ್ಲಿ ಎಡವಿದ್ದೇವೆ, ಯಾವುದಕ್ಕೆ ಹೆಚ್ಚು ಪುಷ್ಟಿ ಒದಗಿಸಬೇಕು ಎಂಬುದರ ವಿಶ್ಲೇಷಣೆ ಮಾಡಿಕೊಳ್ಳಬೇಕು. ನಮಗೇನು ಬೇಕು, ಬೇಡ ಎಂಬುದರ ಸ್ಪಷ್ಟ ಜ್ಞಾನವಿದ್ದಾಗ, ಅದಕ್ಕೆ ತಕ್ಕುದಾದ ಧೈರ್ಯದ ಹೆಜ್ಜೆಗಳನ್ನು ಇಡಬಹುದು. ಭಾವನಾಜೀವಿಗಳು ಎಂಬ ಹಣೆಪಟ್ಟಿಯನ್ನು ಮೆಲ್ಲಗೆ ಸರಿಸಿ, ಯಾವುದಕ್ಕೆ ಎಷ್ಟು ಆದ್ಯತೆ ಕೊಡಬೇಕು ಎಂಬ ವಾಸ್ತವಿಕತೆಯನ್ನು ಒಪ್ಪಿಕೊಳ್ಳೋಣ. ನವರಾತ್ರಿಯ ಹೊಸ್ತಿಲಲ್ಲಿ ಭಾವಪ್ರಪಂಚದ ಏರಿಳಿತಗಳನ್ನು ಅರ್ಥೈಸಿಕೊಳ್ಳುತ್ತ ನವ ಸ್ಪರ್ಶ ನೀಡೋಣ.

ನಿಮಗೆ ನೀವೇ ಆದ್ಯರಾಗಿ

ಜವಾಬ್ದಾರಿಗಳ ನಡುವೆ ಕಳೆದುಹೋಗಿದ್ದರೆ ನಿಮ್ಮ ಇಷ್ಟದ ಕೆಲಸವೇನು? ಎಂಬುದನ್ನು ಮೊದಲು ಮನನ ಮಾಡಿಕೊಳ್ಳಿ. ಹೊಸತೇನಾದರೂ ಪ್ರಯತ್ನಿಸಲು ಆರಂಭಿಸಿ. ಜವಾಬ್ದಾರಿಗಳ ನಡುವೆ ಸಣ್ಣ ಸಣ್ಣ ಖುಷಿ ಕೊಡುವ ಪೇಂಟಿಂಗ್, ಆಭರಣ ತಯಾರಿ, ಕಸೂತಿ, ಸಂಗೀತ ಕಲಿಯುವಿಕೆ, ನಾಲ್ಕು ಸಾಲು ಗೀಚಿಯಾದರೂ ಹಗುರಾಗಿ. ಮೈ ಚಳಿ ಬಿಟ್ಟು ಈಜಬೇಕು ಎಂದು ಎಂದಾದರೂ ಕನಸು ಕಂಡಿದ್ದರೆ, ಅದನ್ನು ಪೂರೈಸಿಕೊಳ್ಳಲು ಮನಸ್ಸು ಮಾಡಿ. ನಿಮ್ಮೊಳಗಿನ ನಿಮಗೆ ಮೊದಲ ಆದ್ಯತೆ ಕೊಡಿ. ಅದಕ್ಕಾಗಿ ದಿನಕ್ಕೆ ಅರ್ಧಗಂಟೆಯನ್ನು ಮೀಸಲಿಡಿ.

ತೀರ್ಪುಗಾರರನ್ನು ನಿಭಾಯಿಸಿ

ಕೇಳದಿದ್ದರೂ ಅಭಿಪ್ರಾಯ, ತೀರ್ಪು ಮಂಡಿಸುವವರಿಂದ ನೋವು ಅಧಿಕ. ಹೆಣ್ಣುಮಕ್ಕಳ ಪ್ರತಿ ನಡೆಯನ್ನು 'ಇವಳು ಹೀಗೆ' ಅದಕ್ಕೆ 'ಹೀಗಾಗಿದೆ' ಎಂದು ತೀರ್ಪು ನೀಡುವವರು ಇದ್ದೇ ಇರುತ್ತಾರೆ. ಅವರಿಂದ ದೂರವಿರುವುದು ಕಷ್ಟ. ಹಾಗಾಗಿ ಅವರನ್ನು ನಿಭಾಯಿಸುವುದು ಒಂದು ಕೌಶಲ. ಯಾರಾದರೂ 'ಕಾಡೆಮ್ಮೆ'ಯ ಹಾಗೆ ಇದ್ದೀಯಾ ಎಂದು ಚೋದ್ಯ ಮಾಡಿದರೆ, 'ಕಾಡೆಮ್ಮೆಯೇ ಇಷ್ಟದ ಪ್ರಾಣಿ' ಎಂದು ಹೇಳಲು ಮರೆಯದಿರಿ. ಸುಖಾಸುಮ್ಮನೆ ಬರುವ ಪ್ರತಿ ತೀರ್ಪಿಗೆ ತಲೆ ಕೆಡಿಸಿಕೊಳ್ಳುತ್ತಾ ಕುಳಿತರೆ ಸಮಯ ವ್ಯರ್ಥ. ಬೇರೆಯವರ ತೀರ್ಪಿನ, ಅಭಿಪ್ರಾಯಗಳ ಕನ್ನಡಿಯಿಂದ ನಿಮ್ಮ ನಿಲುವನ್ನು ನೋಡಿಕೊಳ್ಳುವುದನ್ನು ಬಿಟ್ಟುಬಿಡಿ. ಹಾಗೆಯೇ ಬೇರೆಯವರ ಮಾತುಗಳನ್ನು ಯಾವುದೇ ಪೂರ್ವಗ್ರಹವಿಲ್ಲದೇ ಆಲಿಸಿ. ಪ್ರತಿಕ್ರಿಯೆ ನೀಡುವ ಸಲುವಾಗಿಯೇ ಮಾತನಾಡುವುದಿದ್ದರೆ ಮಾತಿಗಿಂತ ಮೌನವೇ ಲೇಸಲ್ಲವೇ.

ಸ್ವಆರೈಕೆ ಇರಲಿ

ಮನೆ, ಕೆಲಸ, ಕುಟುಂಬ, ಮಕ್ಕಳು ಹೀಗೆ ಎಲ್ಲದರ ನಡುವೆ ಕಳೆದು ಹೋಗಿದ್ದರೆ, ಪ್ರತಿ ಕ್ಷಣ ಆತಂಕ, ಒತ್ತಡ ಅನುಭವಿಸುತ್ತಿದ್ದರೆ ಕೂಡಲೇ ಸ್ವಆರೈಕೆಗೆ ಮುಂದಾಗಿ. ಬೇರೆಯವರ ಆರೈಕೆಯಲ್ಲಿ ಕಳೆಯುವ ನಮಗೆ ಸ್ವಆರೈಕೆಯೂ ಗೊತ್ತಿರಲಿ. ನಮ್ಮ ಅಗತ್ಯಗಳಿಗೆ ಮನ್ನಣೆ ನೀಡೋಣ. ಯಾವುದಾದರೂ ಸ್ಪಾಗೆ ಹೋಗಿ ಕಾಲ ಕಳೆಯಬೇಕು ಎನಿಸಿದರೆ, ಏನನ್ನಾದರೂ ಓದುತ್ತಾ ಚಿಪ್ಸ್ ತಿನ್ನಬೇಕು ಎನಿಸಿದರೆ ಅದನ್ನೇ ಮಾಡೋಣ. ಯಾರು ಏನು ಅಂದುಕೊಳ್ಳೋತ್ತಾರೋ ಎನ್ನುವ ಆಲೋಚನೆಗಳಿಗೆ ಸಾಧ್ಯವಾದಷ್ಟು ವಿರಾಮ ಹಾಕೋಣ.

ತಪ್ಪಿಗೂ ಒಪ್ಪಿಗೂ ಸೂತ್ರಧಾರರಾಗಿ

ಬದುಕಿನಲ್ಲಿ ಸಮಸ್ಯೆಗಳು ಬಂದು ಹೋಗುತ್ತಿರುತ್ತವೆ. ವೈಯಕ್ತಿಕ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಆಯ್ಕೆ ನೀವೇ ಇಟ್ಟುಕೊಳ್ಳಿ. ತಪ್ಪಾಗಿ ಬಿಡುತ್ತದೆ ಎಂಬ ಆತಂಕದಲ್ಲಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಹಿಂಜರಿಯಬೇಡಿ. ದುಡಿದು ಹಣ ಗಳಿಸಿದ್ದರೆ, ಅದರ ಹೂಡಿಕೆ ಯಾವುದರಲ್ಲಿ ಮಾಡುವುದು ಸೂಕ್ತ ಎಂಬುದು ಸ್ಪಷ್ಟವಾಗಿ ತಿಳಿದುಕೊಳ್ಳಿ. ಭೂಮಿ , ಚಿನ್ನ, ಮನೆ, ಷೇರು ಖರೀದಿ ಹೀಗೆ ಯಾವುದರಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು ಎಂಬುದರ ಬಗ್ಗೆ ತಿಳಿದಿರಲಿ. ದುಡಿಯುವಷ್ಟೆ ಚೆನ್ನಾಗಿ ಆರ್ಥಿಕ ಶಿಸ್ತು ಹಾಗೂ ಜ್ಞಾನವನ್ನು ಬೆಳೆಸಿಕೊಳ್ಳುವುದರಲ್ಲಿ ಹಿಂದೆ ಬೀಳಬೇಡಿ. ವೈಯಕ್ತಿಕ ಬದುಕಿನಲ್ಲಿ ಅತ್ಯಾಪ್ತರೇ ಇರಲಿ, ಅಭಿಪ್ರಾಯ ಹೇಳಲೂ ಮಾತ್ರ ಅವಕಾಶ ಮಾಡಿಕೊಡಿ. ನಿರ್ಧಾರದ ದಾಳವನ್ನು ನೀವೇ ಉರುಳಿಸಿ.

ಅಪೂರ್ಣತೆಯೇ ಅಂತಿಮ

ಇಲ್ಲಿ ಯಾರೂ ಪರಿಪೂರ್ಣರಲ್ಲ. ಜೀವನದಲ್ಲಿ ಒಂದು ಉದ್ದೇಶ, ಅದನ್ನು ಈಡೇರಿಸಲು ನಡೆಸುವ ಎಲ್ಲ ಕಸರತ್ತು, ಹೊಸದೇನಾದರೂ ಪ್ರಯತ್ನಿಸುವ ಹಂಬಲ ಇವೆಲ್ಲವೂ ಮುಖ್ಯ. ಪರಿಪೂರ್ಣರಾಗುವ ದಿಕ್ಕಿನಲ್ಲಿ ಹೊಸತನ್ನು ಪ್ರಯತ್ನಿಸುವುದನ್ನು ಮರೆಯದಿರಿ. ಇದರಿಂದ ಅವಕಾಶ ಹಾಗೂ ಖುಷಿಯಿಂದ ವಂಚಿತರಾಗುತ್ತೀರ. ಹಾಗೆಯೇ ಪರಿಪೂರ್ಣತೆಯನ್ನು ಇತರರಿಂದ ನಿರೀಕ್ಷಿಸುವುದನ್ನು ಬಿಟ್ಟಾಗ ಹೆಚ್ಚು ಖುಷಿಯಿಂದ ಇರಲು ಸಾಧ್ಯ.

ಆರಾಮವಲಯದಿಂದ ಹೊರಬನ್ನಿ

ಸ್ವಾವಲಂಬನೆಯೆಂಬುದು ಮನಸ್ಸು ಹಾಗೂ ಅಸ್ತಿತ್ವಕ್ಕೆ ಸಂಬಂಧಿಸಿದ್ದು. ಅದಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಿ. ಎಂಥ ಆರಾಮವಲಯದಲ್ಲಿ ಇದ್ದರೂ ಇವರೆಡಕ್ಕೆ ಧಕ್ಕೆಯಾಗುವುದನ್ನು ತಪ್ಪಿಸಿ. ಆರಾಮವಲಯದಿಂದ ಹೊರಬರುವುದು ಎಂದರೆ ವಿಪರೀತ ಸವಾಲುಗಳನ್ನು ಸ್ವೀಕರಿಸುವುದು ಎಂದರ್ಥವಲ್ಲ. ಸಣ್ಣ ಸಣ್ಣ ಹೆಜ್ಜೆಗಳನ್ನು ಇಡುತ್ತ ದೊಡ್ಡದನ್ನು ಸಾಧಿಸಲು ಆರಾಮವಲಯದಿಂದ ಹೊರಬರುವುದೇ ಮೊದಲನೇ ಹೆಜ್ಜೆ.

ಇಲ್ಲ ಎಂಬುದನ್ನು ಕಲಿಯಿರಿ

ಯಾವಾಗ ಇಲ್ಲ ಎನ್ನಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇರಲಿ. ಇಂಥದ್ದನ್ನು ಮಾಡೋಣವೆಂದು ಯಾರಾದರೂ ಹೇಳಿದರೆ, ಇಷ್ಟವಿಲ್ಲ ಎಂದಾದರೆ ಸ್ಪಷ್ಟವಾಗಿ 'ಇಲ್ಲ ಆಗುವುದಿಲ್ಲ' ಎಂದು ಹೇಳುವುದನ್ನು ಕಲಿಯಿರಿ. ಇದರಿಂದ ಏಕಕಾಲಕ್ಕೆ ನಮ್ಮ ಹಾಗೂ ಇತರರ ಭಾವನೆಗಳಿಗೆ ಬೆಲೆ ಕೊಟ್ಟಂತೆ ಆಗುತ್ತದೆ. ಇಷ್ಟವಿಲ್ಲದ್ದನ್ನು ಇಲ್ಲ ಎಂದಾಗ ಉಳಿದವರಿಂದ ಪ್ರತಿರೋಧ ಬರುವುದು ಸಹಜ. ಇಲ್ಲ ಎಂದು ಹೇಳುವುದಷ್ಟೆ ಸಲೀಸಾಗಿ ಇತರರ ಪ್ರತಿರೋಧವನ್ನು ನಾಜೂಕಾಗಿ ನಿಭಾಯಿಸಲು ಕಲಿಯಿರಿ. ಬದುಕು ಪೋಲಿಂಗ್ ಕ್ಯಾಂಪೇನ್ ಅಲ್ಲ. ನಮ್ಮ ನಿರ್ಧಾರಗಳಿಗೆ ಉಳಿದವರ ಒಮ್ಮತದ ಮೊಹರು ಇರಬೇಕೆಂದು ನಿರೀಕ್ಷಿಸಬೇಡಿ.

ನಿರಾಶೆಯನ್ನು ಒಳಗೊಳ್ಳಿ

ಹೊಸತೇನಾದರೂ ಪ್ರಯತ್ನಿಸಿದಾಗ ಯಶಸ್ಸು ಸಿಗದೇ ಹೋದರೆ ನಿರಾಶರಾಗುವುದು ಸಹಜ. ಅದು ಬದುಕಿನ ಭಾಗವೆಂಬುದನ್ನು ಮರೆಯದಿರಿ. ಹಾಗೆಂದ ಮಾತ್ರಕ್ಕೆ ತೆಗೆದುಕೊಂಡ ನಿರ್ಧಾರವೇ ತಪ್ಪು ಎಂಬ ಅಭಿಪ್ರಾಯಕ್ಕೆ ಬರಬೇಡಿ.

ತಪ್ಪಿತಸ್ಥ ಭಾವನೆಯನ್ನು ಬಿಟ್ಟುಬಿಡಿ

ಈ ಬದುಕಿನಲ್ಲಿ ಅನವಶ್ಯಕವಾಗಿ ಬಂದುಹೋಗುವ ತಪ್ಪಿತಸ್ಥ ಭಾವನೆಗಳಿಗೆ ಬೆಲೆ ಕೊಟ್ಟು, ಅವೇ ನಿಮ್ಮ ಸುತ್ತ ಇರುವಂತೆ ಮಾಡಿಕೊಳ್ಳಬೇಡಿ.. 'ಅಯ್ಯೊ ನಾ ಮನೆಯಲ್ಲಿ ಇದ್ದಿದ್ದರೆ ಮಗು ಬೀಳುತ್ತಿರಲಿಲ್ಲ' ಎಂಬುದರಿಂದ ಹಿಡಿದು, ಮಗು, ಗಂಡ, ಅತ್ತೆ ಮಾವನನ್ನು ಬಿಟ್ಟು ಒಬ್ಬಳೇ ಸಿನಿಮಾ ನೋಡುವುದಾ? ಎಂದು ಕೊರಗಬೇಡಿ. ಅತಿ ಆಲೋಚನೆಗಳು ನಿಮ್ಮೊಳಗೆ ಆತಂಕವನ್ನು ತುಂಬಬಲ್ಲವೇ ಹೊರತು ಆತ್ಮವಿಶ್ವಾಸವನ್ನಲ್ಲ.



ಕುಷ್ಮಾಂಡ



ಸ್ಕಂದಮಾತಾ




ಕಾತ್ಯಾಯಿನಿ

ನವರಂಗ, ನವಭಾವ ವರ್ಣರಂಜಿತ ಜೀವನ



ಚಂದ್ರಘಂಟಾ



ಬ್ರಹ್ಮಚಾರಿಣಿ



ಶೈಲಪುತ್ರಿ

ನವರಾತ್ರಿ ಬರುತಲಿರುವಾಗ ಮನೆಯ ಸೀರೆಗಳನ್ನೆಲ್ಲ ಕಿತ್ತಿಡುವುದು ಸಾಮಾನ್ಯ. ಹುಡುಕಿ ಒಂಬತ್ತು ಬಣ್ಣಗಳನ್ನು ಹೊಂದಿಸಿಡಬೇಕು. ಯಾವ ಸೀರೆಗೆ, ಯಾವ ರವಿಕೆ? ಯಾವ ಬಣ್ಣಕ್ಕೆ ಯಾವ ಒಡವೆ? ಆಯ್ಕೆಗಳಿದ್ದಷ್ಟೂ ಕಷ್ಟ ಕಷ್ಟ. ಈ ಸೀರೆಯಲ್ಲಿ ಕಳೆದ ವರ್ಷ ಫೋಟೊ ಶೂಟ್ ಆಗಿದೆ. ಹೊಸದೇನಿದೆ ವಾರ್ಡ್‌ರೋಬಲ್ಲಿ ಅನ್ನುವ ಪ್ರಶ್ನೆ ಚೌತಿ ನಂತರದಿಂದಲೇ ಆರಂಭವಾಗುತ್ತದೆ. ಈ ನವರಾತ್ರಿಯ ನವರಂಗು ಕಲ್ಪನೆ ಶುರುವಾಗಿದ್ದೇ ಆರೇಳು ವರ್ಷಗಳಿಂದ. ನವದುರ್ಗೆಯರಿಗೆ ಒಂದೊಂದು ಬಣ್ಣವಿದೆ ಎಂಬುದನ್ನು ಕವಿರತ್ನ ಕಾಳಿದಾಸ ಚಿತ್ರದಲ್ಲಿ ಜಯಪ್ರದಾ ಅವರನ್ನು ನೋಡಿಯೇ ಬೆರಗುಗೊಂಡಿದ್ದರು. ಆದರೆ ಪ್ರತಿದಿನವೂ ಒಂದು ಬಣ್ಣ ಉಟ್ಟು ಸಂಭ್ರಮಿಸುವ ಸಂಪ್ರದಾಯ ಶುರುವಾಗಿದ್ದು ಇತ್ತೀಚೆಗೆ.

ಇದೀಗ ಮಾರುಕಟ್ಟೆಯೂ ಈ ಬಣ್ಣಗಳ ಭಾವನೆಗಳನ್ನು, ಭಾವನೆಗಳ ಬಣ್ಣಗಳನ್ನೂ ಧಂಡಿಯಾಗಿ ನೀಡಲಾಗುತ್ತಿದೆ. ಕೆಲವು ಮಳಿಗೆಗಳಂತೂ ಒಂಬತ್ತೂ ಬಣ್ಣಗಳ ಸೀರೆಯ ಸೆಟ್‌ಗಳನ್ನೇ ಮಾರಾಟ ಮಾಡುತ್ತಿದ್ದಾರೆ. ರಿಯಾಯಿತಿ ದರದ ಆಮಿಶವನ್ನೂ ಒಡ್ಡಿದ್ದಾರೆ. ಒಂಬತ್ತು ಬಗೆಯ, ಒಂಬತ್ತು ಬಣ್ಣಗಳ ಸೀರೆಗಳ ಆಯ್ಕೆ ನಿಮಗೆ ನೀಡಲಾಗುತ್ತಿದೆ. ಹಬ್ಬಕ್ಕೆ ವೈವಿಧ್ಯಮಯ ಸೀರೆ ಸಂಗ್ರಹ ನಿಮ್ಮದಾಗಿರಲಿ ಎಂಬ ಆಸೆ ನಿಮಗಿದ್ದರೆ ಭಾರತೀಯ ಪರಂಪರೆಯಲ್ಲಿ ವಿಶೇಷ ಸ್ಥಾನ ಪಡೆದಿರುವ ಈ ಒಂಬತ್ತು ಬಗೆಯ ಸೀರೆಗಳು ನಿಮ್ಮ ಸಂಗ್ರಹದಲ್ಲಿರಲಿ. ಇಳಕಲ್ ಚಂದ್ರಕಾಳಿ, ಈಕತ್ ಅಥವಾ ಪೋಚಂಪಲ್ಲಿ, ಧರ್ಮಾವರಂ, ಕಂಜೀವರಂ, ಪಾಶ್ಮಿನಾ, ಬನಾರಸ್, ಮೈಸೂರು ಸಿಲ್ಕ್ ಕ್ರೇಪ್, ಪಟೋಲಾ, ಜಾಮ್ದಾನಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ, ಗುಜರಾತ್‌ನಿಂದ ಆಸ್ಸಾಮ್‌ವರೆಗೂ ಭಾರತೀಯ ವಸ್ತ್ರವೈಭವವನ್ನು ಕಾಣಬಹುದಾಗಿದೆ. ನಿಮ್ಮ ಸಂಗ್ರಹದಲ್ಲಿ ಈ ಸೀರೆಗಳೊಂದಿಗೆ ಇರಲೇಬೇಕಾದ ಇನ್ನಷ್ಟು ಸೀರೆಗಳೆಂದರೆ, ಪೈಠಣಿ, ಬಾಂಧನಿ, ಗದ್ವಾಲ್, ಮಾಹೇಶ್ವರಿ, ಮಂಗಳಗಿರಿ, ಢಕೈ, ಬೆಂಗಾಲಿ ಕಾಟನ್, ಮಫ್ಫೈ, ಕೋಟಾ, ಚಿಕನ್‌ಕಾರಿ, ಕಾಶ್ಮೀರಿ, ಟಸ್ಸರ್, ಟಿಶ್ಯು, ಮಲ್‌ಮಲ್, ಮಖಮಲ್ ಮುಂತಾದ ಸೀರೆಗಳು ನಿಮ್ಮ ಸಂಗ್ರಹದಲ್ಲಿರಲೇಬೇಕು. ಕನ್ನಡಿಗರ ಬಳಿಯಂತೂ ಮೊಳಕಾಲ್ಮೂರು, ಇಳಕಲ್, ಬೆಟಗೇರಿ, ಬೆಳಗಾವಿಯ ಶಾಪುರಿ ಮತ್ತು ಪೈಠಣಿಗಳ ಜೊತೆಗೆ ಉಡುಪಿಯ ಸೀರೆಗಳೂ ಇದ್ದರೆ ಚಂದ.

- ಮೊದಲ ದಿನ ಶೈಲಪುತ್ರಿಯನ್ನು ಆರಾಧಿಸಲಾಗುತ್ತದೆ. ಹಳದಿ ಬಣ್ಣದ ಉಡುಗೆ ಧರಿಸಿದರೆ ದಿನವಿಡೀ ಅಮಿತ ಉತ್ಸಾಹದಿಂದ, ಅಚಲ ವಿಶ್ವಾಸದಿಂದ ಇರುತ್ತೀರಿ. ಪರ್ವತ ದೊರೆಯ ಪುತ್ರಿ ಆತ್ಮವಿಶ್ವಾಸದ ಪ್ರತೀಕವಾಗಿದ್ದಾಳೆ.
- **ಎರಡನೆಯ ದಿನ ಬ್ರಹ್ಮಚಾರಿಣಿ:** ಹಸಿರು ಬಣ್ಣ ಸಮೃದ್ಧಿ ಮತ್ತು ಬದ್ಧತೆಯ ಪ್ರತೀಕವಾಗಿದೆ ಈ ಬಣ್ಣ.
- **ಚಂದ್ರಘಂಟಾ:** ಬೂದುಬಣ್ಣದ ಉಡುಗೆ ಧರಿಸಿ ಚಂದ್ರಘಂಟಾ ದೇವಿಯನ್ನು ಭಜಿಸಬೇಕು. ಬದುಕಿನ ಏರಿಳಿತಗಳೇನೇ ಇದ್ದರೂ ಶೋಭಾಯಮಾನವಾಗಿ ಪ್ರಜ್ವಲಿಸಲು ಚಂದ್ರಘಂಟಾ ದೇವಿಯನ್ನು ಪೂಜಿಸಲಾಗುತ್ತದೆ.
- **ಕುಷ್ಮಾಂಡ:** ನಗುತ್ತಲೇ, ಮುಗುಳ್ನಗೆಯಿಂದಲೇ ವಿಶ್ವ ಸೃಷ್ಟಿಸಿದಳು ಎಂಬುದೊಂದು ಪ್ರತೀತಿ. ಕಿತ್ತಳೆ ಬಣ್ಣ, ಖುಷಿಯನ್ನು ಪ್ರತಿಪಾದಿಸುತ್ತ, ಎಲ್ಲವನ್ನೂ ನಗುನಗುತ್ತಲೇ ಸ್ವೀಕರಿಸುವೆ ಎಂಬ ಗುಣವನ್ನು ನೀಡುತ್ತದೆ.
- **ಸ್ಕಂದಮಾತಾ:** ಸ್ಥೈರ್ಯ ಮತ್ತು ಪರಿಶುದ್ಧತೆಯ ಪ್ರತೀಕ. ಶುಭ್ರಶ್ವೇತ ವರ್ಣದ ವಸ್ತ್ರ ಧರಿಸಬೇಕು.
- **ಕಾತ್ಯಾಯಿನಿ:** ದುಷ್ಟಸಂಹಾರ ಮಾಡಿ, ಭಕ್ತರನ್ನು ಪ್ರೀತಿಯಿಂದ ಸಲುಹುವ ಕಾತ್ಯಾಯಿನಿ ಮಾತೆ. ಕೆಂಪು ಬಣ್ಣದ ವಸ್ತ್ರಗಳನ್ನು ಧರಿಸುವುದು ಆಪ್ಯಾಯಮಾನವಾಗಿದೆ.
- **ಕಾಳರಾತ್ರಿ:** ದುಷ್ಟಸಂಹಾರಕ್ಕಾಗಿ ಅತ್ಯುಗ್ರ ರೂಪ ಧರಿಸುವ ರಾತ್ರಿ ಇದಾಗಿದೆ. ಕಡುನೀಲಿ ಬಣ್ಣದ ಉಡುಪನ್ನು ಧರಿಸಿ, ದುಷ್ಟತನ, ಕೆಡುಕುಗಳ ವಿರುದ್ಧ ಹೋರಾಡುವ ಕೆಚ್ಚೆದೆಯನ್ನು ಮೈಗೂಡಿಸಿಕೊಳ್ಳಬೇಕು.
- **ಮಹಾಗೌರಿ:** ತಾಯ್ತನದ ರೂಪವನ್ನೇ ಹೊತ್ತು, ತಪ್ಪುಗಳನ್ನೆಲ್ಲ ಕ್ಷಮಿಸಿ ಪರಿಶುದ್ಧವಾಗಿಸುವ ದೇವಿ. ಗುಲಾಬಿ ಸೀರೆಯನ್ನುಟ್ಟು, ಕ್ಷಮಿಸಬಹುದಾದ ದೋಷಗಳನ್ನು ಕ್ಷಮಿಸಿ, ತಾಯ್ತನದಿಂದ ಎಲ್ಲವನ್ನೂ ಒಪ್ಪಿಕೊಳ್ಳುವ ಸಂಕೇತ ಈ ದೇವಿಯದ್ದಾಗಿದೆ.
- **ಸಿದ್ಧಿಧಾತ್ರಿ:** ನಿಮ್ಮೆಲ್ಲ ಪರಿಶ್ರಮಗಳನ್ನು ಪರಿಗಣಿಸಿ ಸಾಧಕರಾಗಿಸುವ ಶಕ್ತಿದಾತೆ ಸಿದ್ಧಿ ಧಾತ್ರಿ. ನೇರಳೆ ಬಣ್ಣವನ್ನು ಧರಿಸಿ, ನವರಾತ್ರಿಯನ್ನು ಸಂಪನ್ನಗೊಳಿಸಬಹುದು. ಈ ನವಶಕ್ತಿಗಳನ್ನು ಉಡುವುದು ತೊಡುವುದು ಅಷ್ಟೇ ಅಲ್ಲ, ಧಾರಣೆಯೊಂದಿಗೆ ಆಚರಣೆಯೂ ಸೇರ್ಪಡೆಯಾಗಬೇಕು. ನವರಾತ್ರಿಯ ನಂತರ ನಿಮ್ಮ ವ್ಯಕ್ತಿತ್ವದಲ್ಲಿಯೂ ಬದಲಾವಣೆ ಕಂಡು ಬರುವುದು.



ಕಾಳರಾತ್ರಿ



ಮಹಾಗೌರಿ



ಸಿದ್ಧಿಧಾತ್ರಿ

ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ದೇವಾಲಯದ ಆವರಣದಲ್ಲಿ ಅಲಂಕರಿಸಿದ ದೇವಿಯ ವಿವಿಧ ಅವತಾರಗಳ ವಿಗ್ರಹಗಳು: ಪ್ರಜಾವಾಣಿ ಸಂಗ್ರಹ ಚಿತ್ರ: ಗೋವಿಂದರಾಜ ಜವಳಿ

ಮಕ್ಕಳೇಕೆ ಹೊಡೆಯುತ್ತಾರೆ?

ಅಂತರಂಗ



ಅಕ್ಷರ ದಾಮ್ಲೆ

- **ನನ್ನ ಮಗ ಇದೀಗ ನಾಲ್ಕನೆ ಕ್ಲಾಸು. ಆದರೆ ವಿಪರೀತ ಹಿಂಸೆ ಕೊಡ್ತಾನೆ. ಶಾಲೆಯಲ್ಲಿಯೂ ತನ್ನ ಸಹಪಾಠಿಗಳಿಗೆ ಹೊಡಿ ಬಡಿ ಮಾಡ್ತಾನೆ. ಮನೆಯಲ್ಲಿ ನನಗೂ ತನ್ನ ತಲೆಯಿಂದ ಗುದ್ದೋದು, ಜೋರಾಗಿ ಗಿಂಡೋದು ಮಾಡ್ತಾನೆ. ಜೋರು ಮಾಡಿದರೆ ತಾನೇ ತನ್ನ ಕೈ ಕಚ್ಚಿಕೊಳ್ಳುತ್ತಾನೆ. ಇಲ್ಲವೇ ಹಣೆ ಚಚ್ಚಿಕೊಳ್ಳುತ್ತಾನೆ. ಯಾಕೆ ಹೀಗೆ ವರ್ತಿಸುತ್ತಾನೆ? ಅವನಿಗೆ ಸಮಾಲೋಚನೆ ಅಥವಾ ಚಿಕಿತ್ಸೆಯ ಅಗತ್ಯವಿದೆಯೇ?**

ಹೆಸರು ಬೇಡ, ಧಾರವಾಡ

ಕೆಲವೊಂದು ಬಾರಿ ಮಕ್ಕಳ ವರ್ತನೆಗಳು ಹೇಗೆ ಮತ್ತು ಯಾಕೆ ಬದಲಾಗುತ್ತವೆ ಎನ್ನುವುದು ಅರ್ಥವಾಗುವುದಿಲ್ಲ. ಆದರೆ ನಿಮ್ಮ ಮಗನ ವರ್ತನೆಗಳನ್ನು ಗಮನಿಸಿದಾಗ ಮಕ್ಕಳ ಬೆಳವಣಿಗೆಯ ಜೊತೆಗೆ ಆಗುವಂತಹ ಮಾನಸಿಕ ಬದಲಾವಣೆಗಳ ಕುರಿತು ಅಧ್ಯಯನ ಮಾಡಿದ ಜೀನ್ ಪ್ಯಾಜೆ ಅನ್ನುವವರ ಒಂದು ಕಥನ ನೆನಪಾಗುತ್ತದೆ. ಅವರು ತಮ್ಮ ಮಗಳನ್ನೇ ಗಮನಿಸುತ್ತಾ ಆಕೆ ಬೆಳೆಯುತ್ತಿದ್ದ ಹಾಗೆಯೇ ಏನೇನೆಲ್ಲಾ ಬದಲಾವಣೆಗಳನ್ನು ತೋರಿಸುತ್ತಾಳೆ ಅಂತ ದಾಖಲಿಸುತ್ತಾ ತಮ್ಮ ಸಿದ್ಧಾಂತವನ್ನು ಬೆಳೆಸಿದವರು.

ಒಂದು ಬಾರಿ ಅವರ ಸ್ನೇಹಿತ ಅವರ ಮನೆಗೆ ಊಟಕ್ಕೆ ಬರುತ್ತಾರೆ. ಹಾಗೆ ಬಂದಾಗ, ಅವರ ಮಗ ಬಹಳ ಹಠಮಾರಿತನವನ್ನು ತೋರಿಸುತ್ತಿರುತ್ತಾನೆ. ಅಂದರೆ, ಆತನಿಗೆ ಬೇಕಾದ ಹಾಗೆ ಏನಾದರೂ ಆಗದಿದ್ದರೆ, ಆತ ನೆಲದ ಮೇಲೆ ಹೊರಳಾಡಿ ತನಗೆ ಬೇಕಾದದ್ದನ್ನು ಗಿಟ್ಟಿಸಿಕೊಳ್ಳುವಂತಹ ವರ್ತನೆಯನ್ನು ತೋರ್ಪಡಿಸುತ್ತಿದ್ದ. ಅಂತೂ ಆತನನ್ನು ಹೇಗೋ ಸಂಭಾಳಿಸಿಕೊಂಡು ಪ್ಯಾಜೆ ಅವರ ಗೆಳೆಯ ತಮ್ಮ ಮನೆಗೆ ಮರಳುತ್ತಾರೆ. ಮರುದಿನ ಪ್ಯಾಜೆ ಅವರಿಗೆ ಒಂದು ಆಶ್ಚರ್ಯಕರ ವರ್ತನೆ ಅವರ ಮಗಳಲ್ಲಿ ಕಂಡುಬರುತ್ತದೆ. ಅಲ್ಲಿಯವರೆಗೆ ಯಾವುದೇ ತೀವ್ರತೆರನಾದ ಹಠಮಾರಿತನವನ್ನು ತೋರಿಸದಿದ್ದ ಆಕೆ, ಆ ದಿನ ಹಿಂದಿನ ದಿನ ಅವರ ಗೆಳೆಯನ ಮಗ ಹೇಗೆ ವರ್ತಿಸುತ್ತಿದ್ದನೋ ಹಾಗೆಯೇ ಆಕೆಯೂ ವರ್ತಿಸುತ್ತಿದ್ದಳು. ಇದರಿಂದ ಪ್ಯಾಜೆ ಅವರು ಅರ್ಥೈಸಿಕೊಂಡ ವಿಷಯವೇನೆಂದರೆ ಮಕ್ಕಳು ಇತರೆ ಮಕ್ಕಳ ವರ್ತನೆಗಳನ್ನು ಬಹಳ ಸುಲಭವಾಗಿ ಅನುಕರಿಸುತ್ತಾರೆ. ಮಾತ್ರವಲ್ಲ, ಇತರೆ ಮಕ್ಕಳಿಗೆ ಆ ರೀತಿಯ ವರ್ತನೆಗಳನ್ನು ತೋರಿಸುವುದರಿಂದ ಲಾಭವಾಗುತ್ತಿದೆ ಎಂದರೆ ಅದನ್ನು ತಮ್ಮದಾಗಿಸಿಕೊಳ್ಳುವುದಕ್ಕೆ ಅವರಿಗೆ ಹೆಚ್ಚು ಸಮಯ ಬೇಕಾಗುವುದಿಲ್ಲ.

ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಮಗನ ವರ್ತನೆಯನ್ನು ಗಮನಿಸಿ ಮತ್ತು ವಿಮರ್ಶಿಸಿ. ಬಹುಷಃ ಆತನಿಗೆ ಆ ರೀತಿಯ ಮಾದರಿಗಳು ಶಾಲೆಯಲ್ಲಿ ಅಥವಾ ಹೊರಗಡೆ ಎಲ್ಲೋ ಕಾಣಸಿಕ್ಕಿದೆ. ಮತ್ತು ಅದು ಹೆಚ್ಚು ಲಾಭದಾಯಕ ಅಂತಲೂ ಅನ್ನಿಸಿರಬೇಕು. ಈ ವರ್ತನೆಗಳನ್ನು ಕಡಮೆ ಮಾಡಲು ಜೋರು ಮಾಡುವ ಬದಲು ಆತನಿಗೆ ಅವುಗಳನ್ನು ಯಾಕೆ ಮಾಡಬಾರದು ಎಂಬುದನ್ನು ತಿಳಿ ಹೇಳಿ. ಮತ್ತು ಆತ ಮತ್ತೂ ಅಂತಹುದೇ ವರ್ತನೆಗಳನ್ನು ಮುಂದುವರೆಸಿದರೆ, ಅದರಿಂದ ನೋವಾಗುತ್ತದೆ ಅನ್ನುವುದರ ಬದಲು ನಿರ್ಲಕ್ಷ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಿ. ಯಾವಾಗ ತನ್ನ ಬಲ ಪ್ರಯೋಗದಿಂದ ಕೆಲಸಗಳು ಸಾಧ್ಯವಾಗುದಿಲ್ಲ ಎಂದು ಆತನಿಗೆ ತಿಳಿಯುತ್ತದೋ, ಆವಾಗ ತನ್ನಿಂದ ತಾನಾಗಿಯೇ ಆ ರೀತಿಯ ವರ್ತನೆಗಳನ್ನು ಕಡಮೆ ಮಾಡುತ್ತಾನೆ. ಇಷ್ಟೆಲ್ಲಾ ಮಾಡಿದ ಮೇಲೂ ಯಾವುದೇ ವ್ಯತ್ಯಾಸವಾಗದಿದ್ದಲ್ಲಿ, ಮನಃಶ್ಶಾಸ್ತ್ರಜ್ಞರ ಬಳಿ ಒಮ್ಮೆ ಕರೆದುಕೊಂಡು ಹೋಗಿ, ಅಗತ್ಯವಿದ್ದಲ್ಲಿ ಚಿಕಿತ್ಸೆ ಕೊಡಿಸಿ.

ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟ; ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚಾರ

‘ರಾಜಕೀಯಪ್ರೇರಿತ ಕೇಸ್ ಇದೇ ಮೊದಲು’

ಪ್ರಜಾವಾಣಿ ವಾರ್ತೆ



ಮೈಸೂರು: ‘ನನ್ನ ಮೇಲೆ ರಾಜಕೀಯ ಪ್ರೇರಿತ ಕೇಸ್ ಹಾಕಿರುವುದು ಇದೇ ಮೊದಲು. ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟ ಮಾಡುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿ, ‘ನನಗೆ ದೊರೆಯುತ್ತಿರುವ ಜನ ಬೆಂಬಲದಿಂದ ವಿರೋಧಪಕ್ಷಗಳು ಬೆದರಿವೆ. ತಪ್ಪು ಮಾಡಿಲ್ಲವಾದ್ದರಿಂದ ನಾನು ರಾಜೀನಾಮೆ ನೀಡುವ ಅಗತ್ಯವಿಲ್ಲ’ ಎಂದರು.

‘ಸಂವಿಧಾನದ ಆಯ್ಕೆಯಾದ ರಾಜ್ಯಪಾಲರಿಂದ ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಸರಿಯಲ್ಲ. ದೇಶದಲ್ಲಿ ಎಲ್ಲೆಲ್ಲಿ ವಿರೋಧ ಪಕ್ಷಗಳ ಸರ್ಕಾರವಿದೆಯೋ ಅಲ್ಲಿ ಕೇಂದ್ರ ಸರ್ಕಾರ ಇಡಿ, ಸಿಬಿಐ ಹಾಗೂ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ಆರೋಪಿಸಿದರು.

‘ರಾಷ್ಟ್ರಪತಿ ಅಥವಾ ರಾಜ್ಯಪಾಲರು ಸಂವಿಧಾನದ ಪ್ರಕಾರ ಕೆಲಸ ಮಾಡಲು ನಾಮನಿರ್ದೇಶನಗೊಂಡವರೇ ಹೊರತು, ಚುನಾವಣೆ ಮೂಲಕ ಆಯ್ಕೆಯಾದವರಲ್ಲ. ಅವರು ಸಂವಿಧಾನದಲ್ಲಿ ಪ್ರಮುಖರು. ಆದರೆ, ಜನಪ್ರತಿನಿಧಿಗಳು ಚುನಾವಣೆಯ ಮೂಲಕ ಆಯ್ಕೆಯಾಗಿ ಆಡಳಿತದಲ್ಲಿರುವ ಪ್ರಮುಖರು. ಈ ಪ್ರಮುಖ ವ್ಯತ್ಯಾಸವಿರುವಾಗ ರಾಜ್ಯಪಾಲರು ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಈ ಬಗ್ಗೆ ದೇಶದಾದ್ಯಂತ ಚರ್ಚೆಯಾಗಬೇಕು’ ಎಂದರು.

‘ಸರ್ಕಾರ-ರಾಜ್ಯಪಾಲರ ನಡುವಿನ ಸಂಘರ್ಷದಿಂದ ಸಂವಿಧಾನದ ಸಂಘರ್ಷ ಉಂಟಾಗುತ್ತಿದೆಯೇ’ ಎಂಬ ಪ್ರಶ್ನೆಗೆ, ‘ನಮಗೆ ಜನಬೆಂಬಲ ದೊರೆತಿದ್ದು, ಉತ್ತಮ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದೇವೆ. ಐದು ವರ್ಷದ ಅವಧಿಯಲ್ಲಿ ರಾಜ್ಯವನ್ನು ಅಭಿವೃದ್ಧಿ ಮಾಡುವಂತೆ ಜನಾದೇಶವಿದೆ’ ಎಂದರು.

‘ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನವನ್ನು ಪ್ರತಿಪಕ್ಷಗಳು ಮಾಡುತ್ತಿವೆ. ಸರ್ಕಾರವನ್ನು ಟೀಕಿಸಲು ಬಿಜೆಪಿಯವರಿಗೆ ಯಾವ ನೈತಿಕತೆಯೂ ಇಲ್ಲ. ಆಪರೇಷನ್ ಕಮಲದ ಅವರ ಪ್ರಯತ್ನ ವಿಫಲವಾಗಿದೆ’ ಎಂದರು.

‘ನಾನು ಲೋಕಾಯುಕ್ತವನ್ನು ಮುಚ್ಚಲಿಲ್ಲ. ಬಿಜೆಪಿ ಅಧಿಕಾರದಲ್ಲಿರುವ ಅನೇಕ ರಾಜ್ಯಗಳಲ್ಲಿ ಎಸಿಬಿ ಅಸ್ತಿತ್ವದಲ್ಲಿದೆ. ಬಿಜೆಪಿಯಲ್ಲಿ ತಪ್ಪು ಮಾಡದವರು ಅಥವಾ ಭ್ರಷ್ಟಾಚಾರ ಮಾಡದಿರುವ ಒಬ್ಬರೂ ಇಲ್ಲ. ಸಂವಿಧಾನ ವಿರುದ್ಧವಾಗಿ ಹಾಗೂ ಕಾನೂನು ವಿರುದ್ಧವಾಗಿ ಎಂದಿಗೂ ಯಾವುದೇ ಕೆಲಸ ಮಾಡಿಲ್ಲ; ಮಾಡುವುದಿಲ್ಲ’ ಎಂದರು. ‘ಯಾವುದೇ ಕಾರಣಕ್ಕೂ ಬಡವರ ಕಾರ್ಯಕ್ರಮಗಳನ್ನು, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ’ ಎಂದರು.

‘ರಾಜೀನಾಮೆ ನೀಡುವ ಅಗತ್ಯವಿಲ್ಲ’

ಅರಕಲಗೂಡು (ಹಾಸನ): ‘ರಾಜ್ಯದ ಜನ, ಶಾಸಕರು, ಸಚಿವರು ಹಾಗೂ ಕಾರ್ಯಕರ್ತರು ಸಿದ್ದರಾಮಯ್ಯ ಬೆಂಬಲಕ್ಕಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಅಗತ್ಯವಿಲ್ಲ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕೋರ್ಟ್ ಆದೇಶದಂತೆ ತನಿಖೆಯಾಗಲಿದ್ದು, ಸಿದ್ದರಾಮಯ್ಯ ಗೆದ್ದು ಬರಲಿದ್ದಾರೆ. ಹೀಗಾಗಿ ರಾಜೀನಾಮೆ ನೀಡಬಾರದು ಎಂದೇ ಎಲ್ಲರೂ ಹೇಳಿದ್ದೇವೆ’ ಎಂದರು.

‘ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂಬುದು ಕೆ.ಬಿ. ಕೋಳಿವಾಡರ ವೈಯಕ್ತಿಕ ಅಭಿಪ್ರಾಯ. ಅವರ ಹೇಳಿಕೆಯು ಪಕ್ಷದ ಅಭಿಪ್ರಾಯವಾಗದು’ ಎಂದರು.



ಮಧು ಬಂಗಾರಪ್ಪ

‘ಬಿಜೆಪಿಯವರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಅಕ್ರಮವಾಗಿದ್ದರೆ ಹಿಂದಿನ ಸರ್ಕಾರದಲ್ಲಿ 5 ವರ್ಷ ಏನು ಕತ್ತೆ ಕಾಯುತ್ತಿದ್ದರಾ? ಎಷ್ಟು ರಾಜಕಾರಣಿಗಳ ಮೇಲೆ ಆರೋಪಗಳಿವೆ? ಎಷ್ಟು ಮಂದಿ ಜಾಮೀನಿನ ಮೇಲಿದ್ದಾರೆ ಎಂಬುದನ್ನು ಹೇಳಬೇಕೇ? ಎಷ್ಟು ಜನ ರಾಜೀನಾಮೆ ನೀಡಿದ್ದಾರೆ’ ಎಂದು ಪ್ರಶ್ನಿಸಿದರು.

‘ರಾಜ್ಯದಲ್ಲಿ 12 ಸಾವಿರ ಶಿಕ್ಷಕರ ನೇಮಕಾತಿಯಾಗಿದ್ದು, ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಮತ್ತೆ 5 ಸಾವಿರ ಶಿಕ್ಷಕರನ್ನು ನೇಮಿಸಲು ನಿರ್ಧರಿಸಲಾಗಿದೆ’ ಎಂದರು.

ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸಿದ್ದೇನೆ. ಲೋಕಾಯುಕ್ತ ಎಸ್‌ಪಿ ಅವರು ನ್ಯಾಯಾಲಯದ ಆದೇಶಕ್ಕೆ ಪೂರಕವಾಗಿ, ಕಾನೂನು ಪ್ರಕಾರ ಕಾರ್ಯನಿರ್ವಹಿಸಿಲ್ಲ

ಸ್ನೇಹಮಯಿ ಕೃಷ್ಣ, ದೂರುದಾರ

ಮೂಲ ಕಾಂಗ್ರೆಸ್ಸಿನವರಿಂದ ಸಿದ್ದರಾಮಯ್ಯ ಬಲಿಪಶು: ಯತ್ನಾಳ



ಬೈಲಹೊಂಗಲ/ಹುಬ್ಬಳ್ಳಿ: ‘ಕಾಂಗ್ರೆಸ್‌ನವರೇ ಸಿದ್ದರಾಮಯ್ಯ ಅವರನ್ನು ಬಲಿಪಶು ಮಾಡಿದ್ದಾರೆ. ಬಹುದಿನಗಳ ಹಿಂದಿನ ಪ್ರಕರಣವನ್ನು ಬಯಲಿಗೆಳೆದವರು ಮೂಲ ಕಾಂಗ್ರೆಸ್ಸಿಗರು. ಬಿಜೆಪಿಯ ಸಮರ್ಪಕ ಹೋರಾಟದಿಂದ ಪ್ರಕರಣ ಈ ಹಂತಕ್ಕೆ ಬಂದಿದೆ. ಸಿದ್ದರಾಮಯ್ಯ ಅವರು ತನಿಖೆ ಎದುರಿಸಲಿ. ಆಗದಿದ್ದರೆ ರಾಜೀನಾಮೆ ನೀಡಲಿ’ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ನ್ಯಾಯಾಲಯ ತೀರ್ಪು ಕೊಟ್ಟ ಬಳಿಕ ರಾಜ್ಯದ ಜನ ನಿಮ್ಮನ್ನು ಒಪ್ಪಲ್ಲ. ನಿಮ್ಮ ಸುತ್ತಮುತ್ತಲಿನವರ ಮಾತು ಕೇಳಿ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ. ರಾಜ್ಯದಲ್ಲಿ ನಿಮ್ಮ (ಸಿದ್ದರಾಮಯ್ಯ) ಶಕ್ತಿ ಇದ್ದಷ್ಟು ಯಾರ ಶಕ್ತಿಯೂ ಇಲ್ಲ. ನಿಮ್ಮ ಹಿಂದೂ ವಿರೋಧಿ ಚಟುವಟಿಕೆ ಬಿಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಯಾವುದೇ ಒತ್ತಡಕ್ಕೆ ಒಳಗಾಗದೆ ಸೂಕ್ತ ರೀತಿ ತನಿಖೆ ನಡೆಸಬೇಕು’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ‘ನ್ಯಾಯಾಂಗ ವ್ಯವಸ್ಥೆ ವಿರುದ್ಧ ಸಚಿವ ಜಮೀರ್ ಅಹಮದ್ ಖಾನ್ ನೀಡಿದ ಹೇಳಿಕೆ ಸರಿಯಲ್ಲ. ಈಗಾಗಲೇ ಅವರು ನ್ಯಾಯ ವಕೀಲರ ಸಲಹೆ ಪಡೆಯುತ್ತಿರಬೇಕು. ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವ ಬಗ್ಗೆ ಚಿಂತನೆ ನಡೆಸಿರುವೆ’ ಎಂದರು.

ಸುದ್ದಿ 2 ನಿಮಿಷ

ಮುಡಾ ಅಧ್ಯಕ್ಷ ಮರೀಗೌಡಗೆ ಸ್ವಪಕ್ಷೀಯರಿಂದಲೇ ಘೇರಾವ್

ಮೈಸೂರು: ಮುಡಾ ಅಧ್ಯಕ್ಷ ಕೆ.ಮರೀಗೌಡ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಇಲ್ಲಿನ ಮಂಡಕಳ್ಳಿ ವಿಮಾನನಿಲ್ದಾಣದಲ್ಲಿ ಶುಕ್ರವಾರ ಘೇರಾವ್ ಹಾಕಿದರು.

ಸಿದ್ದರಾಮಯ್ಯ ಅವರನ್ನು ಸ್ವಾಗತಿಸಲು ಅವರ ಆಪ್ತರೂ ಆಗಿರುವ ಮರೀಗೌಡ ಅಲ್ಲಿಗೆ ಬಂದಿದ್ದ ವೇಳೆ, ಕಾಂಗ್ರೆಸ್‌ನ ನೂರಾರು ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಘೇರಾವ್ ಹಾಕಿ ವಾಪಸ್ ಕಳುಹಿಸಿದರು.

‘ಸಿದ್ದರಾಮಯ್ಯ ಅವರಿಗೆ ಎದುರಾಗಿರುವ ಪರಿಸ್ಥಿತಿಗೆ ನೀನೇ ಕಾರಣ; ಇಲ್ಲಿಗೇಕೆ ಬಂದಿದ್ದೀಯಾ?’ ಎಂದು ಆಕ್ರೋಶ ವ್ಯಕ್ತಪಡಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಸಮಾಧಾನಿಸಲು ಮುಂದಾದ ಅವರಿಗೆ, ‘ನಿನ್ನ ಭಾಷಣ ಬೇಡ, ಇಲ್ಲಿಂದ ಹೋಗು’ ಎಂದು ಬಲವಂತವಾಗಿ ಕಾರು ಹತ್ತಿಸಿ, ಕಾರನ್ನು ಬಡಿಯುತ್ತಾ ವಾಪಸ್ ಕಳುಹಿಸಿದರು.

ಅಭಿಮಾನಿಗಳಿಂದ ಬೆಂಬಲ: ಸಿದ್ದರಾಮಯ್ಯ ಅವರ ಅಭಿಮಾನಿಗಳು ವಿಮಾನನಿಲ್ದಾಣ ಹಾಗೂ ಜಿಲ್ಲಾ ಪಂಚಾಯಿತಿ ಬಳಿ ಬೆಂಬಲ ವ್ಯಕ್ತಪಡಿಸಿ, ‘ನಿಮ್ಮೊಂದಿಗೆ ನಾವಿದ್ದೇವೆ; ಯಾವುದಕ್ಕೂ ಹೆದರಬೇಡಿ’ ಎಂದರು. ಬಿಜೆಪಿ-ಜೆಡಿಎಸ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ನಂತರ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ನಾನು ಯಾರನ್ನೂ ಕರೆದಿಲ್ಲ. ಆದರೂ ಬೆಂಬಲಿಗರು ನನ್ನನ್ನು ಸ್ವಾಗತಿಸಲು ಅಪಾರ ಸಂಖ್ಯೆಯಲ್ಲಿ ಪ್ರೀತಿಯಿಂದ ಬಂದಿದ್ದಾರೆ. ನನಗೆ ಯಾವ ಭಯವೂ ಇಲ್ಲ. ಭಯಪಟ್ಟುಕೊಂಡಿರುವ ಅವಶ್ಯಕತೆಯಿದ್ದೇನೆಯೇ’ ಎಂದು ಕೇಳಿದರು.

ಕೃಷ್ಣ ವಿರುದ್ಧ ವಂಚನೆ ಪ್ರಕರಣ: ವಿಚಾರಣೆಗೆ ಹಾಜರು



ಚಾಮರಾಜನಗರ: ಮುಡಾ ನಿವೇಶನ ಹಂಚಿಕೆ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿರುವ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ವಿರುದ್ಧ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ವಂಚನೆ ಪ್ರಕರಣ ದಾಖಲಾಗಿದ್ದು, ಅವರು ಶುಕ್ರವಾರ ವಿಚಾರಣೆಗೆ ಹಾಜರಾದರು.

‘2018, 2019 ಹಾಗೂ 2020ರಲ್ಲಿ ತಲಾ ₹1 ಲಕ್ಷದಂತೆ ಸ್ನೇಹಮಯಿ ಕೃಷ್ಣ ಅವರಿಗೆ ಸಾಲ ನೀಡಿದ್ದು, ಪ್ರಾಮಿಸರಿ ನೋಟ್ ಕೂಡ ಬರೆದುಕೊಟ್ಟಿದ್ದಾರೆ. ಸಾಲ ಹಿಂತಿರುಗಿಸದೆ ವಂಚನೆ ಎಸಗಿದ್ದರಿಂದ ಪ್ರಕರಣ ದಾಖಲಿಸಿದ್ದು, ಮೂರು ವರ್ಷಗಳಿಂದ ವಿಚಾರಣೆ ನಡೆಯುತ್ತಿದೆ’ ಎಂದು ದೂರುದಾರ ಕರುಣಾಕರ ತಿಳಿಸಿದರು.

‘ಮೊದಲು ಸ್ವಲ್ಪ ಸಾಲ ಪಡೆದು ಬಡ್ಡಿ ಸಮೇತ ತೀರಿಸಿ ವಿಶ್ವಾಸ ಗಳಿಸಿದ ಕೃಷ್ಣ, ಬಳಿಕ ಮತ್ತೆ ಸಾಲ ಪಡೆದು ಹಿಂದಿರುಗಿಸಿಲ್ಲ. ಚೆಕ್ ಅಥವಾ ಆರ್‌ಟಿಜಿಎಸ್ ಮೂಲಕ ಹಣ ಪಡೆಯದೆ ನಗದು ಪಡೆದಿದ್ದರು. ಈಗ, ಪರವಾನಗಿ ಇಲ್ಲದೆ ಫೈನಾನ್ಸ್ ಮಾಡುತ್ತಿರುವುದಾಗಿ ನನ್ನ ವಿರುದ್ಧವೇ ದೂರು ನೀಡಿದ್ದಾರೆ’ ಎಂದರು.

‘₹ 50 ಸಾವಿರವಷ್ಟೇ ಸಾಲ ಪಡೆದಿದ್ದೇನೆ. ಆದರೂ, ₹ 3 ಲಕ್ಷ ಸಾಲ ಪಡೆದಿರುವುದಾಗಿ ಪ್ರಾಮಿಸರಿ ನೋಟ್ ಬರೆಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಬಡ್ಡಿ ಕಟ್ಟುತ್ತಿದ್ದು, ನ್ಯಾಯಾಧೀಶರ ಮುಂದೆಯೂ ಹೇಳಿಕೆ ದಾಖಲಿಸಿದ್ದೇನೆ. ಶೀಘ್ರ ಸತ್ಯಾಂಶ ಹೊರಬೀಳಲಿದೆ. ನನ್ನ ವಿರುದ್ಧ 22 ಪ್ರಕರಣ ದಾಖಲಾಗಿದ್ದು, 9 ಪ್ರಕರಣಗಳು ಬೋಗಸ್, 8 ಪ್ರಕರಣಗಳಲ್ಲಿ ನಿರಪರಾಧಿ ಎಂದು ಸಾಬೀತಾಗಿದೆ. 3 ಪ್ರಕರಣಗಳ ವಿಚಾರಣೆ ನಡೆದಿದೆ’ ಎಂದು ಕೃಷ್ಣ ಪ್ರತಿಕ್ರಿಯಿಸಿದರು.

ನಿರ್ಮಲಾ ರಾಜೀನಾಮೆ ಕೊಡ್ತಾರಾ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಿಸಲು ನ್ಯಾಯಾಲಯ ಆದೇಶಿಸಿದ್ದು, ಅವರು ರಾಜೀನಾಮೆ ಕೊಡುತ್ತಾರೆಯೇ?’ ಎಂದು ಇಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ರಾತ್ರಿ ಕೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿ, ‘ಚುನಾವಣಾ ಬಾಂಡ್ ಮೂಲಕ ಅವರು ಸುಲಿಗೆ ಮಾಡುತ್ತಿದ್ದರು. ಎಫ್‌ಐಆರ್ ಆದ ಮೇಲೆ ಅವರು ರಾಜೀನಾಮೆ ಕೊಡ್ತಾರಾ? ಬಿಜೆಪಿಯವರು ಕೇಳುತ್ತಾರಾ?’ ಎಂದರು.

‘ನನ್ನ ಪ್ರಕರಣವನ್ನು 17ಎ ಪ್ರಕಾರ ತನಿಖೆ ನಡೆಸಿ, ವರದಿ ಕೊಡಿ ಎಂದು ನ್ಯಾಯಾಲಯ ಹೇಳಿದೆ. ಅದರ ಪ್ರಕಾರ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಎಚ್‌.ಡಿ. ಕುಮಾರಸ್ವಾಮಿ ಅವರು ಮೊದಲು ನಿರ್ಮಲಾ ಸೀತಾರಾಮನ್ ಅವರನ್ನು ಇಳಿಸಲಿ. ಆ ಮೇಲೆ ನನ್ನನ್ನು ಕೇಳಲಿ. ಚುನಾವಣಾ ಬಾಂಡ್ ದುರುಪಯೋಗ ಮಾಡಿರುವುದರಿಂದಾಗಿ ಪ್ರಧಾನಿ ನರೇಂದ್ರ ಮೋದಿ ಅವರೂ ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿದರು.

ತವರಲ್ಲಿ 8 ತಾಸು ಸಿದ್ದರಾಮಯ್ಯ ಸಭೆ

ಮೈಸೂರು: ಅತ್ತ ತಮ್ಮ ವಿರುದ್ಧ ಎಫ್‌ಐಆರ್; ಇತ್ತ ತ್ರೈಮಾಸಿಕ ಪ್ರಗತಿ ಪರಿಶೀಲಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸತತ ಎಂಟು ತಾಸಿಗೂ ಹೆಚ್ಚು ‘ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ’ಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿ, ದಸರಾ ತಯಾರಿಯ ಗುಂಗಿನಲ್ಲಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದರು. ‘ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ವಹಿಸಿದರೆ ಮುಲಾಜಿಲ್ಲದೆ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಬೆಳಿಗ್ಗೆ 11ಕ್ಕೆ ಸಭೆ ನಿಗದಿಯಾಗಿತ್ತು. ಮಧ್ಯಾಹ್ನ 12.50ಕ್ಕೆ ಬಂದು ರಾತ್ರಿವರೆಗೂ ಸಭೆ ನಡೆಸಿದರು. ಪ್ರತಿ ಇಲಾಖಾವಾರು ಪ್ರಗತಿ ಪರಿಶೀಲಿಸಿ, ಕ್ರಿಯಾಯೋಜನೆ ರೂಪಿಸಲು ವಿಳಂಬ ಮಾಡಿರುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ‘ಪಂಚ ಗ್ಯಾರಂಟಿ’ ಯೋಜನೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು’ ಎಂದು ಸೂಚಿಸಿದರು.

‘ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳಿಗೆ ಹಣವನ್ನೂ ಒದಗಿಸಲಾಗಿದ್ದು, ಕ್ರಿಯಾಯೋಜನೆ ರೂಪಿಸಿ ಈ ಆರ್ಥಿಕ ವರ್ಷದಲ್ಲೇ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು’ ಎಂದು ತಾಕೀತು ಮಾಡಿದರು.

ಇತ್ತ ಅವರು ಸಭೆ ನಡೆಸುತ್ತಿದ್ದ ವೇಳೆಯಲ್ಲೇ, ಅವರ ವಿರುದ್ಧ ಲೋಕಾಯುಕ್ತ ಎಸ್ಪಿ ಕಚೇರಿಯಲ್ಲಿ ಎಫ್‌ಐಆರ್ ದಾಖಲಾಯಿತು. ಅದರ ನಡುವೆಯೂ ರಾತ್ರಿವರೆಗೂ ಸಭೆ ಮುಂದುವರಿಸಿದರು. ಸಚಿವರಾದ ಡಾ.ಎಚ್‌.ಸಿ. ಮಹದೇವಪ್ಪ ಹಾಗೂ ಕೆ.ವೆಂಕಟೇಶ್, ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರು ಪಾಲ್ಗೊಂಡಿದ್ದರು. ನಗರದಲ್ಲೇ ವಾಸ್ತವ್ಯ ಹೂಡಿರುವ ಮುಖ್ಯಮಂತ್ರಿ, ಶನಿವಾರ ಹಾಗೂ ಭಾನುವಾರವೂ ಇಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.



ಮೈಸೂರಿನಲ್ಲಿ ಶುಕ್ರವಾರ ನಡೆದ ಕೆಡಿಪಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ–ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ನಡುವಿನ ಮಾತುಕತೆಯನ್ನು ಶಾಸಕ ಜಿ.ಟಿ. ದೇವೇಗೌಡ ಕುತೂಹಲದಿಂದ ಗಮನಿಸಿದರು. ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಪಾಲ್ಗೊಂಡಿದ್ದರು–ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಇಲಾಖಾವಾರು ಪ್ರಗತಿ ಪರಿಶೀಲಿಸಿದ ಸಿ.ಎಂ
- ಅರ್ಹರಿಗೆ ಯೋಜನೆ ತಲುಪಿಸಲು ಸೂಚನೆ

ಅಂಗನವಾಡಿಗಳಿಗೆ ಉಚಿತ ವಿದ್ಯುತ್: ಪರಿಶೀಲನೆ

‘ಅಂಗನವಾಡಿ ಕೇಂದ್ರಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಸಿದ್ದರಾಮಯ್ಯ ಹೇಳಿದರು.

ವಿಷಯ ಪ್ರಸ್ತಾಪಿಸಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ‘ಸರ್ಕಾರಿ ಶಾಲೆಗಳಿಗೆ ಉಚಿತವಾಗಿ ವಿದ್ಯುತ್ ಕೊಡಲಾಗುತ್ತಿದ್ದು, ಅಂಗನವಾಡಿಗಳಿಗೂ ವಿಸ್ತರಿಸಬೇಕು’ ಎಂದು ಕೋರಿದರು.

ಪ್ರತಿಕ್ರಿಯಿಸಿದ ಸಿಎಂ, ‘ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿವೆ, ವಿದ್ಯುತ್ ಬಿಲ್ ಪಾವತಿಗೆ ಎಷ್ಟು ತಗಲುತ್ತಿದೆ ಎಂಬ ವರದಿ ಸಲ್ಲಿಸಬೇಕು. ನಂತರ ಪರಿಶೀಲಿಸಲಾಗುವುದು’ ಎಂದರು.

‘ಅಕ್ಕಿ ಕೇಳ್ತಿದಾರೋ, ಹಣವನ್ನೋ?’

‘ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಜೊತೆ ಹಣವನ್ನೂ ಕೊಡುತ್ತಿದ್ದೇವೆ. ಜನರು ಅಕ್ಕಿ ಬೇಕೆನ್ನುತ್ತಿದ್ದಾರೋ, ಹಣವೇ ಇರಲಿ ಎನ್ನುತ್ತಿದ್ದಾರೋ?’ ಎಂದು ಸಿದ್ದರಾಮಯ್ಯ ಕೇಳಿದರು.

‘ಖಾತೆಗೆ ಹಣ ಬರುವುದನ್ನು ಮುಂದುವರಿಸುವಂತೆಯೇ ಹೆಚ್ಚಿನವರು ಬಯಸುತ್ತಿದ್ದಾರೆ. ಹೀಗಾಗಿ ಡಿಬಿಟಿ ಮುಂದುವರಿಸುವುದು ಉತ್ತಮ. ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಿಕೊಳ್ಳುವುದಕ್ಕೂ ಕಡಿವಾಣ ಬೀಳುತ್ತದೆ. ಹಣ ಸಿಕ್ಕರೆ ಇತರ ಅಗತ್ಯ ಪದಾರ್ಥ, ಔಷಧಿ ಖರೀದಿಸಬಹುದೆಂಬ ಅಭಿಪ್ರಾಯ ಹೆಚ್ಚಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗ್ರೇಸ್ ಮಾರ್ಕ್ಸ್ ನೀಡದೆ ಉತ್ತಮ ಫಲಿತಾಂಶ ತರುವ ದಿಕ್ಕಿನಲ್ಲಿ ಎಲ್ಲಾ ಬಿಇಒಗಳ ಜೊತೆ ಸಭೆ ನಡೆಸಬೇಕು. ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಸಾಮರ್ಥ್ಯವನ್ನು ವಿಶೇಷ ಕೋಚಿಂಗ್ ಕೊಟ್ಟು ಹೆಚ್ಚಿಸಬೇಕು. ಸರಣಿ ಪರೀಕ್ಷೆಗಳು ಸೇರಿದಂತೆ ಹಲವು ರೀತಿಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಿ, ಫಲಿತಾಂಶದ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯಮಂತ್ರಿ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.



ಪ್ರತಿಭಟನೆ... ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ಮೈಸೂರಿನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿ ಜಿಲ್ಲಾ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ಬೆಂಬಲಕ್ಕೆ ಹೈಕಮಾಂಡ್: ಖರ್ಗೆ

ಒಂದನೇ ಪುಟದಿಂದ...

ಯಾರೇ ಆದರೂ ಇಂದು ಇರಬಹುದು, ನಾಳೆ ಬದಲಾಗಬಹುದು. ಆದರೆ, ಪಕ್ಷ ಮುಂದುವರಿಯುತ್ತದೆ’ ಎಂದು ಖರ್ಗೆ ಹೇಳಿದರು.

‘ಕಾನೂನು ಅದರದೇ ಆದ ಕ್ರಮಗಳನ್ನು ಕೈಗೊಳ್ಳುತ್ತದೆ. ಪರಿಸ್ಥಿತಿ ಏನು ಬರುತ್ತದೆ ಎನ್ನುವುದರ ಮೇಲೆ ಪರಿಶೀಲನೆ ನಡೆಯಲಿದೆ. ಏನೂ ಇಲ್ಲದಿದ್ದರೂ ಮುಡಾ ಮುಡಾ ಎನ್ನುತ್ತಿದ್ದಾರೆ. ತನಿಖೆಯೇ ನಡೆದಿಲ್ಲ; ದೋಷಾರೋಪ ಪಟ್ಟಿ ಆಗಿಲ್ಲ; ಶಿಕ್ಷೆಯೂ ಆಗಿಲ್ಲ. ಹಾಗಿದ್ದರೂ ಹೋರಾಟ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ಎಫ್‌ಐಆರ್ ದಾಖಲಾದ ಮೇಲೆ ಅವರ ಪರ ಪಕ್ಷ ನಿಲ್ಲುತ್ತದೆಯೇ ಎಂಬುದು ಊಹಾತ್ಮಕ ಪ್ರಶ್ನೆ. ನಾವು ಅವರ ಜೊತೆ ನಿಂತಿದ್ದೇವೆ. ಅವರಿಗೆ ಬೆಂಬಲ ಕೊಟ್ಟಿದ್ದೇವೆ. ಯಾಕೆಂದರೆ ಅವರು ಪಕ್ಷವನ್ನು ಪ್ರತಿನಿಧಿಸುತ್ತಾರೆ; ಅವರು ಈಗ ಒಬ್ಬ ವ್ಯಕ್ತಿ ಮಾತ್ರ ಅಲ್ಲ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ದಲಿತ ನಾಯಕರು ಹಾಗೂ ದಲಿತರ ನಿಧಿಯ ಬಗ್ಗೆ ಹರಿಯಾಣದಲ್ಲಿ ಮಾತನಾಡಿದ್ದಾರೆ. ಅವರಿಗೆ ಅಲ್ಲೇ ಉತ್ತರ ಕೊಡುತ್ತೇನೆ’ ಎಂದು ಹೇಳಿದರು.

ಸಿ.ಎಂ ಗಮನಕ್ಕೆ ತರದೇ ತೀರ್ಮಾನ ಸಾಧ್ಯವೇ?

ಬೆಂಗಳೂರು: ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿ ಹಾಗೂ ಸಂಪುಟ ಸಭೆಯ ಗಮನಕ್ಕೆ ತರದೇ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವೇ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಹಾಗೂ ಸಂಪುಟದ ಗಮನಕ್ಕೆ ಬಂದ ನಂತರವೇ ಮುಖ್ಯ ಕಾರ್ಯದರ್ಶಿ ಮೂಲಕ ರಾಜ್ಯಪಾಲರಿಗೆ ಉತ್ತರ ತಲುಪಲಿದೆ ಎಂದರು.

‘ಅರ್ಕಾವತಿ ಬಡಾವಣೆ ಡಿನೋಟಿಫಿಕೇಷನ್ ಪ್ರಕರಣದ ಮಾಹಿತಿ ಕೇಳಿದ ಕಡತ ನನ್ನ ಕಚೇರಿಗೆ ಬಂದಿತ್ತು. ಬೇರೆಯವರಿಗೆ ಉತ್ತರ ಕೊಡುವ ಅಗತ್ಯವಿಲ್ಲ, ಸಂಪುಟ ಉಪ ಸಮಿತಿಗೆ ಕಳುಹಿಸಿ ಎಂದು ಸೂಚಿಸಿದ್ದೆ’ ಎಂದು ತಿಳಿಸಿದರು.

ಎಫ್‌ಐಆರ್ ಇದ್ದರೂ ಸಿ.ಎಂ ಆದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಬಾರಿ ಮುಖ್ಯಮಂತ್ರಿಗಳಾಗಿದ್ದಾಗ ಕೈಗೊಂಡ ನಿರ್ಧಾರಗಳಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ತಡೆ ಕಾಯ್ದೆಯ ಅಡಿಯಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದರೂ, ಇಬ್ಬರು ನಾಯಕರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಿದರ್ಶನಗಳೂ ರಾಜ್ಯದಲ್ಲಿವೆ.

ಎಚ್‌.ಡಿ.ಕುಮಾರಸ್ವಾಮಿ

ಎಚ್‌.ಡಿ.ಕುಮಾರಸ್ವಾಮಿ ಅವರು ಗಂಗೇನಹಳ್ಳಿಯಲ್ಲಿ 1 ಎಕರೆ, 11 ಗುಂಟೆ ಜಮೀನನ್ನು ಡಿನೋಟಿಫೈ ಮಾಡಿದ ಮತ್ತು ಅದನ್ನು ಅವರ ಭಾವಮೈದುನ ಖರೀದಿಸಿದ ಆರೋಪದಲ್ಲಿ 2015ರಲ್ಲಿ ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾಗಿದೆ. ತನಿಖೆ ನಡೆಸಲು ಹೈಕೋರ್ಟ್ ಆದೇಶಿಸಿದ್ದು, ತನಿಖೆ ಪ್ರಗತಿಯಲ್ಲಿದೆ.




ಎಚ್‌.ಡಿ. ಕುಮಾರಸ್ವಾಮಿ

ನೋಂದಣಿಯೇ ಆಗದ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಬಳ್ಳಾರಿಯಲ್ಲಿ 550 ಎಕರೆ ಗಣಿ ಭೂಮಿ ಮಂಜೂರು ಮತ್ತು ಜಂತಕಲ್ ಮೈನಿಂಗ್ ಕಂಪನಿಗೆ ಗಣಿ ಮಂಜೂರು ಮಾಡಲು ₹150 ಕೋಟಿ ಲಂಚ ಪಡೆದ ಪ್ರಕರಣದಲ್ಲಿ ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ 2017ರಲ್ಲಿ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆ ಪ್ರಕಾರ ಎಫ್‌ಐಆರ್ ದಾಖಲಾಗಿದೆ. ತನಿಖೆ ಪ್ರಗತಿಯಲ್ಲಿದೆ.

ಇದರ ಮಧ್ಯೆಯೂ 2018ರ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಇವಲ್ಲದೆ, ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಇನ್ನೂ ಮೂರು ಪ್ರಕರಣಗಳನ್ನು ಕುಮಾರಸ್ವಾಮಿ ಎದುರಿಸುತ್ತಿದ್ದಾರೆ.

ಬಿ.ಎಸ್‌.ಯಡಿಯೂರಪ್ಪ

ಮಾಜಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರನ್ನು ಲೋಕಾಯುಕ್ತ ನ್ಯಾಯಾಲಯವು ಗಣಿ ಅಕ್ರಮ ಮಂಜೂರಾತಿ ಪ್ರಕರಣದಲ್ಲಿ 2011ರ ಅಕ್ಟೋಬರ್ 11ರಂದು ಜೈಲಿಗೆ ಕಳುಹಿಸಿತ್ತು. ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿದ್ದ ಕಾರಣ, ಯಡಿಯೂರಪ್ಪ ನ್ಯಾಯಾಲಯಕ್ಕೆ ಶರಣಾಗಿದ್ದರು. ಅಲ್ಲಿ ಅವರನ್ನು ಬಂಧಿಸಿ, ಅಕ್ಟೋಬರ್ 22ರವರೆಗೆ ಜೈಲಿಗೆ ಕಳುಹಿಸಲಾಗಿತ್ತು.



ಬಿ.ಎಸ್‌. ಯಡಿಯೂರಪ್ಪ

ತಮ್ಮ ಮಕ್ಕಳ ಒಡೆತನದ ‘ಪ್ರೇರಣಾ ಎಜುಕೇಷನಲ್ ಆ್ಯಂಡ್ ಸೋಷಿಯಲ್ ಟ್ರಸ್ಟ್’ಗೆ, ಜೆಎಸ್‌ಡಬ್ಲ್ಯು ಕಂಪನಿಯ ಅಂಗ ಸಂಸ್ಥೆ ಎಸ್‌ಡಬ್ಲ್ಯುಎಂಎಸ್‌ನಿಂದ ₹10 ಕೋಟಿ ಲಂಚವನ್ನು ಚೆಕ್ ಮೂಲಕ ಪಡೆದ ಮತ್ತು ಗಣಿ ಭೂಮಿ ಅಕ್ರಮವಾಗಿ ಮಂಜೂರು ಮಾಡಿದ ಆರೋಪದಲ್ಲಿ ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ 2012ರಲ್ಲಿ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಇದಲ್ಲದೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಕ್ರಮ ಟೆಂಡರ್‌ಗೆ ಸಂಬಂಧಿಸಿ 2022ರಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಮತ್ತೊಂದು ಪ್ರಕರಣವೂ ಇದೆ.

ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲಾಗಿ ಜೈಲಿಗೆ ಹೋಗಿ ಬಂದಿದ್ದರೂ 2019ರಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ಲೋಕಾಯುಕ್ತದ ಮೈಸೂರು ಎಸ್‌ಪಿ ಟಿ.ಜೆ. ಉದೇಶ್ ಎಫ್‌ಐಆರ್ ದಾಖಲಿಸಿದ್ದು, ಪ್ರಕರಣದ ತನಿಖೆ ಕೈಗೊಳ್ಳಲಿದ್ದಾರೆ. ನಾಲ್ವರೂ ಆರೋಪಿಗಳ ವಿಚಾರಣೆಯನ್ನು ಶೀಘ್ರ ನಡೆಸುವ ಸಾಧ್ಯತೆ ಇದೆ. 3 ತಿಂಗಳ ಒಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ನ್ಯಾಯಾಲಯವು ಸೂಚಿಸಿದೆ.

ಮೈಸೂರಿನಲ್ಲಿದ್ದಾಗಲೇ ಎಫ್‌ಐಆರ್: ಶುಕ್ರವಾರದಿಂದ ಮೈಸೂರು ಪ್ರವಾಸ ಕೈಗೊಂಡಿರುವ ಸಿದ್ದರಾಮಯ್ಯ ಅವರು ನಗರದಲ್ಲಿರುವಾಗಲೇ ಪ್ರಕರಣ ದಾಖಲಾಗಿದೆ. ತನಿಖಾಧಿಕಾರಿ ಟಿ.ಜೆ. ಉದೇಶ್ ತಿಂಗಳ ಹಿಂದಷ್ಟೇ ಲೋಕಾಯುಕ್ತ ಎಸ್‌ಪಿಯಾಗಿ ಮೈಸೂರಿಗೆ ವರ್ಗಾವಣೆಗೊಂಡಿದ್ದರು.

ಶುಕ್ರವಾರ ಬೆಳಿಗ್ಗೆಯಷ್ಟೇ ನ್ಯಾಯಾಲಯದ ಅಧಿಕೃತ ಆದೇಶ ಪೊಲೀಸರ ಕೈಸೇರಿತ್ತು. ಪ್ರಕರಣವನ್ನು ಸಿಆರ್‌ಪಿಸಿ ಅಡಿ ದಾಖಲಿಸಬೇಕೆ ಇಲ್ಲವೇ ಬಿಎನ್‌ಎಸ್ ಅಡಿ ದಾಖಲಿಸಬೇಕೆ ಎಂಬ ಗೊಂದಲ ಮೂಡಿತ್ತು. ಈ ಸಂಬಂಧ ಎಸ್‌ಪಿ ಉದೇಶ್ ಲೋಕಾಯುಕ್ತ ಎಡಿಜಿಪಿ ಮನೀಶ್ ಅವರಿಗೆ ಇ-ಮೇಲ್ ಕಳುಹಿಸಿ ಮಾರ್ಗದರ್ಶನ ಕೋರಿದ್ದರು. ನ್ಯಾಯಾಲಯದ ಆದೇಶದ ಅನ್ವಯ ಪ್ರಕರಣ ದಾಖಲಿಸುವಂತೆ ಎಡಿಜಿಪಿ ಸೂಚಿಸಿದ್ದರು.

ಮಧ್ಯಾಹ್ನ 1.15ರ ವೇಳೆಗೆ ಎಫ್‌ಐಆರ್ ದಾಖಲಾಯಿತು. ದೂರುದಾರ ಸ್ನೇಹಮಯಿ ಕೃಷ್ಣ ಸಂಜೆ 5.30ರ ವೇಳೆಗೆ ಲೋಕಾಯುಕ್ತ ಕಚೇರಿಗೆ ಧಾವಿಸಿ, ಎಫ್‌ಐಆರ್ ಪ್ರತಿ ಸ್ವೀಕರಿಸಿದರು.

‘ಡಿನೋಟಿಫೈ ಸಮಯದಲ್ಲಿ ಸಿದ್ದರಾಮಯ್ಯ ಡಿಸಿಎಂ’

‘ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರ ಮೂಲ ಮಾಲೀಕರಾದ ನಿಂಗ ಉರುಫ್ ಜವರ ಅವರ ಪುತ್ರ ದೇವರಾಜು 1968ರಲ್ಲೇ ಉದ್ದೇಶಿತ ಜಮೀನಿನ ಹಕ್ಕು ಖುಲಾಸೆ ಮಾಡಿಕೊಂಡಿದ್ದರೂ ಜಮೀನು ತಮ್ಮದೆಂದು ಬಿಂಬಿಸಿಕೊಂಡು ಅಕ್ರಮ ಎಸಗಿದ್ದಾರೆ.

1992ರಲ್ಲಿ ಜಮೀನನಲ್ಲಿ ಮುಡಾ ದೇವನೂರು ಬಡಾವಣೆ ನಿರ್ಮಾಣಕ್ಕೆ ಅಧಿಸೂಚನೆ ಹೊರಡಿಸಿದ್ದು, 1996ರಲ್ಲಿ ಜಮೀನಿನ ಭೂಸ್ವಾಧೀನ ಕೈಬಿಡುವಂತೆ ಕೋರಿ ನಗರಾಭಿವೃದ್ಧಿ ಇಲಾಖೆಗೆ ಮನವಿ ಸಲ್ಲಿಸಲಾಗಿತ್ತು. ಸರ್ಕಾರ, 1998ರಲ್ಲಿ ಜಮೀನಿನ ಡಿನೋಟಿಫೈ ಮಾಡುವಾಗ ಸಿದ್ದರಾಮಯ್ಯ ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು, ಪ್ರಭಾವ ಬೀರಿದ್ದಾರೆ’ ಎಂದು ದೂರಲಾಗಿದೆ.

‘2003ರಲ್ಲಿಯೇ ಈ ಜಮೀನಿನಲ್ಲಿ ಮುಡಾ ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಹಂಚಿದ್ದರೂ 2004ರ ಆಗಸ್ಟ್‌ನಲ್ಲಿ ದೇವರಾಜು ಅವರಿಂದ ಮಲ್ಲಿಕಾರ್ಜುನ ಸ್ವಾಮಿ ಜಮೀನನ್ನು ಖರೀದಿಸಿದ್ದರು. ದಾಖಲೆಗಳ ವ್ಯತ್ಯಾಸವಿದ್ದರೂ ನೋಂದಣಿ ಮಾಡಿಕೊಡಲಾಗಿದೆ. ಆಗ ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿದ್ದು ಅಧಿಕಾರ ದುರುಪಯೋಗಪಡಿಸಿಕೊಂಡು ನೋಂದಣಿ ಮಾಡಿಸಿಕೊಟ್ಟಿದ್ದಾರೆ’ ಎಂದು ಉಲ್ಲೇಖಿಸಲಾಗಿದೆ.

‘ಜಮೀನಿನಲ್ಲಿ ಮುಡಾ ಬಡಾವಣೆ ನಿರ್ಮಿಸಿದ್ದರೂ 2005ರಲ್ಲಿ ಅಂದಿನ ಜಿಲ್ಲಾಧಿಕಾರಿ ಎಸ್.ಸೆಲ್ವಕುಮಾರ್ ಭೂಪರಿವರ್ತನೆ ಮಾಡಿಕೊಟ್ಟಿದ್ದಾರೆ. 2010ರಲ್ಲಿ ಅದನ್ನು ಮಲ್ಲಿಕಾರ್ಜುನ ಸ್ವಾಮಿಯು, ಬಿ.ಎಂ. ಪಾರ್ವತಿ ಹೆಸರಿಗೆ ಕೃಷಿ ಭೂಮಿ ಎಂದು ನೋಂದಣಿ ಮಾಡಿಕೊಟ್ಟಿದ್ದಾರೆ. 2013ರ ತರುವಾಯ ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕವೇ, ಪಾರ್ವತಿಯವರು ಬದಲಿ ಜಮೀನು ಕೋರಿ ಮುಡಾಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಮುಡಾ ಸಭೆಯ ನಿರ್ಣಯದಂತೆ ಅವರಿಗೆ 50:50 ನಿಯಮದ ಅಡಿ ಬದಲಿ ನಿವೇಶನಗಳನ್ನು ನೀಡಲು 2021ರಲ್ಲಿ ಅಂದಿನ ಆಯುಕ್ತ ಡಿ.ಬಿ.ನಟೇಶ್ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಸ್ಪಷ್ಟನೆ ಬರುವ ಮುನ್ನವೇ ಪಾರ್ವತಿಯವರಿಗೆ ಮಂಜೂರಾತಿ ಪತ್ರ ನೀಡಿದ್ದಾರೆ. ನಿಯಮಗಳನ್ನು ಮೀರಿ 50:50 ಅನುಪಾತದಲ್ಲಿ ಒಟ್ಟು 38,284 ಚ.ಅಡಿಯ ಬದಲಿ ನಿವೇಶನಗಳನ್ನು ಮೈಸೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಮಂಜೂರು ಮಾಡಲಾಗಿದೆ.

‘2022ರ ಜನವರಿ 12ರಂದು ಸಿದ್ದರಾಮಯ್ಯ ಪ್ರಭಾವ ಬಳಸಿ ಉಪ ನೋಂದಣಾಧಿಕಾರಿಗಳನ್ನು ಸರ್ಕಾರಿ ಅತಿಥಿಗೃಹಕ್ಕೆ ಕರೆಯಿಸಿಕೊಂಡು ಪತ್ನಿ ಹೆಸರಿಗೆ 14 ನಿವೇಶನಗಳನ್ನು ನೋಂದಣಿ ಮಾಡಿಸಿಕೊಟ್ಟಿದ್ದಾರೆ. ಅವರ ಪುತ್ರ ಯತೀಂದ್ರ, ವರುಣ ಕ್ಷೇತ್ರದ ಶಾಸಕರಾಗಿ ಮುಡಾ ಸಭೆಗಳಲ್ಲಿ ಪಾಲ್ಗೊಂಡಿದ್ದು, ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದಾರೆ’ ಎಂದು ದೂರುದಾರರು ಆರೋಪಿಸಿರುವುದನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಏನಿದೆ ಎಫ್‌ಐಆರ್‌ನಲ್ಲಿ?: ಒಟ್ಟು 16 ಪುಟಗಳ ಎಫ್‌ಐಆರ್‌ನಲ್ಲಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬದವರ ವಿರುದ್ಧ ದೂರುದಾರರು ಮಾಡಿರುವ ಆರೋಪಗಳನ್ನು ಉಲ್ಲೇಖಿಸಲಾಗಿದೆ.

ಕೆಸರೆ ಗ್ರಾಮದ ಸರ್ವೆ ಸಂಖ್ಯೆ 462, 464ಕ್ಕೆ ಸಂಬಂಧಿಸಿದಂತೆ 1968ರಿಂದ 2023ರ ನವೆಂಬರ್ 9ರವರೆಗೆ ನಡೆದಿರುವ ಎಲ್ಲ ಭೂವ್ಯವಹಾರಗಳ ಕುರಿತು ಲೋಕಾಯುಕ್ತ ಪೊಲೀಸರು ತನಿಖೆ ನಡೆಸಲಿದ್ದಾರೆ.

‘ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿ 1996–1999 ಹಾಗೂ 2004–2006ರವರೆಗೆ ಹಾಗೂ ಮುಖ್ಯಮಂತ್ರಿಯಾಗಿ 2013–2018ರವರೆಗೆ ಹಾಗೂ ಪ್ರಸ್ತುತ ಅವಧಿಯಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಹಾಗೂ ರಾಜಕೀಯ ಪ್ರಭಾವ ಬಳಸಿದ್ದಾರೆ’ ಎಂದು ಆರೋಪಿಸಲಾಗಿದೆ.

ಸಿ.ಎಂ ಆಗಿದ್ದಾಗ ಎಫ್‌ಐಆರ್ ದಾಖಲು

ನವದೆಹಲಿ: ದೇಶದಲ್ಲಿ ಈ ಹಿಂದೆಯೂ ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಗಳ ವಿರುದ್ಧ ಎಫ್‌ಐಆರ್ ದಾಖಲಾದ ಉದಾಹರಣೆಗಳು ಇವೆ. ಅರವಿಂದ ಕೇಜ್ರಿವಾಲ್ (ದೆಹಲಿ), ಹೇಮಂತ್ ಸೊರೇನ್ (ಜಾರ್ಖಂಡ್), ಲಾಲು ಪ್ರಸಾದ್ (ಬಿಹಾರ, ಜೆ.ಜಯಲಲಿತಾ (ತಮಿಳುನಾಡು) ಅವರ ವಿರುದ್ಧ ವಿವಿಧ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿದ್ದವು.

‘ಸಿಬಿಐ ಅನುಮತಿ ವಾಪಸ್–ವೃತ್ತಿಪರ ಕಳ್ಳರ ತೀರ್ಮಾನ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಸಿಬಿಐ ತನಿಖೆಗೆ ನೀಡಲಾಗಿದ್ದ ಮುಕ್ತ ಅನುಮತಿಯನ್ನು ಹಿಂಪಡೆದಿರುವ ರಾಜ್ಯ ಸರ್ಕಾರದ ತೀರ್ಮಾನವನ್ನು ಬಿಜೆಪಿ ಟೀಕಿಸಿದೆ. ಇದು ವೃತ್ತಿಪರ ಕಳ್ಳರ ಹಾಗೂ ಲೂಟಿಕೋರ ಸರ್ಕಾರದ ನಿರ್ಧಾರ ಎಂದು ಛೇಡಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನವಾಲಾ, ‘ಈ ನಿರ್ಧಾರವು ಸ್ವತಃ ತಪ್ಪಿತಸ್ಥ ಮನಸ್ಸನ್ನು ಬಿಂಬಿಸುತ್ತದೆ’ ಎಂದರು.

‘ಮುಡಾ ಹಗರಣದಲ್ಲಿ ಸಾವಿರಾರು ಕೋಟಿ ಲೂಟಿಯಾಗಿದೆ. ಅದಾದ ನಂತರ, ಯಾವುದೇ ಪ್ರಮಾಣೀಕೃತ ಕಳ್ಳ ಹಾಗೂ ಲೂಟಿಕೋರನ ರೀತಿಯಲ್ಲೇ ಕಾಂಗ್ರೆಸ್ ನಡೆದುಕೊಂಡಿದೆ. ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಕೇಂದ್ರ ತನಿಖಾ ಸಂಸ್ಥೆಯ ಮುಕ್ತ ಅನುಮತಿಯನ್ನು ಹಿಂಪಡೆದಿದೆ’ ಎಂದರು.

173 ಮಂದಿಗೆ 'ಅತ್ಯುತ್ತಮ ಕಂದಾಯ ಅಧಿಕಾರಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡುವ ಅಧಿಕಾರಿಗಳಿಗೆ ಈ ವರ್ಷದಿಂದ 'ಅತ್ಯುತ್ತಮ ಕಂದಾಯ ಅಧಿಕಾರಿ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 2024ರ ಪ್ರಶಸ್ತಿಯನ್ನು 173 ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನೀಡಲಾಗಿದೆ. ಪ್ರತಿ ವರ್ಷ ನಡೆಸುವ ಕಂದಾಯ ದಿನಾಚರಣೆ ಈಗಾಗಲೇ ಮುಗಿದಿರುವ ಕಾರಣ ವಿಧಾನಸೌಧದ ಸಭಾಂಗಣದಲ್ಲೇ ಪ್ರಶಸ್ತಿ ಪ್ರದಾನ ಮಾಡಲಾಯಿತು ಎಂದರು. ನಾಲ್ವರು ಜಿಲ್ಲಾಧಿಕಾರಿಗಳು, 11 ಉಪ ವಿಭಾಗಾಧಿಕಾರಿಗಳು, 21 ತಹಶೀಲ್ದಾರರು, 36 ಗ್ರಾಮ ಆಡಳಿತಾಧಿಕಾರಿಗಳು, ನೋಂದಣಿ ಇಲಾಖೆ ಕೇಂದ್ರ ಕಚೇರಿ ಹಾಗೂ ವಿಪತ್ತು ನಿರ್ವಹಣಾ ವಿಭಾಗದ ತಲಾ 9 ಅಧಿಕಾರಿಗಳು, ಭೂಮಾಪನ ಇಲಾಖೆಯ 83 ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಪ್ರಶಸ್ತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಒಂದು ವರ್ಷದಲ್ಲಿ ನಿರ್ವಹಿಸಿದ ಕೆಲಸದ ಸಾಮರ್ಥ್ಯ, ದಕ್ಷತೆ, ಕ್ರಿಯಾಶೀಲತೆಯ ಆಧಾರದಲ್ಲಿ ಪ್ರಶಸ್ತಿ ನೀಡಲಾಗಿದೆ. ಮುಂದಿನ ಬಾರಿಯಿಂದ ಆಯ್ಕೆಗೆ ನಿರ್ದಿಷ್ಟ ಮಾನದಂಡ ನಿಗದಿ ಮಾಡಲಾಗುವುದು. ಹೆಚ್ಚುವರಿ ಜಿಲ್ಲಾಧಿಕಾರಿಗಳು, ಕಂದಾಯ ನಿರೀಕ್ಷಕರು ಸೇರಿದಂತೆ ಎಲ್ಲ ವಿಭಾಗಗಳಲ್ಲೂ ಪ್ರಶಸ್ತಿ ನೀಡಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಿಲ್ಲದ ಬಿಜೆಪಿ ರಾಜ್ಯ ಘಟಕದ ಒಳ ಜಗಳ • ಫಲ ನೀಡದ ಆರ್‌ಎಸ್‌ಎಸ್ ಸಂಧಾನ

ಯತ್ನಾಳ–ವಿಜಯೇಂದ್ರ ಬಣ ಸೆಣಸಾಟ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ವಿರುದ್ಧ ಸೆಟೆದು ನಿಂತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಭಿನ್ನರ ಬಣದ ಸಂಖ್ಯೆ ಹಿಗ್ಗುತ್ತಿದ್ದು, ವಿಜಯೇಂದ್ರ ಅವರನ್ನು ಅಧ್ಯಕ್ಷ ಹುದ್ದೆಯಿಂದ ಕೆಳಗಿಳಿಸುವುದಾಗಿ ಪಣತೊಟ್ಟಿದೆ.

ಇದನ್ನು ಸವಾಲಾಗಿ ಸ್ವೀಕರಿಸಿರುವ ವಿಜಯೇಂದ್ರ ಬಣ, 'ಯಾವುದೇ ಕಾರಣಕ್ಕೂ ಅಧ್ಯಕ್ಷ ಸ್ಥಾನದಿಂದ ಇಳಿಸಲು ಸಾಧ್ಯವಿಲ್ಲ. ಇಳಿಸಿದರೆ ಪರಿಣಾಮ ನೆಟ್ಟಗಿರದು' ಎಂದು ಹೇಳಿದೆ.

ಇದೇ ಮೊದಲ ಬಾರಿಗೆ ವಿಜಯೇಂದ್ರ ಬಣದ ಪರವಾಗಿ ಬೆಂಗಳೂರಿನ ಸಭೆಯಲ್ಲಿ ಮಾತನಾಡಿರುವ ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರು ಯತ್ನಾಳ ಬಣಕ್ಕೆ ನೇರ ಎಚ್ಚರಿಕೆ ನೀಡಿದ್ದಾರೆ.

ಯತ್ನಾಳ ಅವರ ನೇತೃತ್ವದಲ್ಲಿ ಭಿನ್ನರ ಬಣ ಸಭೆ ಸೇರುವುದು ಮಾತ್ರವಲ್ಲದೇ, ಪಕ್ಷದ ಅಧಿಕೃತ ಕಾರ್ಯಕ್ರಮಗಳನ್ನು ಬಹಿಷ್ಕರಿಸುವ ಮೂಲಕ ಮತ್ತು ವಿಜಯೇಂದ್ರ ಅವರಿಗೆ ಸವಾಲು ಎಸೆಯುತ್ತಿದೆ. ಸರ್ಕಾರದ ವಿರುದ್ಧದ 'ಮೈಸೂರು ಚಲೋ' ಪಾದಯಾತ್ರೆಯೂ ಸೇರಿ ಪಕ್ಷ ಹಮ್ಮಿಕೊಳ್ಳುತ್ತಿರುವ ಯಾವುದೇ ಪ್ರತಿಭಟನೆಯಲ್ಲೂ ಭಿನ್ನರ ಬಣ ಭಾಗವಹಿಸಿಲ್ಲ.

ಆರ್‌ಎಸ್‌ಎಸ್ ನಾಯಕರು ಇತ್ತೀಚೆಗೆ ಕರೆದಿದ್ದ ಸಭೆಗೆ ಮಾತ್ರ ಹಾಜರಾಗಿದ್ದ ಭಿನ್ನಮತೀಯರು ವಿಜಯೇಂದ್ರ ವಿರುದ್ಧ ತಮ್ಮ ಅಸಮಾಧಾನವನ್ನು ನೇರವಾಗಿ ತೋಡಿಕೊಂಡಿದ್ದರು. ಎಲ್ಲರೂ ಒಗ್ಗಟ್ಟಾಗಿ ನಡೆಯಬೇಕು ಎಂಬ ಆರ್‌ಎಸ್‌ಎಸ್ ಸೂಚನೆ ಮಾತ್ರ ಪಾಲನೆ ಆಗುತ್ತಿಲ್ಲ. ಎರಡೂ ಬಣಗಳನ್ನು ಒಗ್ಗೂಡಿಸುವ ಸಂಘದ ಪ್ರಯತ್ನ ಫಲ ನೀಡಿಲ್ಲ.

'ತಮ್ಮ ತಂದೆಯಂತೆಯೇ ವಿಜಯೇಂದ್ರ ಪಕ್ಷದಲ್ಲಿ ಸರ್ವಾಧಿಕಾರ ನಡೆಸುತ್ತಿದ್ದಾರೆ. ಯಡಿಯೂರಪ್ಪ ಅವರನ್ನು ಹಿರಿಯರು ಮತ್ತು ಪಕ್ಷ ಕಟ್ಟಿದವರು ಎಂಬ ಕಾರಣಕ್ಕೆ ಸಹಿಸಿಕೊಂಡಿದ್ದರು. ಆದರೆ, ವಿಜಯೇಂದ್ರ ಅವರಿಗೆ ಅಂತಹ ಯಾವುದೇ ಹಿನ್ನೆಲೆ ಇಲ್ಲ. ಉಳಿದವರ ಮೇಲೆ ಸರ್ವಾಧಿಕಾರ ನಡೆಸಿದರೆ ಹೇಗೆ ಸಹಿಸಿಕೊಳ್ಳಲು ಸಾಧ್ಯ ಎಂದು ಸಭೆಯಲ್ಲಿ ಆರ್‌ಎಸ್‌ಎಸ್ ನಾಯಕರಿಗೆ ಪ್ರಶ್ನೆ ಹಾಕಿದ್ದರು' ಎಂದು ಬಿಜೆಪಿ ಹಿರಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ಪಕ್ಷದಿಂದ ಉಚ್ಚಾಟನೆಗೊಂಡಿರುವ ಕೆ.ಎಸ್. ಈಶ್ವರಪ್ಪ ಅವರನ್ನು ಮರಳಿ ಪಕ್ಷಕ್ಕೆ ಕರೆದುಕೊಂಡು ಬಂದು, ಮುಂದಿನ ಮುಖ್ಯಮಂತ್ರಿ ಮಾಡುತ್ತೇವೆ' ಎಂದು ಬಾಗಲಕೋಟೆಯಲ್ಲಿ ಬಸನಗೌಡ ಪಾಟೀಲ ಯತ್ನಾಳ ಅವರು ನೀಡಿದ ಹೇಳಿಕೆ ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ. ಅಲ್ಲದೇ, ಆ ಸಭೆಯಲ್ಲೇ 'ರಾಯಣ್ಣ–ಚನ್ನಮ್ಮ ಬ್ರಿಗೇಡ್' ಸ್ಥಾಪನೆ ವಿಚಾರವೂ ಮುನ್ನೆಲೆಗೆ ಬಂದಿದೆ. ಆ ಬಳಿಕ ಈಶ್ವರಪ್ಪ, ಯತ್ನಾಳ ಮತ್ತು ರಮೇಶ ಜಾರಕಿಹೊಳಿಯವರು ಎರಡು ಬಾರಿ ಸಭೆ ಮಾಡಿದ್ದಾರೆ.


ಯತ್ನಾಳ ಬಣದಲ್ಲಿ ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ಪ್ರತಾಪಸಿಂಹ, ಸಿದ್ದೇಶ್ವರ್ ಪ್ರಮುಖವಾಗಿ ಗುರುತಿಸಿಕೊಂಡಿದ್ದಾರೆ. ಈ ಗುಂಪಿಗೆ ಹೊಸದಾಗಿ, ಪಕ್ಷದ ಉಪಾಧ್ಯಕ್ಷ ರಾಜೂಗೌಡ ಸೇರಿಕೊಂಡಿದ್ದಾರೆ.

ಅಧ್ಯಕ್ಷ ಸ್ಥಾನದಿಂದ ಇಳಿಸಲು ರೆಡಿಮೇಡ್ ಫುಡ್ಡಾ: ರೇಣುಕಾಚಾರ್ಯ

'ವಿಜಯೇಂದ್ರ ಅವರನ್ನು ಯಾವುದೇ ಕಾರಣಕ್ಕೂ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಸಾಧ್ಯವಿಲ್ಲ. ಆ ರೀತಿ ಇಳಿಸಲು ಅವರೇನು ರೆಡಿಮೇಡ್ ಫುಡ್ಡಾ' ಎಂದು ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಪ್ರಶ್ನಿಸಿದ್ದಾರೆ.

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರ ನಿವಾಸದಲ್ಲಿ ಶುಕ್ರವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಇಲ್ಲಿಯ ತನಕ ನಾವು ಮಾತನಾಡಬಾರದು ಎಂದು ಸುಮ್ಮನಿದ್ದೆವು. ಆದರೆ ಕೆಲವರು ಪಕ್ಷದಲ್ಲಿ ವಿನಾಕಾರಣ ಗೊಂದಲ ಸೃಷ್ಟಿಸುತ್ತಿದ್ದಾರೆ. ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ವರಿಷ್ಠರು. ಭಿನ್ನಮತೀಯರ ಆಕ್ಷೇಪ ವರಿಷ್ಠರ ವಿರುದ್ಧವೇ' ಎಂದು ಪ್ರಶ್ನಿಸಿದರು.



'ಪಕ್ಷದ ಉಳಿವಿಗಾಗಿ ಮುಂದೆ ನಾವು ಸಭೆಗಳನ್ನು ಮಾಡುತ್ತೇವೆ. ಸಂಘಪರಿವಾರ, ಹೈಕಮಾಂಡ್ ಒಟ್ಟಾಗಿ ಹೋಗಿ ಎಂದು ಹೇಳಿದ್ದರೂ ಅವರು ಹೀಗೆ ಮಾಡುತ್ತಿದ್ದಾರೆ. ಮುಂದೆ ನಾವು ಹೈಕಮಾಂಡ್ ಬಳಿ ಹೋಗಬೇಕಾಗುತ್ತದೆ' ಎಂದರು.

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾತನಾಡಿ, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವವರನ್ನು ಉಚ್ಚಾಟನೆ ಮಾಡಬೇಕು. ಬಿಜೆಪಿ ಬಗ್ಗೆ ನಿಯತ್ತು ಇಲ್ಲದೆ ಜೆಡಿಎಸ್‌ಗೆ ಹೋಗಿದ್ದರು ಎಂದು ಯತ್ನಾಳ ವಿರುದ್ಧ ಕಿಡಿಕಾರಿದರು.

ವಿಜಯೇಂದ್ರ ನಡೆ ಏನು ?

ತಮಗೆ ಪಕ್ಷದ ವರಿಷ್ಠರ ಆಶೀರ್ವಾದ ಇದೆ ಎಂಬ ಗಟ್ಟಿ ನಂಬಿಕೆ ವಿಜಯೇಂದ್ರ ಅವರದು. ಒಂದು ವೇಳೆ ಬೇರೆಯವರು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವುದಾದರೆ, ತಾವು ಹಿಂದೆ ಸರಿಯುವುದಾಗಿ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಒಂದು ವೇಳೆ ಅಧ್ಯಕ್ಷ ಸ್ಥಾನದಿಂದ ಇಳಿದರೆ, ಸುಮ್ಮನೇ ಕೂರದೇ ಲಿಂಗಾಯತ ಸಮುದಾಯವನ್ನು ಸಂಘಟಿಸುವ ಕುರಿತು ಆಲೋಚನೆ ಹೊಂದಿದ್ದಾರೆ. ಆ ಮೂಲಕ ಲಿಂಗಾಯತ ಸಮುದಾಯದ ಪ್ರಬಲ ನಾಯಕರಾಗಿ ಹೊರ ಹೊಮ್ಮುವ ಕುರಿತು ಗಮನ ಕೇಂದ್ರೀಕರಿಸುವ ಆಲೋಚನೆ ಹೊಂದಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಜಾನಪದ ಪರಿಷತ್‌ಗೆ ಯುನೆಸ್ಕೊ ಮಾನ್ಯತೆ

ಪ್ರಜಾವಾಣಿ ವಾರ್ತೆ

ರಾಮನಗರ: ಅಮೂರ್ತ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಉದ್ದೇಶಕ್ಕಾಗಿ ಕರ್ನಾಟಕ ಜಾನಪದ ಪರಿಷತ್ ಯುನೆಸ್ಕೊ ಮಾನ್ಯತೆ ಪಡೆದಿದೆ. ಇದರೊಂದಿಗೆ, ಯುನೆಸ್ಕೊ ಪಟ್ಟಿಯಲ್ಲಿರುವ ವಿಶ್ವದ 58 ಸಾರ್ವಜನಿಕ ಸೇವಾ ಸಂಸ್ಥೆಗಳ ಪೈಕಿ ಪರಿಷತ್ ಸಹ ಒಂದಾಗಿದೆ ಎಂದು ಪರಿಷತ್ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ ತಿಳಿಸಿದ್ದಾರೆ.

ಈ ಕುರಿತು ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜೂನ್ ತಿಂಗಳಿನಲ್ಲಿ ಯುನೆಸ್ಕೊ ಮುಖ್ಯ ಕಚೇರಿಯಲ್ಲಿ ನಡೆದ ಹತ್ತನೇ ಅಧಿವೇಶನದಲ್ಲಿ ಪರಿಷತ್‌ಗೆ ಮಾನ್ಯತೆ ಘೋಷಿಸಲಾಗಿದೆ. ಯುನೆಸ್ಕೊ–2003ರ ಅಮೂರ್ತ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಆಂತರಿಕ ಸಮಿತಿಗೆ ಸಲಹೆ ನೀಡಲು ಪರಿಷತ್ ಮಾನ್ಯತೆ ಪಡೆದಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಯುನೆಸ್ಕೊ ಮಾನ್ಯತೆಯು ನಾಡೋಜ ಎಚ್.ಎಲ್.ನಾಗೇಗೌಡ ಅವರ ಜನಪದ ಕಳಕಳಿಗೆ ಸಿಕ್ಕ ಗೌರವವಾಗಿದೆ. ಕರ್ನಾಟಕದ ಜಾನಪದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಸಂವರ್ಧನೆ, ಪ್ರಸಾರ, ಪ್ರಚಾರ, ದಾಖಲಾತಿ ಮಾಡುವ ನಮ್ಮ ಪ್ರಯತ್ನಗಳಿಗೆ ಈ ಮಾನ್ಯತೆ ಸಾಕ್ಷಿಯಾಗಿದೆ. ಇದರೊಂದಿಗೆ, ಅಂತರರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆಯ ಸಮುದಾಯದಲ್ಲಿ ತನ್ನ ಪಾತ್ರವನ್ನು ಪರಿಷತ್ ಹೆಚ್ಚಿಸಿಕೊಂಡಿದೆ. ಜಾಗತಿಕ ಸಂವಾದಕ್ಕೆ ನಾವು ಪರಿಣಾಮಕಾರಿಯಾಗಿ ಕೊಡುಗೆ ನೀಡಲು ಈ ಗೌರವ ಉತ್ತೇಜಿಸುತ್ತದೆ ಎಂದು ಹೇಳಿದ್ದಾರೆ.

1979ರಲ್ಲಿ ಸ್ಥಾಪನೆಯಾದ ಪರಿಷತ್ 45 ವರ್ಷಗಳಿಂದ ಜಾನಪದ ಕ್ಷೇತ್ರದಲ್ಲಿ ಅಮೂಲ್ಯ ಕೆಲಸ ಮಾಡಿಕೊಂಡು ಬರುತ್ತಿದೆ. ರಾಮನಗರದಲ್ಲಿ ಸುಮಾರು 15 ಎಕರೆಯಲ್ಲಿ ಪರಿಷತ್ ನಿರ್ಮಿಸಿರುವ 'ಜಾನಪದ ಲೋಕ' ರಾಜ್ಯದಲ್ಲಷ್ಟೇ ಅಲ್ಲದೆ, ದೇಶದಲ್ಲೇ ಅಪರೂಪ ಬೃಹತ್ ಸಾಂಸ್ಕೃತಿಕ ಕೇಂದ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ತಿಳಿಸಿದ್ದಾರೆ.

ದರ್ಖಾಸ್ತ್ ಭೂಮಿಗೆ ಪೋಡಿ ಭಾಗ್ಯ

ಬೆಂಗಳೂರು: ರಾಜ್ಯದ ದರ್ಖಾಸ್ತ್ ಜಮೀನುಗಳ (ಸರ್ಕಾರಿ ಭೂಮಿ ಸಾಗುವಳಿ) 59 ಸಾವಿರ ಸರ್ವೆ ನಂಬರ್‌ಗಳ ಪೋಡಿಗಾಗಿ 'ಅರ್ಹತಾ ಕಡತ' ಸಿದ್ಧಪಡಿಸುವ ಕಾರ್ಯಕ್ಕೆ ಅ.2ರಂದು ಹಾಸನ ಜಿಲ್ಲೆಯಲ್ಲಿ ಚಾಲನೆ ನೀಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಈ ಕ್ರಮದಿಂದ ದಶಕಗಳ ಹಿಂದೆ ಮಂಜೂರಾದ ಭೂಮಿ ಉಳುಮೆ ಮಾಡುತ್ತಿರುವ ಸುಮಾರು 5 ಲಕ್ಷ ರೈತರ ಸಂಕಷ್ಟ ನಿವಾರಣೆಯಾಗಲಿದೆ ಎಂದರು.


ಶಾಸಕ ಮುನಿರತ್ನ ವಿರುದ್ಧ ಸಂತ್ರಸ್ತ ಆರೋಪ • ಐಎಎಸ್, ಐಎಫ್‌ಎಸ್ ಅಧಿಕಾರಿ ಹೆಸರು ಉಲ್ಲೇಖ

'ಕಚೇರಿ, ಸರ್ಕಾರಿ ಕಾರಲ್ಲೂ ಅತ್ಯಾಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುನಿರತ್ನ ಅವರು ನನ್ನ ಮೇಲೆ ನಿರಂತರ ಅತ್ಯಾಚಾರ ನಡೆಸಿದ್ದಲ್ಲದೇ, ಐಎಎಸ್ ಅಧಿಕಾರಿಯೊಬ್ಬರ ಪತಿ ಐಎಫ್‌ಎಸ್ ಅಧಿಕಾರಿಯ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿದ್ದ ಮಹಿಳೆಯನ್ನು ಹನಿಟ್ರ್ಯಾಪ್ ಮಾಡಲು ಮತ್ತು ಗಾಂಜಾ ಪ್ರಕರಣದಲ್ಲಿ ಸಿಲುಕಿಸಲು ನನ್ನನ್ನು ಬಳಸಿಕೊಂಡಿದ್ದರು' ಎಂದು ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ದಾಖಲಿಸಿದ್ದ ಸಂತ್ರಸ್ತೆ ನ್ಯಾಯಾಧೀಶರ ಎದುರು ನೀಡಿದ್ದ ಹೇಳಿಕೆಯಲ್ಲಿ ಆರೋಪಿಸಿದ್ದಾರೆ.

ಸಂತ್ರಸ್ತೆಯು ಸೆಪ್ಟೆಂಬರ್ 19ರಂದು ನೆಲಮಂಗಲದ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಎದುರು ಹಾಜರಾಗಿ ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 164ರ ಅಡಿಯಲ್ಲಿ ಹೇಳಿಕೆ ದಾಖಲಿಸಿದ್ದರು. ಸಂತ್ರಸ್ತ ಮಹಿಳೆಯ ಹೇಳಿಕೆಯ ದೃಢೀಕೃತ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ವಿಕಾಸಸೌಧದ ಸಚಿವರ ಕಚೇರಿ, ಸರ್ಕಾರಿ ಕಾರು ಮತ್ತು ಗೋದಾಮಿನಲ್ಲಿ ಮುನಿರತ್ನ ತಮ್ಮ ಮೇಲೆ ಅತ್ಯಾಚಾರ ನಡೆಸಿದ್ದರು ಎಂಬ ಆರೋಪವನ್ನು ಸಂತ್ರಸ್ತೆ ಮಾಡಿದ್ದಾರೆ.



ಮುನಿರತ್ನ

'2020ರ ಏಪ್ರಿಲ್‌ನಲ್ಲಿ ತಮ್ಮ ಗೋದಾಮಿಗೆ ಕರೆಸಿಕೊಂಡಿದ್ದ ಮುನಿರತ್ನ ಬಲವಂತವಾಗಿ ನನ್ನ ಮೇಲೆ ಅತ್ಯಾಚಾರ ನಡೆಸಿದ್ದರು. ಅತ್ಯಾಚಾರದ ದೃಶ್ಯವನ್ನು ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಬಿಬಿಎಂಪಿ ಸದಸ್ಯರೊಬ್ಬರ ಜೊತೆ ಎಚ್‌ಐವಿ ಸೋಂಕಿತೆಯನ್ನು ಲೈಂಗಿಕ ಸಂಪರ್ಕಕ್ಕೆ ಒಳಪಡಿಸಿ, ಅದನ್ನೂ ವಿಡಿಯೊ ಚಿತ್ರೀಕರಣ ಮಾಡಿಸಿದ್ದರು. ನನ್ನನ್ನೇ ಬಳಸಿಕೊಂಡು ಮತ್ತೊಬ್ಬ ರಾಜಕೀಯ ಮುಖಂಡರ ಲೈಂಗಿಕ ಕ್ರಿಯೆಯ ವಿಡಿಯೊವನ್ನೂ ಚಿತ್ರೀಕರಿಸಿಕೊಂಡಿದ್ದರು' ಎಂದು ಸಂತ್ರಸ್ತೆ ನ್ಯಾಯಾಧೀಶರ ಎದುರು ಹೇಳಿದ್ದಾರೆ.

'ಐಎಎಸ್ ಅಧಿಕಾರಿಯ ಪತಿ ವಿರುದ್ಧ ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲಿಸಿದ್ದ ಮಹಿಳೆಯ ಅಶ್ಲೀಲ ವಿಡಿಯೊ ಚಿತ್ರೀಕರಿಸಿ ಕೊಡುವಂತೆ ಮುನಿರತ್ನ ಸೂಚಿಸಿದ್ದರು. ಇದಕ್ಕಾಗಿ ಲಕ್ಷ್ಮೀ, ಕಿರಣ್‌ಕುಮಾರ್, ಲೋಹಿತ್ ಗೌಡ ಮತ್ತು ಮಂಜುನಾಥ ಎಂಬವರನ್ನು ನನ್ನೊಂದಿಗೆ ನಿಯೋಜಿಸಿದ್ದರು. ದೂರುದಾರ ಮಹಿಳೆಯನ್ನು ಗುಹಾಂತರ ರೆಸಾರ್ಟ್‌ಗೆ ಕರೆದೊಯ್ದು ವಿಡಿಯೊ ಚಿತ್ರೀಕರಿಸಲು ಪ್ರಯತ್ನಿಸಲಾಗಿತ್ತು. ಆಗ ಪ್ರಯತ್ನ ವಿಫಲವಾದ ಕಾರಣದಿಂದ ಚಿಕ್ಕಬಳ್ಳಾಪುರ ಸಮೀಪದ ಅಗಲಗುರ್ಕಿಯ ರೆಸಾರ್ಟ್ ಒಂದಕ್ಕೆ ಕರೆದೊಯ್ದು ಅಲ್ಲಿ ನಿದ್ದೆ ಮಾತ್ರೆ ನೀಡಿ ವಿಡಿಯೊ ಚಿತ್ರೀಕರಿಸಲಾಗಿತ್ತು' ಎಂದು ದೂರಿದ್ದಾರೆ.

'ದೂರುದಾರ ಮಹಿಳೆಯನ್ನು ಮತ್ತೊಮ್ಮೆ ಅಗಲಗುರ್ಕಿಯ ರೆಸಾರ್ಟ್‌ಗೆ ಕರೆದೊಯ್ದು ಅವರ ಬ್ಯಾಗ್‌ನಲ್ಲಿ ಗಾಂಜಾ ಸೇರಿದಂತೆ ಮಾದಕವಸ್ತುವನ್ನು ಇರಿಸಿ ಪೊಲೀಸರಿಂದ ಬಂಧಿಸುವ ಪ್ರಯತ್ನವನ್ನೂ ಮಾಡಲಾಗಿತ್ತು. ಆದರೆ, ಪೊಲೀಸರು ನಮ್ಮನ್ನು ಹಿಂಬಾಲಿಸಿದರೂ ಹಾಗೆಯೇ ಬಿಟ್ಟು ಹೋಗಿದ್ದರು. ನಂತರ ಲೋಹಿತ್ ಗೌಡ ಮೂಲಕ ದೂರು ಕೊಡಿಸಿ ಅಧಿಕಾರಿಯೊಬ್ಬರ ವಿರುದ್ಧ ಅತ್ಯಾಚಾರ ಆರೋಪ ಮಾಡಿದ್ದ ಮಹಿಳೆಯನ್ನು ಬಂಧಿಸಲಾಗಿತ್ತು. ಅವರನ್ನು ಮುನಿರತ್ನ ಅವರ ಮನೆಗೆ ಕರೆತಂದು ಹಲ್ಲೆ ನಡೆಸಲಾಗಿತ್ತು. ಬಳಿಕ ಮಹಿಳೆಯನ್ನು ಬೆದರಿಸಿ ಊರಿಗೆ ಕಳುಹಿಸಲಾಗಿತ್ತು' ಎಂದು ಸಂತ್ರಸ್ತೆ ತಿಳಿಸಿದ್ದಾರೆ.

'2020ರಿಂದ 2023ರವರೆಗೂ ಮುನಿರತ್ನ ಅವರು ನನ್ನ ಮೇಲೆ ಹಲವು ಬಾರಿ ಅತ್ಯಾಚಾರ ನಡೆಸಿದ್ದರು. ಅವರು ಹೇಳಿದಂತೆ ಕೇಳದಿದ್ದರೆ ನನ್ನ ಮಗನನ್ನು ಅಪಹರಣ ಮಾಡಿಸುತ್ತಾರೆ ಎಂದು ಮುನಿರತ್ನ ಅವರ ಅಂಗರಕ್ಷಕ ಶ್ರೀನಿವಾಸ್ ಬೆದರಿಸುತ್ತಿದ್ದರು. ಮಾಗಡಿಯ ಮಾಜಿ ಶಾಸಕರೊಬ್ಬರ ಅಶ್ಲೀಲ ವಿಡಿಯೊ ಚಿತ್ರೀಕರಿಸಿ ಕೊಡಲು ಆರೋಪಿ ಹೇಳಿದ್ದರು. ವೈದ್ಯರೊಬ್ಬರ ಅಶ್ಲೀಲ ವಿಡಿಯೊ ಮಾಡಿಕೊಡುವಂತೆಯೂ ಬೇಡಿಕೆ ಇಟ್ಟಿದ್ದರು. ಮುನಿರತ್ನ, ಅವರ ಅಂಗರಕ್ಷಕ ವಿಜಯ್‌ಕುಮಾರ್, ಸಹೋದರ ಸುಧಾಕರ್, ಬೆಂಬಲಿಗರಾದ ಕಿರಣ್‌ಕುಮಾರ್ ಮತ್ತು ಲೋಹಿತ್ ಗೌಡ ಈ ಎಲ್ಲ ಕೃತ್ಯಗಳಲ್ಲಿ ಭಾಗಿಯಾಗಿದ್ದರು' ಎಂದು ನ್ಯಾಯಾಧೀಶರ ಎದುರು ಮಹಿಳೆ ದೂರಿದ್ದಾರೆ.


'₹400 ಕೋಟಿ ಬಿಡುಗಡೆ ಮಾಡಿದ್ದ ಅಧಿಕಾರಿ'

'ತಮ್ಮ ಪತಿಯನ್ನು ಅತ್ಯಾಚಾರ ಆರೋಪದ ಪ್ರಕರಣದಿಂದ ಬಚಾವು ಮಾಡಲು ನೆರವು ನೀಡಿದ್ದಕ್ಕಾಗಿ ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಐಎಎಸ್ ಅಧಿಕಾರಿಯೊಬ್ಬರು ಮುನಿರತ್ನ ಅವರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಕ್ಕೆ ₹400 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು' ಎಂಬ ಆರೋಪವೂ ಸಂತ್ರಸ್ತೆಯು ನ್ಯಾಯಾಧೀಶರ ಎದುರು ನೀಡಿರುವ ಹೇಳಿಕೆಯಲ್ಲಿದೆ.

ನಿಧನ ವಾರ್ತೆ

ಮಾಜಿ ಶಾಸಕ ಕೆ. ಲಕ್ಷ್ಮಿನಾರಾಯಣ

ಬೈಂದೂರು (ಉಡುಪಿ): ಮಾಜಿ ಶಾಸಕ ಕೆ. ಲಕ್ಷ್ಮಿನಾರಾಯಣ (84) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಬೆಂಗಳೂರಿನ ನಿವಾಸದಲ್ಲಿ ನಿಧನರಾದರು.



ಕೆ. ಲಕ್ಷ್ಮಿನಾರಾಯಣ ಕುಂದಾಪುರದವರು. ಎಂಜಿನಿಯರಿಂಗ್ ಸ್ನಾತಕೋತ್ತರ ಪದವೀಧರರಾಗಿದ್ದ ಅವರು, ಬೆಂಗಳೂರಿನಲ್ಲಿ ಶ್ರೀ ಲಕ್ಷ್ಮಿ ಕನ್‌ಸ್ಟ್ರಕ್ಷನ್ ಸಂಸ್ಥೆ ಸ್ಥಾಪಿಸಿದ್ದರು. ಬಳಿಕ, ರಾಜಕೀಯಕ್ಕೆ ಪ್ರವೇಶಿಸಿ, 2008ರಲ್ಲಿ ಬೈಂದೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಜಯಗಳಿಸಿದ್ದರು.

ವಿಶ್ವ ರಾಮಕ್ಷತ್ರಿಯ ಮಹಾಸಂಘದ ಸ್ಥಾಪಕಾಧ್ಯಕ್ಷರಾಗಿದ್ದರು. ವಿವಿಧ ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ.

ಸಲ್ಲೇಖನ ವ್ರತದ ಮೂಲಕ ದೇಹತ್ಯಾಗ

ಕೊಪ್ಪಳ: ನಗರದಲ್ಲಿ 16 ದಿನಗಳ ಹಿಂದೆ ಜೈನ ಧರ್ಮೀಯರ ಶ್ರೇಷ್ಠ ಹಾಗೂ ಕಠೋರ ಸಂಥಾರ ಸಲ್ಲೇಖನ ವ್ರತ ಕೈಗೊಂಡಿದ್ದ ವೃದ್ಧೆ ಶುಕ್ರವಾರ ದೇಹ ತ್ಯಾಗ ಮಾಡಿದರು.



'ಅನೇಕ ವರ್ಷಗಳಿಂದ ಇಲ್ಲಿಯೇ ವಾಸವಾಗಿದ್ದ ಶ್ವೇತಾಂಬರ ಜೈನ ಪರಂಪರೆಯ ಮಾಂಗೀಲಾಲ ಚೋಪ್ರಾ ಅವರ ಪತ್ನಿ ಭಾಗ್ಯವಂತಿದೇವಿ ಚೋಪ್ರಾ (78) ಸೆ.11 ರಂದು ಮಧ್ಯಾಹ್ನ 3.41ಕ್ಕೆ ಸಲ್ಲೇಖನ ವ್ರತ ಆರಂಭಿಸಿದ್ದರು. ಭಾಗ್ಯವಂತಿದೇವಿ ತಮ್ಮ ಜೀವನದ ಸಾಂಸಾರಿಕ ಸುಖ–ದುಃಖಗಳನ್ನು ಎದುರಿಸಿ ಜೈನತ್ವದ ನಿಯಮಾವಳಿ ಪಾಲಿಸಿ ತ್ಯಾಗ, ಜಪ, ದಾನಧರ್ಮ ಮಾಡಿದ್ದಾರೆ' ಎಂದು ಅವರ ಸಂಬಂಧಿಕರು ತಿಳಿಸಿದರು.

ಬಿಎನ್‌ಎಸ್‌ಎಸ್ ಅಡಿ ಮೊದಲ ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು (ಪಿಸಿಆರ್) ದಾಖಲಿಸುವ ಮುನ್ನ ಅನುಸರಿಸಬೇಕಾದ ನ್ಯಾಯಿಕ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ–2023ರ (ಬಿಎನ್‌ಎಸ್‌ಎಸ್) ಕಲಂ 223ರ ಅಡಿಯಲ್ಲಿನ ವ್ಯಾಖ್ಯಾನವನ್ನು ತಾಂತ್ರಿಕವಾಗಿ ವಿಶದೀಕರಿಸಿರುವ ಕರ್ನಾಟಕ ಹೈಕೋರ್ಟ್, ಈ ಕುರಿತಾದ ದೇಶದ ಮೊದಲ ತೀರ್ಪನ್ನು ಪ್ರಕಟಿಸಿದೆ.

'ನನ್ನ ವಿರುದ್ಧ ಅಪರಾಧ ಪ್ರಕ್ರಿಯಾ ದಂಡ ಸಂಹಿತೆ–1973ರ (ಸಿಆರ್‌ಪಿಸಿ) ಅಡಿಯಲ್ಲಿ ಖಾಸಗಿ ದೂರನ್ನು ದಾಖಲಿಸಿಕೊಳ್ಳಲು ಮುಂದಾಗಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕ್ರಮ ಕಾನೂನು ಬಾಹಿರವಾಗಿದೆ' ಎಂದು ಆಕ್ಷೇಪಿಸಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಈ ತೀರ್ಪು ಪ್ರಕಟಿಸಿದ್ದಾರೆ.



'ಬಿಎನ್‌ಎಸ್‌ಎಸ್–2023ರ ಕಲಂ 223ರ ಪ್ರಕಾರ ಖಾಸಗಿ ದೂರನ್ನು ದಾಖಲಿಸಿಕೊಳ್ಳುವ ಮೊದಲಿಗೆ ಮ್ಯಾಜಿಸ್ಟ್ರೇಟ್, ಆರೋಪಿಗೆ ದೂರಿನ ಪ್ರತಿ, ಎಫ್‌ಐಆರ್, ಫಿರ್ಯಾದುದಾರ ಮತ್ತು ಸಾಕ್ಷಿಯ ಸ್ವಯಂ ಹೇಳಿಕೆ ಹಾಗೂ ಪೂರಕ ದಾಖಲೆಗಳನ್ನು ಒದಗಿಸಿ; ನಿಮ್ಮ ವಿರುದ್ಧ ಯಾಕೆ ಈ ದೂರನ್ನು ದಾಖಲಿಸಿಕೊಳ್ಳಬಾರದು ಎಂಬುದನ್ನು ವಿವರಿಸಿ ಎಂದು ಆರೋಪಿಯನ್ನು ಕೇಳುವುದು ಕಡ್ಡಾಯ. ಆರೋಪಿಯ ಉತ್ತರ ಸಮಂಜಸ ಎನಿಸಿದರಷ್ಟೇ ಅದನ್ನು ಸಂಜ್ಞೇಯ ಅಪರಾಧ ಎಂದು ಪರಿಗಣಿಸಬೇಕೊ ಬೇಡವೊ ಎಂಬ ತೀರ್ಮಾನವನ್ನು ಕೈಗೊಳ್ಳಬೇಕು ಮತ್ತು ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ತಿದಿ ಒತ್ತಬೇಕು' ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದಂತೆ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ 42ನೇ ಎಸಿಎಂಎಂ ಕೋರ್ಟ್ 2024ರ ಜುಲೈ 16ರಂದು ಹೊರಡಿಸಿರುವ ಆದೇಶವನ್ನು ವಜಾಗೊಳಿಸಿದೆ.

ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಚಿವ ದಿನೇಶ್ ಗುಂಡೂರಾವ್

'ಸಾರ್ವಜನಿಕ ಹುದ್ದೆಗಳಲ್ಲಿ ಬ್ರಾಹ್ಮಣರಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯರು, ಎಂಜಿನಿಯರ್ ಹುದ್ದೆಗಳಿಗೆ ಸೀಮಿತಗೊಳ್ಳದೇ ಸಾರ್ವಜನಿಕ ಸೇವಾ ಹುದ್ದೆಗಳಲ್ಲಿಯೂ ನಮ್ಮವರೇ ಇರಬೇಕು. ಆಗ ಎಲ್ಲ ಸಮುದಾಯಗಳಿಗೆ ಸ್ಪಂದಿಸುವುದರ ಜೊತೆಗೆ ನಮ್ಮ ಸಮಾಜಕ್ಕೂ ಒಳ್ಳೆಯದು ಮಾಡಲು ಸಾಧ್ಯ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಜಿಲ್ಲಾವಾರು ಮೊದಲ ಮೂರು ಸ್ಥಾನ ಗಳಿಸಿದ ವಿಪ್ರ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಶುಕ್ರವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ 'ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ–2024' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಐಎಎಸ್, ಕೆಎಎಸ್ ಅಧಿಕಾರಿಗಳಾಗಲು ಮುಂದೆ ಬರಬೇಕು. ರಾಜಕಾರಣಕ್ಕೆ ಬರಬಾರದು ಎಂದಲ್ಲ. ಆದರೆ, ಸ್ವಲ್ಪ ಕಷ್ಟದ ಕ್ಷೇತ್ರ ಆಗಿರುವುದರಿಂದ ರಾಜಕಾರಣಕ್ಕೆ ಬರುವ ಮೊದಲು ಯೋಚಿಸಿ' ಎಂದು ಸಲಹೆ ನೀಡಿದರು.



ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ 'ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ–2024' ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಮಾತನಾಡಿ, 'ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಅವರು ಯಾವುದೇ ಅಂಜಿಕೆ ಇಲ್ಲದೇ ಬ್ರಾಹ್ಮಣರ ಬೆನ್ನು ತಟ್ಟುತ್ತಿದ್ದರು. ಈಗಿನ ರಾಜಕಾರಣಿಗಳು ಸ್ವಲ್ಪ ಹೆದರುತ್ತಾರೆ. ನನ್ನ ಕ್ಷೇತ್ರದಲ್ಲಿ ಎರಡು ಲಕ್ಷ ಮತದಾರರಿದ್ದಾರೆ. ಅದರಲ್ಲಿ 2,000 ಮಾತ್ರ ಬ್ರಾಹ್ಮಣರಾಗಿದ್ದಾರೆ. ಅಭಿಮಾನದಿಂದ ಕೆಲವರು ನನಗೆ ಮತ ಹಾಕುತ್ತಾರೆ. ಹೆಚ್ಚಿನ ಬ್ರಾಹ್ಮಣರು ಯಾವ ಪಕ್ಷಕ್ಕೆ ಹಾಕುತ್ತಾರೆ ಎಂಬುದು ಎಲ್ಲರಿಗೂ ಗೊತ್ತು. ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಕೆಲಸ ಮಾಡಿ ಎಲ್ಲ ಸಮಾಜದವರನ್ನು ವಿಶ್ವಾಸಕ್ಕೆ ತೆಗೆದುಕೊಂಡಿರುವುದರಿಂದ ನಾನು ಒಂಬತ್ತು ಬಾರಿ ಶಾಸಕನಾಗಲು ಸಾಧ್ಯವಾಗಿದೆ' ಎಂದರು.

'ಬಡ ಬ್ರಾಹ್ಮಣ ವಿಧವೆಯರು ರಸ್ತೆಯಲ್ಲಿ ನಿಂತು ಯಾರ ಸಹಾಯವನ್ನೂ ಕೇಳಬಾರದು. ಅಂಥ ಯೋಜನೆಯನ್ನು ವಿಧವೆಯರಿಗಾಗಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರೂಪಿಸಬೇಕು' ಎಂದು ಸಲಹೆ ನೀಡಿದರು. ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಅಧ್ಯಕ್ಷತೆ ವಹಿಸಿದ್ದರು. ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿ ಪೂರ್ಣಿಮಾ ಪಿ.ಐ., ಶಾಸಕ ವಿಶ್ವಾಸ್ ವಸಂತ್ ವೈದ್ಯ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಭಾಗವಹಿಸಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇನ್ನೊಬ್ಬರ ಮೇಲೆ ದ್ವೇಷ ಸಾಧಿಸುವುದು, ನಾವು ವಿಷ ಕುಡಿದು ಅವರು ಸಾಯಲಿ ಎಂದು ಕಾಯುತ್ತಾ ಕುಳಿತಂತೆ.

–ಗೌತಮ ಬುದ್ಧ

ಠಾಣೆ ಎನ್‌ಕೌಂಟರ್ ಪ್ರಕರಣ ಪೊಲೀಸರ ಮೇಲೆ ಬಲವಾದ ಸಂದೇಹ

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಬದ್ಲಾಪುರದ ಶಾಲೆಯೊಂದರಲ್ಲಿ ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಹೊತ್ತಿದ್ದ ಅಕ್ಷಯ್ ಶಿಂದೆಯನ್ನು ಮಹಾರಾಷ್ಟ್ರ ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ಆದರೆ, ಇದು ಉದ್ದೇಶಪೂರ್ವಕ ಹತ್ಯೆ, ನಕಲಿ ಎನ್‌ಕೌಂಟರ್ ಎಂಬ ಬಲವಾದ ಸಂಶಯ ಮೂಡಿದೆ. ಇದು ನಕಲಿ ಎನ್‌ಕೌಂಟರ್ ಅಲ್ಲ ಎನ್ನುವುದಕ್ಕೆ ಕಾರಣಗಳೇನೂ ಕಾಣಿಸುತ್ತಿಲ್ಲ. ಆರೋಪಿಯನ್ನು ತನಿಖೆಗಾಗಿ ಜೈಲಿನಿಂದ ಕರೆದೊಯ್ಯಲಾಗುತ್ತಿತ್ತು. ಆಗ ಆತ ಪೊಲೀಸರ ಕೈಯಲ್ಲಿದ್ದ ರಿವಾಲ್ವರ್ ಕಸಿದುಕೊಂಡು ಗುಂಡು ಹಾರಿಸಿದ್ದಾನೆ. ಪೊಲೀಸರು ನಡೆಸಿದ ಪ್ರತಿದಾಳಿಯಲ್ಲಿ ಆತ ಮೃತಪಟ್ಟಿದ್ದಾನೆ. ಆದರೆ ಇಲ್ಲಿ ಹಲವು ಪ್ರಶ್ನೆಗಳು ಇವೆ: ಗುತ್ತಿಗೆ ಕಾರ್ಮಿಕ, ಶಾಲೆಯೊಂದರ ಸ್ವೀಪರ್ ಆಗಿದ್ದ ವ್ಯಕ್ತಿ ಜೀವಮಾನದಲ್ಲಿ ಒಮ್ಮೆಯೂ ರಿವಾಲ್ವರ್ ಮುಟ್ಟಿರಲೂ ಸಾಧ್ಯವಿಲ್ಲ; ಅಂತಹ ವ್ಯಕ್ತಿ, ಕೈಕೋಳ ತೊಡಿಸಿದ್ದರೂ ಪೊಲೀಸರ ರಿವಾಲ್ವರ್ ಸೆಳೆದುಕೊಂಡು ಅವರತ್ತ ಗುಂಡು ಹಾರಿಸಿ ತಪ್ಪಿಸಿಕೊಳ್ಳುವ ಕುರಿತು ಯೋಚಿಸುವುದಕ್ಕಾದರೂ ಸಾಧ್ಯವೇ? ಹೆಚ್ಚಿನ ಸಂಖ್ಯೆಯಲ್ಲಿದ್ದ ಪೊಲೀಸರು, ಶಿಷ್ಟಾಚಾರಕ್ಕೆ ವಿರುದ್ಧವಾಗಿ ಆತ ಸಾಯುವಂತೆ ಗುಂಡು ಹಾರಿಸಿದ್ದು ಏಕೆ ಎಂಬ ಪ್ರಶ್ನೆಯನ್ನೂ ಕೇಳಬೇಕಿದೆ.

ಸಂದೇಹಗಳನ್ನು ದೃಢಪಡಿಸಲು ಬಲವಾದ ಕಾರಣಗಳಿವೆ. ಮಹಾರಾಷ್ಟ್ರ ವಿಧಾನಸಭೆಗೆ ಕೆಲವೇ ವಾರಗಳಲ್ಲಿ ಚುನಾವಣೆ ನಡೆಯಲಿದೆ. ಅಕ್ಷಯ್ ಹತ್ಯೆಯ ಸನ್ನಿವೇಶವನ್ನು ಗಮನಿಸಿದರೆ, ಸರ್ಕಾರಕ್ಕೆ ಚುನಾವಣೆಯಲ್ಲಿ ಅನುಕೂಲ ಮಾಡಿಕೊಡಲು ಕೃತ್ಯ ಎಸಗಲಾಗಿದೆ ಎಂದು ಅನುಮಾನಿಸಿದರೆ ಅದನ್ನು ತಪ್ಪು ಎನ್ನಲಾಗದು. ರಾಜಕೀಯ ನಂಟುಗಳನ್ನು ಹೊಂದಿರುವ ಶಾಲಾ ಆಡಳಿತ ಮಂಡಳಿಗೂ ಈ ಹತ್ಯೆಯಿಂದ ಅನುಕೂಲವಿದೆ ಎಂದು ಆರೋಪಿಸಲಾಗಿದೆ. ಇಬ್ಬರು ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣವು ಜನರಲ್ಲಿ ಆಕ್ರೋಶ ಮೂಡಿಸಿತ್ತು ಮತ್ತು ಸರ್ಕಾರದ ವಿರುದ್ಧ ಜನರು ಪ್ರತಿಭಟನೆಯನ್ನೂ ನಡೆಸಿದ್ದರು. ಆರೋಪಿಯ ಹತ್ಯೆಯಿಂದಾಗಿ ತಕ್ಷಣವೇ ನ್ಯಾಯ ದೊರಕಿತು ಎಂದು ಜನರು ಸಂಭ್ರಮಿಸುತ್ತಾರೆ. ಇದರಿಂದ ಆಡಳಿತಾರೂಢ ಪಕ್ಷಕ್ಕೆ ಲಾಭವಿದೆ. ಶಿವಸೇನಾದ ನಾಯಕರು ಹತ್ಯೆಯನ್ನು ಸ್ವಾಗತಿಸಿದ್ದಾರೆ ಮತ್ತು ಪೊಲೀಸರು ಹೇಳಿದ ಹುರುಳಿಲ್ಲದ ಕತೆಯನ್ನು ಸಮರ್ಥಿಸಿಕೊಂಡಿದ್ದಾರೆ. ಆರೋಪಿಯನ್ನು ಗಲ್ಲಿಗೇರಿಸಬೇಕು ಎಂದು ಹೇಳುತ್ತಿದ್ದ ವಿರೋಧ ಪಕ್ಷಗಳು ಹತ್ಯೆಯನ್ನು ವಿರೋಧಿಸುತ್ತಿರುವುದು ಏಕೆ ಎಂದೂ ಸರ್ಕಾರವು ಪ್ರಶ್ನಿಸಿದೆ. ವಿರೋಧ ಪಕ್ಷಗಳದ್ದು 'ಅತ್ಯಾಚಾರಿಗಳನ್ನು ರಕ್ಷಿಸುವ ಮೈತ್ರಿಕೂಟ'ವೇ ಎಂದು ಬಿಜೆಪಿ ಪ್ರಶ್ನಿಸಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಹೊಣೆಗಾರಿಕೆ ಇರುವ ಸರ್ಕಾರ ಮತ್ತು ಆಡಳಿತ ಪಕ್ಷವು ಪ್ರಾಥಮಿಕ ತನಿಖೆ ಕೂಡ ಮುಗಿಯುವ ಮುನ್ನ, ತೀವ್ರ ಅನುಮಾನಾಸ್ಪದವಾದ ಹತ್ಯೆಯನ್ನು ಸಮರ್ಥಿಸಿಕೊಳ್ಳುವುದು ಸರಿಯೇ?



> ತಕ್ಷಣ ನ್ಯಾಯದ ಸಂಸ್ಕೃತಿಯನ್ನು ನಾವು ಅಪ್ಪಿಕೊಂಡರೆ, ಮನುಷ್ಯರಾಗಿ, ನಾಗರಿಕರಾಗಿ ಮತ್ತು ಒಂದು ಸಮಾಜವಾಗಿ ವಿಫಲರಾಗುತ್ತೇವೆ

ಕಾನೂನನ್ನು ಕೈಗೆತ್ತಿಕೊಳ್ಳುವ ಅಧಿಕಾರ ಪೊಲೀಸರಿಗೆ ಇಲ್ಲ. ಬಂದೂಕಿನ ಮೂಲಕ ಕಾನೂನು ಜಾರಿಗೆ ಅವಕಾಶ ಇಲ್ಲ. ಸಂವಿಧಾನ ಮತ್ತು ಕಾನೂನಿನ ಆಳ್ವಿಕೆ ಇರುವ ದೇಶದಲ್ಲಿ ಸಮರ್ಪಕ ಪ್ರಕ್ರಿಯೆ ಅನುಸರಿಸದೆ ಶಿಕ್ಷೆ ನೀಡಲು ಆಗದು. ತಕ್ಷಣವೇ ನ್ಯಾಯ ಸಿಗಬೇಕು ಎಂಬ ಹುಯಿಲು ನ್ಯಾಯ ವ್ಯವಸ್ಥೆ ಮತ್ತು ಕಾನೂನಿನ ಆಳ್ವಿಕೆಯು ಮುರಿದುಬಿದ್ದಿದೆ ಎಂಬುದರ ಸೂಚನೆಯಾಗಿದೆ. ಆರೋಪಿಯು ಅತ್ಯಂತ ಹೀನವಾದ ಕೃತ್ಯ ಎಸಗಿದ್ದರೂ ಆತನಿಗೆ ಶಿಕ್ಷೆ ನೀಡುವ ಮುನ್ನ ನ್ಯಾಯಸಮ್ಮತವಾದ ವಿಚಾರಣೆ ನಡೆಯಲೇಬೇಕು. ತಕ್ಷಣ ನ್ಯಾಯದ ಸಂಸ್ಕೃತಿಯನ್ನು ನಾವು ಅಪ್ಪಿಕೊಂಡರೆ, ಮನುಷ್ಯರಾಗಿ, ನಾಗರಿಕರಾಗಿ ಮತ್ತು ಒಂದು ಸಮಾಜವಾಗಿ ನಾವು ವಿಫಲರಾಗುತ್ತೇವೆ. ಇಂತಹ ಪ್ರಕರಣಗಳಲ್ಲಿ ಸ್ವಯಂಪ್ರೇರಿತ ತನಿಖೆಗೆ ಸುಪ್ರೀಂ ಕೋರ್ಟ್ ಈ ಹಿಂದೆ ಆದೇಶ ಮಾಡಿದ್ದಿದೆ. ಈ ಎನ್‌ಕೌಂಟರ್ ಪ್ರಕರಣದ ಕುರಿತು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕಾದ ಅಗತ್ಯ ಇದೆ. ತಪ್ಪು ಎಸಗಿಲ್ಲ ಎಂಬುದು ಸಾಬೀತಾಗುವವರೆಗೆ ಪೊಲೀಸರು ತಪ್ಪಿತಸ್ಥರಂತೆಯೇ ಮೇಲ್ನೋಟಕ್ಕೆ ಕಾಣುತ್ತಾರೆ.

ದಿನದ ಟ್ವೀಟ್

ಹುಸಿ ಪ್ರತಿಷ್ಠೆಯ ಪರಾಕಾಷ್ಠೆ



ರಾಜಸ್ಥಾನದಲ್ಲಿ ವಿವಿಐಪಿ ಮೂರ್ಖರ ಮೂರ್ಖತನ ಸಂಪೂರ್ಣವಾಗಿ ಬಯಲಾಗಿದೆ. ಉಪಮುಖ್ಯಮಂತ್ರಿ ಹಾಗೂ ಬಿಜೆಪಿ ಮುಖಂಡ ಪ್ರೇಮ್‌ಚಂದ್ ಬೈರವ ಅವರ ಪುತ್ರ ಆಶು, ಜೀಪ್‌ನಲ್ಲಿ ಕುಳಿತು ರೀಲ್ಸ್ ಮಾಡುತ್ತಿದ್ದು, ಜೊತೆಗೆ ಎರಡು ಪೊಲೀಸ್ ಬೆಂಗಾವಲು ವಾಹನಗಳು ತೆರಳುತ್ತಿರುವುದು ವಿಡಿಯೊ ದೃಶ್ಯಾವಳಿಯಲ್ಲಿ ಕಂಡುಬಂದಿದೆ. ಆಶು ಜೊತೆಗೆ ಇರುವ ಯುವಕ, ಕಾಂಗ್ರೆಸ್ ನಾಯಕ ಪುಷ್ಪೇಂದ್ರ ಭಾರದ್ವಾಜ್ ಅವರ ಪುತ್ರ ಕಾರ್ತಿಕೇಯ.

ಶಿವ್ ಅರೂರ್, ಪತ್ರಕರ್ತ, ಲೇಖಕ

ಕಿಡಿನುಡಿ

ಉತ್ತರಪ್ರದೇಶದ ಕಾನ್ಪುರದಲ್ಲಿ ನಡೆದ ಭಾರತ– ಬಾಂಗ್ಲಾದೇಶ ಎರಡನೇ ಟೆಸ್ಟ್ ಪಂದ್ಯದ ವೇಳೆ, ಬಾಂಗ್ಲಾದೇಶ ಕ್ರಿಕೆಟ್ ತಂಡದ 'ಸೂಪರ್ ಫ್ಯಾನ್' ಟೈಗರ್ ರಾಬಿ ಅವರನ್ನು ಕೆಲವು ವ್ಯಕ್ತಿಗಳು ಥಳಿಸಿರುವ ಆರೋಪ ಕೇಳಿಬಂದಿದೆ. ಇದು 'ಅತಿಥಿ ದೇವೋಭವ'ಕ್ಕೆ ಸಂಪೂರ್ಣ ವಿರುದ್ಧವಾದುದು ಮತ್ತು ಕ್ರೀಡೆಯ ಆಶಯಕ್ಕೆ ಹಾನಿ ಉಂಟುಮಾಡುವಂತಹ ನಡೆ. ಬಿಸಿಸಿಐ ಕ್ರಮ ಜರುಗಿಸಲೇಬೇಕು.

ವೀಣಾ ಜೈನ್

25 ವರ್ಷಗಳ ಹಿಂದೆ

ಮಂಗಳವಾರ, 28-9-1999

• ಮಾರುತಿ ಹಣ ದುರ್ಬಳಕೆ ಹರ್ಷದ್ ಮೆಹ್ತಾಗೆ ಶಿಕ್ಷೆ

ಮುಂಬೈ, ಸೆ. 27 (ಪಿಟಿಐ)– 'ಮಾರುತಿ ಉದ್ಯೋಗ್ ಸಂಸ್ಥೆ'ಗೆ ಸೇರಿದ ರೂ 38.97 ಕೋಟಿ ಹೆಚ್ಚುವರಿ ಹಣವನ್ನು ದುರುಪಯೋಗ ಮಾಡಿಕೊಂಡ ಆಪಾದನೆಗಾಗಿ ಹರ್ಷದ್ ಮೆಹ್ತಾ ಮತ್ತು ಇತರ ಮೂವರಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಇಂದು ಶಿಕ್ಷೆ ವಿಧಿಸಿತು.

ಶಿಕ್ಷೆಯ ಪ್ರಮಾಣ ಕುರಿತು ನ್ಯಾಯಾಲಯ ನಾಳೆ ಆದೇಶ ನೀಡಲಿದೆ.

ಏಳು ವರ್ಷಗಳ ಹಿಂದೆ ಇಡೀ ದೇಶವನ್ನು ತಲ್ಲಣಗೊಳಿಸಿದ್ದ ಕೋಟ್ಯಂತರ ರೂಪಾಯಿಯ ಷೇರು ಹಗರಣದ ಪ್ರಮುಖ ಆರೋಪಿ ಮೆಹ್ತಾ ಮಾರುತಿ ಸಂಸ್ಥೆ ಹಾಗೂ ಬ್ಯಾಂಕಿನ ಕೆಲವು ಅಧಿಕಾರಿಗಳ ಜತೆ ಶಾಮೀಲಾಗಿ 1989ರಿಂದ 91ರ ಅವಧಿಯಲ್ಲಿ, ಮಾರುತಿಗೆ ಸೇರಿದ ರೂ 38.97 ಕೋಟಿ ಹೆಚ್ಚುವರಿ ಹಣವನ್ನು ದುರುಪಯೋಗ ಮಾಡಿಕೊಂಡ ಪ್ರಕರಣದಲ್ಲಿ ತಪ್ಪಿತಸ್ಥರು ಎಂದು ನ್ಯಾಯಾಲಯ ಘೋಷಿಸಿತು.

• ಕಬಿನಿ, ಹಾರಂಗಿಗೆ ಕೇಂದ್ರ ತಂಡ ಭೇಟಿ

ಮೈಸೂರು, ಸೆ. 27– ಕಾವೇರಿ ಜಲಾನಯನ ಪ್ರದೇಶಗಳಾದ ಕಬಿನಿ ಹಾಗೂ ಹಾರಂಗಿ ಜಲಾಶಯಗಳಲ್ಲಿ ನೀರಿನ ಪ್ರಮಾಣ ಹಾಗೂ ಅಚ್ಚುಕಟ್ಟು ಪ್ರದೇಶದ ಬಗ್ಗೆ ಮಾಹಿತಿಯನ್ನು ಖುದ್ದು ಅರಿಯಲು ಕೇಂದ್ರದ ಕಾವೇರಿ ಉಸ್ತುವಾರಿ ಸಮಿತಿಯ ಇಬ್ಬರು ಸದಸ್ಯರ ಪ್ರತ್ಯೇಕ ಎರಡು ತಂಡಗಳು ಇಂದು ಆ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದವು.

ಕೇಂದ್ರ ಜಲಸಂಪನ್ಮೂಲ ಆಯೋಗದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ಆಂಟನಿ ಬಾಲನ್ ಹಾಗೂ ಕೆ.ಎಸ್. ಜೇಕಬ್ ಅವರು ಕಬಿನಿ ಜಲಾಶಯಕ್ಕೂ ಕೇಂದ್ರ ಕಾವೇರಿ ನಿಗಾ ಸಮಿತಿಯ ಸದಸ್ಯ ಕಾರ್ಯದರ್ಶಿ ಸಿ.ಡಿ. ಕೋಚೆ ಮತ್ತು ಅದೇ ಸಮಿತಿಯ ರಾಜ್ಯ ಪ್ರತಿನಿಧಿಯಾದ ಮುಖ್ಯ ಎಂಜಿನಿಯರ್ ವಸಿಷ್ಠ ಅವರು ಹಾರಂಗಿ ಜಲಾಶಯ ಪ್ರದೇಶಕ್ಕೂ ಭೇಟಿ ನೀಡಿ ಪರಿಶೀಲಿಸಿದರು.

50 ವರ್ಷಗಳ ಹಿಂದೆ

ಶನಿವಾರ, 28-9-1974

• ಕಳ್ಳಸಾಗಣೆ: ನಗರದಲ್ಲಿ 'ಬೆಳ್ಳಿ ದೊರೆ' ಶ್ರೀನಿವಾಸ ಶೆಟ್ಟಿ ಸೇರಿ ಇಬ್ಬರ ಬಂಧನ

ಬೆಂಗಳೂರು, ಸೆ. 27– 'ಬೆಳ್ಳಿ ದೊರೆ' ಎಂದು ಹೇಳಲಾದವನೊಬ್ಬನೂ ಸೇರಿ, ನಗರದ ಪೊಲೀಸರು ಇಬ್ಬರು ಕಳ್ಳಸಾಗಣೆದಾರರನ್ನು ಆಂತರಿಕ ಸ್ಥಾನಬದ್ಧತಾ ಕಾಯ್ದೆ ರೀತ್ಯ ಇಂದು ಇಲ್ಲಿ ಬಂಧಿಸಿದರು.

ಒಬ್ಬನ ಹೆಸರು ಮನೊಭಾಯ್ ಷಾ (30) ಇನ್ನೊಬ್ಬನ ಹೆಸರು ಟಿ. ಶ್ರೀನಿವಾಸ ಶೆಟ್ಟಿ (44) ಎಂದು ಪೊಲೀಸರು ತಿಳಿಸಿದರು.

'ಬೆಳ್ಳಿ ದೊರೆ' ಎನ್ನಲಾದ ಶ್ರೀನಿವಾಸ ಶೆಟ್ಟಿ ನಗರದಲ್ಲಿ ಆಭರಣಗಳ ಅಂಗಡಿಯೊಂದರ ಮಾಲೀಕ. ಬಂಧಿತರಿಬ್ಬರನ್ನು ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು. ನಿನ್ನೆ ಪೊಲೀಸರು ಆರು ಮಂದಿಯನ್ನು ಇದೇ ಆಪಾದನೆ ಮೇಲೆ ಬಂಧಿಸಿದರು.

ಮನೊಭಾಯ್ ಎಂಬುವನನ್ನು ಅವನ ಅಂಗಡಿಯಲ್ಲೂ ಶ್ರೀನಿವಾಸ ಶೆಟ್ಟಿಯನ್ನು ಬೇರೊಂದು ಕಡೆಯೂ ಬೆಳಗಿನ ಜಾವವೇ ಪೊಲೀಸರು ತಮ್ಮ ಬುಟ್ಟಿಗೆ ಹಾಕಿಕೊಂಡರು.


• ಗದಗ– ಬೆಂಗಳೂರು ಬಸ್ ಅಪಘಾತದಲ್ಲಿ ಏಳು ಮಂದಿ ಸಾವು

ತುಮಕೂರು, ಸೆ. 27– ಗದಗ– ಬೆಂಗಳೂರು ಕೆ.ಎಸ್.ಆರ್.ಟಿ.ಸಿ. ಬಸ್ ಶುಕ್ರವಾರ ಬೆಳಗಿನ ಜಾವ ತುಮಕೂರಿಗೆ 15 ಮೈಲಿ ದೂರದ ಬಿಲ್ಲನಕುಂಟೆ ಬಳಿ ಮರಕ್ಕೆ ಡಿಕ್ಕಿ ಹೊಡೆದು ಏಳು ಮಂದಿ ಮೃತರಾಗಿ, ಏಳು ಮಂದಿ ಗಾಯಗೊಂಡರು.

ಮೃತರಲ್ಲಿ ಇಬ್ಬರು ವೈದ್ಯರಾದ ತಂದೆ ಮತ್ತು ಮಗ ಸೇರಿದ್ದಾರೆ. ಅವರು ತಮ್ಮ ಕುಟುಂಬದೊಂದಿಗೆ ರಾಮೇಶ್ವರಕ್ಕೆ ಯಾತ್ರೆ ಹೊರಟಿದ್ದರು. ಬಸ್‌ನಲ್ಲಿ 27 ಮಂದಿ ಪ್ರಯಾಣಿಸುತ್ತಿದ್ದರು.

ಇತಿಹಾಸದಿಂದ ಪಾಠ ಕಲಿಯಬೇಕು, ಆದರೆ ರಾಜಕಾರಣಿಗಳು ಪಾಠ ಕಲಿತಿದ್ದು ಕಡಿಮೆ

ತಪ್ಪಿ ನಡೆದರೆ ಮೆಚ್ಚನಾ ಮತದಾರನು!



ಅನುಸಂಧಾನ

ರವೀಂದ್ರ ಭಟ್ಟ

ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಟಿ.ಸಿದ್ದಲಿಂಗಯ್ಯ ಅಂತ ಒಬ್ಬರು ಸಚಿವರಿದ್ದರು. ಮೈಸೂರು ಭಾಗದವರಾದ ಅವರು ಅಪ್ಪಟ ಗಾಂಧಿವಾದಿ. ಮದ್ದೂರು ಶಿವಪುರಧ್ವಜ ಸತ್ಯಾಗ್ರಹ, ವಿದುರಾಶ್ವತ್ಥದಲ್ಲಿನ ಕಾಂಗ್ರೆಸ್ ಕಾರ್ಯಕರ್ತರ ಮೇಲಿನ ಗೋಲಿಬಾರ್ ವಿರೋಧಿ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ, ಜವಾಬ್ದಾರಿಯುತ ಸರ್ಕಾರಕ್ಕಾಗಿ ನಡೆದ ಹೋರಾಟ, ಮೈಸೂರು ಚಲೋ ಚಳವಳಿ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದ ಅವರು ಮೈಸೂರು ಭಾಗದ ಪ್ರಭಾವಿ ಜನನಾಯಕರಾಗಿದ್ದರು. ಸ್ವಾತಂತ್ರ್ಯಾನಂತರ ಮೈಸೂರು ರಾಜ್ಯದ ಅಧಿಕಾರ ಸೂತ್ರ ಹಿಡಿದ ಕೆ.ಸಿ. ರೆಡ್ಡಿ ಮತ್ತು ಕೆಂಗಲ್ ಹನುಮಂತಯ್ಯ ನೇತೃತ್ವದ ಸಚಿವ ಸಂಪುಟಗಳಲ್ಲಿ ಸಹಜವಾಗಿಯೇ ಸಚಿವ ಸ್ಥಾನ ಗಳಿಸಿದ್ದರು.

ಕೆಂಗಲ್ ಹನುಮಂತಯ್ಯ ನೇತೃತ್ವದ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದ ಕೆಲವೇ ತಿಂಗಳಿನಲ್ಲಿ, ಕೈಗಾರಿಕೆ ಮತ್ತು ವಿದ್ಯುತ್ ಖಾತೆ ಸಚಿವರಾಗಿದ್ದ ಸಿದ್ದಲಿಂಗಯ್ಯ ಅವರ ಮೇಲೆ ಸ್ವಜನಪಕ್ಷಪಾತದ ಆರೋಪ ಕೇಳಿಬಂತು. ಆರೋಪ ಮಾಡಿದವರು ಕಾಂಗ್ರೆಸ್ ಶಾಸಕರೇ ಆಗಿದ್ದ ನಾಗಯ್ಯ ರೆಡ್ಡಿ ಅವರು. ವಿದ್ಯುತ್ ಇಲಾಖೆಗೆ ತುರ್ತಾಗಿ ಅಗತ್ಯವಾಗಿದ್ದ 176 ಟನ್ ತಾಮ್ರದ ತಂತಿಗಳನ್ನು ಪುಣೆಯ ದೇಹು ರಸ್ತೆಯ ಮಿಲಿಟರಿ ಡಿಪೊದಿಂದ ಬೆಂಗಳೂರಿಗೆ ಸಾಗಿಸುವ ಗುತ್ತಿಗೆಯನ್ನು ಸಚಿವರು ತಮ್ಮ ಸಹೋದರ ಸಿದ್ಧಬಸಪ್ಪ ಅವರು ಪಾಲುದಾರರಾಗಿರುವ ಶ್ರೀ ಶಂಕರ್ ಆ್ಯಂಡ್ ಕಂಪನಿಗೆ ದೊರಕಿಸಿಕೊಟ್ಟಿದ್ದಾರೆ ಎಂಬುದು ನಾಗಯ್ಯ ರೆಡ್ಡಿ ಅವರ ಆರೋಪ. ತಾಮ್ರದ ತಂತಿ ಸಾಗಾಣಿಕೆಗೆ ಮುಂಬೈನ ವಾಲಿ ಆ್ಯಂಡ್ ಕಂಪನಿ ಟೆಂಡರ್ ಅರ್ಜಿ ಸಲ್ಲಿಸಿತ್ತು. ಒಂದು ಪೌಂಡ್ ತಾಮ್ರದ ತಂತಿ ಸಾಗಾಣಿಕೆಗೆ ವಾಲಿ ಆ್ಯಂಡ್ ಕಂಪನಿ ಮೂರು ಆಣೆ ದರ ನಮೂದಿಸಿತ್ತು. ಆದರೂ ಶ್ರೀ ಶಂಕರ್ ಆ್ಯಂಡ್ ಕಂಪನಿಗೆ ಒಂದು ಪೌಂಡ್ ತಂತಿ ಸಾಗಣೆಗೆ ಐದು ಆಣೆ ದರ ನಿಗದಿಪಡಿಸಿ ಗುತ್ತಿಗೆ ನೀಡಲಾಗಿದೆ. ಸರ್ಕಾರದ ಬೊಕ್ಕಸಕ್ಕೆ ನಷ್ಟವಾದರೂ ಪರವಾಗಿಲ್ಲ ತಮ್ಮ ಸಹೋದರ ಪಾಲುದಾರರಾಗಿರುವ ಕಂಪನಿಗೆ ಲಾಭ ಮಾಡಿಕೊಡಬೇಕು ಎನ್ನುವುದು ಸಚಿವರ ಉದ್ದೇಶ. ಸರಕು ಸಾಗಣೆ ಕ್ಷೇತ್ರದಲ್ಲಿ ಶ್ರೀ ಶಂಕರ್ ಕಂಪನಿಗೆ ಯಾವುದೇ ಅನುಭವ ಇಲ್ಲ. ಅಲ್ಲದೆ ಟೆಂಡರ್ ಪಡೆದುಕೊಂಡ ಕಂಪನಿ ಮುಂಬೈನ ನ್ಯೂ ಪಂಜಾಬ್ ವರ್ಕ್ಸ್‌ಗೆ ಉಪಗುತ್ತಿಗೆ ನೀಡಿದೆ. ಪಕ್ಷಪಾತವಿಲ್ಲದೆ, ರಾಗ ಅಥವಾ ದ್ವೇಷವಿಲ್ಲದೆ ತನಗೆ ವಹಿಸಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಮಾಡುವುದಾಗಿ ಪ್ರಮಾಣವಚನ ಸ್ವೀಕರಿಸಿದ ಸಚಿವ ಟಿ. ಸಿದ್ದಲಿಂಗಯ್ಯ ಅವರು ಸ್ವಜನಪಕ್ಷಪಾತ ಮಾಡಿರುವುದು ಸ್ಪಷ್ಟವಾಗಿರುವುದರಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ರೆಡ್ಡಿ ಒತ್ತಾಯಿಸಿದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಲ್ಲದೆ ಈ ವಿಚಾರ ವಿಧಾನಸಭೆಯಲ್ಲಿಯೂ ಪ್ರಸ್ತಾಪವಾಗಿ ಭಾರಿ ಕೋಲಾಹಲವನ್ನೇ ಎಬ್ಬಿಸಿತು.

1953ರ ಫೆಬ್ರುವರಿಯಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಿದ ಸಿದ್ದಲಿಂಗಯ್ಯ ಅವರು 'ತಾಮ್ರದ ತಂತಿ ಸಾಗಣೆ ಗುತ್ತಿಗೆ ನೀಡಿಕೆಯಲ್ಲಿ ನಾನು ಸ್ವಜನಪಕ್ಷಪಾತ ಮಾಡಿಲ್ಲ. ಶ್ರೀ ಶಂಕರ್ ಆ್ಯಂಡ್ ಕಂಪನಿಯ ಆರಂಭದ ಹಂತದಲ್ಲಿ ನನ್ನ ಸಹೋದರ ಸಿದ್ಧಬಸಪ್ಪ ಪಾಲುದಾರರಾಗಿದ್ದು ನಿಜ. ಆದರೆ ನಂತರ ಅವರು ಕಂಪನಿಯಿಂದ ಹೊರಬಂದಿದ್ದರು. ಗುತ್ತಿಗೆ ಒಪ್ಪಂದ ನಡೆಯುವ ಸಂದರ್ಭದಲ್ಲಿ ಅವರು ಆ ಕಂಪನಿಯಲ್ಲಿ ಇರಲಿಲ್ಲ. ತಂತಿ ಸಾಗಾಣಿಕೆ ಗುತ್ತಿಗೆಯನ್ನು ಶ್ರೀ ಶಂಕರ್ ಆ್ಯಂಡ್ ಕಂಪನಿಯ ಚೌಡಪ್ಪ ಅವರು ಪಡೆದಿದ್ದರು. ಇದು ವಾಸ್ತವ. ಆದರೂ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಯಾವುದೇ ರೀತಿಯ ತನಿಖೆ ನಡೆಸಿದರೂ ಅದನ್ನು ಎದುರಿಸಲು ಸಿದ್ಧನಿದ್ದೇನೆ. ನಿಷ್ಪಕ್ಷಪಾತ ತನಿಖೆಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ತಕ್ಷಣವೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ಪ್ರಕಟಿಸಿದರು.

ನಂತರ ತನಿಖೆ ನಡೆದು, ಸಿದ್ದಲಿಂಗಯ್ಯ ಅವರದ್ದು ಯಾವುದೇ ತಪ್ಪಿಲ್ಲ ಎನ್ನುವುದು ಸಾಬೀತಾಯಿತು. ಆಗ ಕೆಂಗಲ್ ಹನುಮಂತಯ್ಯ ಅವರು ಸಿದ್ದಲಿಂಗಯ್ಯ ಅವರಿಗೆ ಮತ್ತೆ ಸಚಿವರಾಗಿ ಮುಂದುವರಿಯಿರಿ ಎಂದು ಒತ್ತಾಯಿಸಿದರೂ ಅವರು ಒಪ್ಪಲಿಲ್ಲ.

ಕೆಂಗಲ್ ಅವರ ಕಾಲದ ಈ ಕತೆ ಕೇಳಿದಾಗ ನಿಮಗೆ ಈಗಿನ ಸಿದ್ದರಾಮಯ್ಯ ಅವರ ಮುಡಾ ಪ್ರಕರಣ ನೆನಪಾಗುವುದು ಸಹಜ. ಅವರು ಸಿದ್ದಲಿಂಗಯ್ಯ, ಇವರು ಸಿದ್ದರಾಮಯ್ಯ. ಅವರು ಗಾಂಧಿವಾದಿ, ಇವರು ಸಮಾಜವಾದಿ. ಅವರು ಮೈಸೂರು ಪ್ರಾಂತ್ಯದವರು, ಇವರೂ ಮೈಸೂರಿನವರು. ಅವರು ಹೋರಾಟಗಾರರು, ಇವರೂ ಹೋರಾಟಗಾರರು. ಅವರು ಜನನಾಯಕರಾಗಿದ್ದರು, ಇವರೂ ಜನನಾಯಕರು. ಇಬ್ಬರ ಮೇಲೂ ಸ್ವಜನಪಕ್ಷಪಾತದ ಆರೋಪ. ಅವರೂ ತಮ್ಮ ಮೇಲಿನ ಆರೋಪವನ್ನು ಅಲ್ಲಗಳೆದಿದ್ದರು, ಇವರೂ ತಾನು ಯಾವುದೇ ತಪ್ಪು ಮಾಡಿಲ್ಲ ಎಂದು ಪ್ರಬಲವಾಗಿ ವಾದಿಸುತ್ತಿದ್ದಾರೆ. ಅವರೂ ತನಿಖೆ ಎದುರಿಸಿದರು, ಇವರೂ ತನಿಖೆ ಎದುರಿಸಲು ಸಿದ್ಧರಾಗಿ ನಿಂತಿದ್ದಾರೆ. ಆದರೆ ಅವರು 'ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂದು ಹುದ್ದೆಯಿಂದ ಕೆಳಗಿಳಿದರು. ಇವರು 'ಯಾವುದೇ ತನಿಖೆಗೂ ಸಿದ್ಧ. ಆದರೆ ರಾಜೀನಾಮೆ ಪ್ರಶ್ನೆಯೇ ಇಲ್ಲ' ಎಂದು ಘೋಷಿಸಿದ್ದಾರೆ.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲರು ಒಪ್ಪಿಗೆ ಸೂಚಿಸಿದ್ದಾರೆ. ಹೈಕೋರ್ಟ್ ಕೂಡ ಅನುಮತಿ ನೀಡಿದೆ. ಲೋಕಾಯುಕ್ತ ತನಿಖೆ ನಡೆಯಲಿದೆ. ಸಿದ್ದರಾಮಯ್ಯ ಅವರೇ ಹೇಳಿಕೊಂಡ ಹಾಗೆ ಅವರ 40 ವರ್ಷದ ರಾಜಕೀಯ ಜೀವನದಲ್ಲಿ ಒಂದೂ ಕಪ್ಪುಚುಕ್ಕಿ ಇಲ್ಲ. 2013ರಿಂದ 2018ರ ಅವಧಿಗೆ ಮುಖ್ಯಮಂತ್ರಿ ಆಗಿದ್ದಾಗ ಅವರು ಯಾವುದೇ ಹಗರಣದಲ್ಲಿ ಸಿಕ್ಕಿಬಿದ್ದಿರಲಿಲ್ಲ. ತಮ್ಮ ರಾಜಕೀಯ ಜೀವನದ ಕೊನೆಯ ಇನಿಂಗ್ಸ್‌ನಲ್ಲಿರುವ ಅವರು ಈಗ ಬಟ್ಟೆ ಕೊಳೆ ಮಾಡಿಕೊಳ್ಳುವುದು ತರವಲ್ಲ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದು ರಾಜಕೀಯವಾಗಿ ಸರಿಯಾದ ಕ್ರಮವಲ್ಲ ಎಂದು ಸಿದ್ದರಾಮಯ್ಯ ಅಂದುಕೊಂಡಿರಬಹುದು. ತಪ್ಪನ್ನು ಒಪ್ಪಿಕೊಂಡಂತೆ ಆಗುತ್ತದೆ ಎಂದೂ ಅಂದಾಜಿಸಿರಬಹುದು. ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಒತ್ತಡಕ್ಕೆ ಮಣಿದೆ ಎಂಬ ಭಾವ ಬರಬಹುದು ಎಂದು ಅವರಿಗೆ ಅನ್ನಿಸಿರಬಹುದು. ಹೈಕೋರ್ಟ್ ತೀರ್ಪು ಏಕಪಕ್ಷೀಯವಾಗಿದೆ ಎಂದು ಸಹ ಅವರು ಅಂದುಕೊಂಡಿರಬಹುದು. ಮೇಲ್ಮನವಿ ಸಲ್ಲಿಸಲು ಎಲ್ಲ ಹಕ್ಕುಗಳೂ ಅವರಿಗೆ ಇರಬಹುದು. ಆದರೂ ಬಿಡುವುದರಲ್ಲಿ ಇರುವ ಗೌರವ ಅಂಟಿಕೊಳ್ಳುವುದರಲ್ಲಿ ಇಲ್ಲ ಎಂಬುದೂ ಅವರ ಅರಿವಿನಲ್ಲಿರಬೇಕು.

'ಇದು ವಿಧಾನಸೌಧವೋ ವಿಷಾದಸೌಧವೋ' ಎಂದು ಮುಖ್ಯಮಂತ್ರಿಯಾಗಿದ್ದ ಎಸ್.ನಿಜಲಿಂಗಪ್ಪ ಒಮ್ಮೆ ಪ್ರಶ್ನೆ ಮಾಡಿದ್ದರು. ವಿಧಾನಸೌಧಕ್ಕೆ ಶಂಕುಸ್ಥಾಪನೆ ಮಾಡಿದ ಕಾಲದಿಂದಲೂ ಒಂದಲ್ಲ ಒಂದು ವಿವಾದಕ್ಕೆ ಇದು ಕೇಂದ್ರಬಿಂದು ಆಗುತ್ತಲೇ ಇದೆ. ಮುಖ್ಯಮಂತ್ರಿ ಹುದ್ದೆಗೆ ಏರಿದ ಬಹುತೇಕ ಮಂದಿ ಏನಾದರೊಂದು ಕಾರಣಕ್ಕೆ ಸಂಕಷ್ಟಕ್ಕೆ ಸಿಲುಕಿದವರೇ ಆಗಿದ್ದಾರೆ. ವಿಧಾನಸೌಧವನ್ನು ಕಟ್ಟಿದ ಕೆಂಗಲ್ ಹನುಮಂತಯ್ಯ ಅವರೂ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾದರು. ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಕರೆಸಿಕೊಂಡ, ರಾಜ್ಯದಲ್ಲಿ ಸುಧಾರಣೆಯ ಪರ್ವವನ್ನು ಆರಂಭಿಸಿದ, ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ ದೇವರಾಜ ಅರಸು ಅವರೂ ಆರೋಪಗಳಿಂದ ಮುಕ್ತರಾಗಿರಲಿಲ್ಲ. ಭ್ರಷ್ಟಾಚಾರವನ್ನು ಸಾಂಸ್ಥೀಕರಿಸಿದರು ಎಂಬ ಆರೋಪದ ಗುಮ್ಮ ಅವರ ಹೆಗಲೇರಿತು.

ಮುಂದೆ ಅಧಿಕಾರಕ್ಕೆ ಬಂದ ಗುಂಡೂರಾವ್, ರಾಮಕೃಷ್ಣ ಹೆಗಡೆ, ದೇವೇಗೌಡ, ಬಂಗಾರಪ್ಪ, ಕುಮಾರಸ್ವಾಮಿ, ಯಡಿಯೂರಪ್ಪ ಎಲ್ಲರೂ ಒಂದಲ್ಲ ಒಂದು ಹಗರಣದಲ್ಲಿ ಸಿಲುಕಿದರು. ಸತ್ಯವಾಕ್ಯಕೆ ತಪ್ಪಿ ನಡೆಯುವುದೇ ಪರಿಪಾಟ ಎನ್ನುವಂತಾಯಿತು. ಈಗ ಅದು ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಯ ಬಾಗಿಲಿಗೂ ಬಂದು ನಿಂತಿದೆ. ಸತ್ಯ ವಾಕ್ಯಕೆ ತಪ್ಪಿ ನಡೆದ ನಾಯಕರನ್ನು ಮತದಾರರು ತಕ್ಷಣಕ್ಕೆ ಕ್ಷಮಿಸಿಲ್ಲ ಎನ್ನುವುದು ಇತಿಹಾಸ ಕಲಿಸಿದ ಪಾಠ. ಆದರೆ ನಮ್ಮ ನಾಯಕರು ಇತಿಹಾಸದಿಂದ ಪಾಠ ಕಲಿತಿದ್ದು ಕಡಿಮೆ.



ಚುರುಮುರಿ



ಕಿರಿ ಕಿರಿ ಅಬ್ಕಾರಿ!

• ತುರುವೇಕೆರೆ ಪ್ರಸಾದ್

'ನಾವೂ ಅಬ್ಕಾರಿ ಇಲಾಖೆ ಸೇರ್ಕಬೇಕಿತ್ತು ಕಣ್ರಲಾ' ಹರಟೆಕಟ್ಟೇಲಿ ಮಾತು ತೆಗೆದ ಗುದ್ಲಿಂಗ.

'ಈಗೇನ್ ನಿಂಗ್ ಕಮ್ಮಿಯಾಗೈತೆ? ಕಂಠಮಟ್ಟ ಕುಡ್ಕಂಡೇ ತೇಲಾಡ್ತಿರ್ತೀಯ' ಎಂದ ಮಾಲಿಂಗ.

'ಅಂಗಲ್ಲ ಕಣಲೇ, ಇದು ಪ್ರಾಣ ಓಗೋರ್ ಬಾಯಿಗೆ ನೀರು ಬಿಟ್ಟಂಗಿರ್ತದೆ. ಸಂಜೆ ಆತು ಅಂದ್ರೆ ಕಾಸು ಎಲ್ ವಂಚಾದು ಯೋಳು? ಅಲ್ಲಾದ್ರೆ ಕ್ರೇಟ್‌ಗಟ್ಲೆ ಬಾಟ್ಲು ಬಿದ್ದಿದಾವಂತೆ'.

'ಓ... ಲೋಕಾಯುಕ್ತ ದಾಳಿ ಬಗ್ಗೆ ಯೋಳ್ತಿದೀಯಾ? ಬರಿ ಬಾಟ್ಲೇ ಅಲ್ಲ ಕಣಮ್ಮಣ್ಣಿ, ಡ್ರಗ್ಸು, ಗಾಂಜಾ ಸಿಗ್ರೇಟು ಎಲ್ಲಾ ಸಿಕ್ಕವಂತೆ'.

'ರೈಡ್ ಮಾಡಿರ್ತಾರಲ್ವಾ? ಅದ್ನ ಅಂಗೇ ತಂದಾಕ್ಕಂಡಿರ್ತಾರೆ' ಅಂದ ಕಲ್ಲೇಶಿ.

'ಅದ್ಕೆಲ್ಲಾ ಲೆಕ್ಕ ಮಡಗ್ಬೇಕಲ್ವಾ?'

'ಲೆಕ್ಕ ಯಾಕ್ ಮಡ್ಗೀಯ? ಪೇಪರ್‍ರೋರು ಬರ್ದಿರ್ತಾರಲ್ಲ, ಇನ್ನು ರೇಡ್ ಮಾಡಿ ತಕಂಬಂದಿರಾದು ಒರಿಜಿನಲ್ ಬ್ರಾಂಡಾ, ಪೊಟ್ಟಣ ಕಟ್ಟಿರಾದು ಡ್ರಗ್ಸೇಯೇ ಅಂತ ಕ್ವಾಲಿಟಿ ಚೆಕ್ ಮಾಡಬೇಕಂದ್ರೆ ಅದ್ನ ಬಾಯಿಗೆ ಸುರ್ಕಳಾದು ಬಿಟ್ಟು ಮೆಶೀನ್ಗೆ ಸುರಿಯಕ್ಕಾಯ್ತದಾ? ನಿಧಾನಕ್ ವಿಲೇವಾರಿ ಮಾಡಿ ಮುಗ್ಸೋರು. ಅಷ್ಟರಲ್ಲೇ ಲೋಕಾಯುಕ್ತದೋರು ಅವಸರ ಬಿದ್ದು ಬಂದು ಚೆಕ್ ಮಾಡವ್ರೆ'.

'ಅದೂ ದಿಟ ಬಿಡ್ಲಾ! ಜೇನುಹುಟ್ಟು ಕಿತ್ತೋನಿಗೆ ಕೈ ನೆಕ್ಕಬೇಡ ಅಂದ್ರೆ ಎಂಗ್ಲಾ?'

'ವ್ಹಾ ಕಣ್ಲಾ! ಎಣ್ಣೆ ಲೈಸೆನ್ಸು, ಪರ್ಮಿಟ್ಟು ಅಂತ ಬಂದೋರಿಗೇನು ಕಾಪಿ, ಟೀ ತರ್ಸಕ್ಕಾಯ್ತದಾ? ಅವರವರ ಘನತೆಗೆ ತಕ್ಕಂಗೆ ಎಣ್ಣೆ ಟ್ರೀಟ್ ಕೊಟ್ರೆ ತಾನೆ ಇಲಾಖೆಗೂ ಒಂದು ಕಿಮ್ಮತ್ತು ಬರೋದು'.

'ಬೇಲಿಯೇ ಎದ್ದು ಹೊಲ ಮೇದಂಗೆ' ಅನ್ನೋದನ್ನ 'ಇಲಾಖೆಯೇ ಎಣ್ಣೆ ಕುಡಿದು ಮಲಗ್ದಂಗೆ' ಅಂತ ಗಾದೆ ಮಾಡ್ಬಹುದು'.

'ಹೆಚ್ಚು ಆದಾಯ ಕೊಡೋ ಇಲಾಖೆಗಳಲ್ಲೇ ಇಂಗಾಗ್ಬುಟ್ರೆ ಸರ್ಕಾರಕ್ಕೆ ಏನ್ರಲಾ ಸಿಗ್ತದೆ? ಅಬ್ಕಾರಿ, ಕಂದಾಯ, ಇವನ್ನೆಲ್ಲಾ ಲೋಕಾಯುಕ್ತದ ವ್ಯಾಪ್ತಿಯಿಂದ ಈಚೆ ಮಡಗ್ಬೇಕು ಅಂತ ಒಂದು ಮಸೂದೆ ಮಾಡ್ಬೇಕು'.

'ಮಸೂದೆಗೆ ಬಿದ್ದೀತು ಪೂರಾ ವೋಟು. ಆದರೆ ಮೇಲೊಬ್ರು ಇದಾರಲ್ಲ, ಗೆಹಲೋತು, ಅವರು ಸೈನ್ ಮಾಡ್ಬೇಕಲ್ಲ' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು!

ಸಂಗತ

ಕಲಬೆರಕೆ ಈಗ 'ಸಾವಿಲ್ಲದ ಮನೆಯ ಸಾಸಿವೆ'!

ಜನಸಾಮಾನ್ಯರು ದಿನನಿತ್ಯ ಬಳಸುವ ಆಹಾರ ಪದಾರ್ಥಗಳಿಂದ ಹಿಡಿದು ಔಷಧಿಗಳವರೆಗೂ ವಿಸ್ತರಿಸಿರುವ ಕಲಬೆರಕೆಯ ಬಗ್ಗೆ ಯಾವ ಪಕ್ಷವಾದರೂ ದನಿ ಎತ್ತಿದೆಯೇ?

• ನಾ.ದಿವಾಕರ

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಾಣಿಜ್ಯೀಕರಣ ಮತ್ತು ಔದ್ಯೋಗಿಕ ವಿಸ್ತರಣೆಯೇ ಪ್ರಧಾನ ಗುರಿ ಆಗಿರುವುದರಿಂದ, ಎಲ್ಲ ಕ್ಷೇತ್ರಗಳೂ ಸಹಜವಾಗಿ ತಮ್ಮ ಆಂತರಿಕ ಶುದ್ಧತೆಯನ್ನು ಕಳೆದುಕೊಳ್ಳುತ್ತಿವೆ. ಸಾಮಾನ್ಯ ಪರಿಭಾಷೆಯಲ್ಲಿ ನಾವು ಬಳಸುವ 'ಕಲಬೆರಕೆ' ಎಂಬ ಅಶುದ್ಧತೆಯ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಆಧುನಿಕ ನಾಗರಿಕತೆಯಲ್ಲಿ ಜನಬಳಕೆಗೆ ತೆರೆದುಕೊಳ್ಳುವ ಎಲ್ಲ ವಲಯಗಳೂ ಮಾರುಕಟ್ಟೆಯನ್ನು ಆಕರ್ಷಿಸಲು, ತನ್ಮೂಲಕ ಬಂಡವಾಳ- ಸಂಪತ್ತನ್ನು ವೃದ್ಧಿಸಿಕೊಳ್ಳಲು ಈ ಪ್ರಕ್ರಿಯೆಯನ್ನು ಅವಲಂಬಿಸುವುದನ್ನು ಗಮನಿಸಬಹುದು. ಇದಕ್ಕೆ ತಿರುಮಲ ತಿರುಪತಿ ಲಾಡು ಇತ್ತೀಚಿನ ಸೇರ್ಪಡೆ.

ತಿರುಪತಿಯ ಪ್ರಸಾದ ಎಂದೇ ಜನರು ಭಕ್ತಿಭಾವದಿಂದ ಸೇವಿಸುವ ಲಾಡು ಈಗ ರಾಜಕೀಯ ಮೇಲಾಟಕ್ಕೆ ಸಿಲುಕಿದೆ. ಪ್ರಸಿದ್ಧ ದೇವಸ್ಥಾನಗಳು ವಾಣಿಜ್ಯೀಕರಣಗೊಂಡು ಮಾರುಕಟ್ಟೆಯ ಒಂದು ಭಾಗವಾದಂತೆಲ್ಲಾ ಅಲ್ಲಿನ ಪ್ರತಿ ಚಟುವಟಿಕೆಯೂ ಲಾಭ, ನಷ್ಟದ ಲೆಕ್ಕಾಚಾರದಲ್ಲಿ ನಡೆಯುತ್ತದೆ.

ತಿರುಪತಿಯ ಲಾಡು ತಯಾರಿಕೆಗೆ ಅಗತ್ಯವಾದ ಸಾಮಗ್ರಿಗಳ ಖರೀದಿಯನ್ನು ಹೊರಗುತ್ತಿಗೆಗೆ ನೀಡಿರುವುದರಿಂದ, ಇದು ಸಹ ಒಂದು ಔದ್ಯೋಗಿಕ ಉತ್ಪನ್ನವೇ ಆಗಿದೆ. ಹೀಗಾಗಿ, ಸಹಜವಾಗಿಯೇ ಉದ್ಯಮಿ ತನ್ನ ಲಾಭ ಹೆಚ್ಚಿಸಿಕೊಳ್ಳಲು ವಾಮಮಾರ್ಗಗಳ ಮೊರೆ ಹೋಗುವ ಸಾಧ್ಯತೆ ಇರುತ್ತದೆ. ಇದರ ಸತ್ಯಾಸತ್ಯತೆ ಏನೇ ಇರಲಿ, ಬಂಡವಾಳಶಾಹಿ ಆರ್ಥಿಕತೆಯಲ್ಲಿ ದೈವ-ದೈವೀಕ ಸ್ಥಾನಗಳು ಮತ್ತು ಆಚರಣೆಗಳೆಲ್ಲವೂ ಸರಕೀಕರಣಕ್ಕೆ (ಕಮಾಡಿಫಿಕೇಷನ್) ಒಳಗಾಗುವುದರಿಂದ, ಭಕ್ತಾದಿಗಳ ಕೈಸೇರುವ ಲಾಡುವಿನಂತಹ ಪ್ರಸಾದಗಳು ಸಹ ಮಾರುಕಟ್ಟೆಯ ತಂತ್ರಗಳಿಂದ ಹೊರತಾಗುವುದಿಲ್ಲ.

'ಅತಿ ಕಡಿಮೆ ವೆಚ್ಚದಲ್ಲಿ ಅತಿ ಹೆಚ್ಚು ಲಾಭ' ಗಳಿಸುವುದು ಯಾವುದೇ ಮಾರುಕಟ್ಟೆಯ ಮೂಲಮಂತ್ರ ಆಗಿರುವುದರಿಂದ ಇಲ್ಲಿ ಸಹ ಕಲಬೆರಕೆ ನಡೆದಿರುವ ಸಾಧ್ಯತೆ ಇರುತ್ತದೆ. ಆದರೆ ಈ ವಿವಾದವನ್ನೂ ತನ್ನ ಲಾಭಕ್ಕೆ ಬಳಸಿಕೊಳ್ಳುವ ಅಧಿಕಾರ ರಾಜಕಾರಣದತ್ತ ಗಮನಹರಿಸಿದಾಗ ಕಾಣುವುದಾದರೂ ಏನು?

ನವ ಉದಾರವಾದಿ ಆರ್ಥಿಕತೆಯಲ್ಲಿ ರಾಜಕೀಯ ಸಹ ಕೊಡು–ಕೊಳ್ಳುವಿಕೆಯ, ಖರೀದಿ-ಬಿಕರಿ ಮಾರುಕಟ್ಟೆಯ ಜಗುಲಿಯೇ ಆಗಿದೆ. ಹಿಂದಿನ ಐದಾರು ದಶಕಗಳಿಂದಲೂ ಭಾರತದ ಗ್ರಾಹಕ ಮಾರುಕಟ್ಟೆಯನ್ನು ಆಕ್ರಮಿಸಿರುವ ಈ 'ಕಲಬೆರಕೆ' ಈಗ ಜನರ ಶ್ರದ್ಧಾಭಕ್ತಿಗೆ ನೇರವಾಗಿ ನಾಟಿರುವುದರಿಂದ ರಾಜಕೀಯ ಸ್ವರೂಪವನ್ನೂ ಪಡೆದಿದೆ. ಆದರೆ ಜನಸಾಮಾನ್ಯರು ಸೇವಿಸುವ ಅಡುಗೆ ಎಣ್ಣೆ, ತರಕಾರಿ, ದವಸ ಧಾನ್ಯಗಳಿಂದ ಹಿಡಿದು, ಜೀವರಕ್ಷಣೆಗಾಗಿ ಬಳಸುವ ಔಷಧಿಗಳವರೆಗೂ ವಿಸ್ತರಿಸಿರುವ ಕಲಬೆರಕೆಯ ಬಗ್ಗೆ ಯಾವ ಪಕ್ಷವಾದರೂ ದನಿ ಎತ್ತಿರುವುದುಂಟೇ? ಕುಡಿಯುವ ನೀರಿನ ಅತಿಯಾದ ಕಲಬೆರಕೆಯಿಂದ ತಳಸಮಾಜದಲ್ಲಿ ರೋಗರುಜಿನಗಳು ಹೆಚ್ಚಾಗಿರುವ ಬಗ್ಗೆಯೂ ವಿಜ್ಞಾನಿಗಳು ಆಗಿಂದಾಗ್ಗೆ ಎಚ್ಚರಿಸುತ್ತಲೇ ಇದ್ದಾರೆ. ತಿರುಪತಿ ಲಾಡು ವಿವಾದದ ನಡುವೆಯೇ ಬಿಸಿಯೂಟ ಸೇವಿಸಿದ ಮಕ್ಕಳು ಅಸ್ವಸ್ಥರಾಗಿರುವ ಸುದ್ದಿ ಕೇಳಿಬಂದಿದೆ.

ಹಾಗೆಯೇ ಇದಾವುದೂ ಜನಪ್ರತಿನಿಧಿಗಳ ಅಥವಾ ಅಧಿಕಾರ ರಾಜಕಾರಣದ ಪರಿಭಾಷೆಯಲ್ಲಿ 'ಭಾವನೆಗಳಿಗೆ ಧಕ್ಕೆ ಉಂಟುಮಾಡುವುದಿಲ್ಲ'. ಹಾಗಾಗಿ ಈ ಕಲಬೆರಕೆಯೊಡನೆ ಹೊಂದಾಣಿಕೆ ಮಾಡಿಕೊಂಡು ಬದುಕುವುದನ್ನು ಸಾಮಾನ್ಯರೇ ರೂಢಿಸಿಕೊಳ್ಳುವಂತಾಗಿದೆ. ಈ ಭಾವನಾತ್ಮಕ ರಾಜಕಾರಣದ ಮತ್ತೊಂದು ಆಯಾಮವನ್ನು ಇತ್ತೀಚೆಗೆ ಕರ್ನಾಟಕದ ಸಾರ್ವಜನಿಕ ವಲಯವನ್ನು ಆವರಿಸಿರುವ ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ, ಭ್ರಷ್ಟಾಚಾರ, ಭೂ ಅತಿಕ್ರಮಣದಂತಹ ವಿವಾದಗಳಲ್ಲಿ ಗುರುತಿಸಬೇಕಿದೆ.

ಶಾಸಕರೊಬ್ಬರು ಈ ಹಿಂದೆ ಸಚಿವರಾಗಿದ್ದಾಗ ತನ್ನ ಮೇಲೆ ವಿಕಾಸಸೌಧದ ಕಚೇರಿಯ ಒಳಗೇ ಅತ್ಯಾಚಾರ ಎಸಗಿದ್ದರು ಎಂಬ ಮಹಿಳೆಯೊಬ್ಬರ ಆರೋಪ ಏನನ್ನು ತೋರಿಸುತ್ತದೆ? ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಶುದ್ಧತೆಯನ್ನು ಬಿಂಬಿಸಬೇಕಾದ ಆಡಳಿತಕೇಂದ್ರವೊಂದು ಕಲಬೆರಕೆಯಾಗಿದೆ ಎಂದಲ್ಲವೇ? ಈ ನೈತಿಕ ಕಲಬೆರಕೆ ಏಕೆ ನಮ್ಮ ರಾಜಕೀಯ- ನಾಗರಿಕ ಪ್ರಜ್ಞೆಯನ್ನು ನಾಟುವುದಿಲ್ಲ?



ನವ ಉದಾರವಾದ ಮತ್ತು ಭಾವನಾತ್ಮಕ ರಾಜಕಾರಣಕ್ಕೆ ಸಿಲುಕಿ ಇಡೀ ನಾಗರಿಕ ಪ್ರಪಂಚವೇ ಇಂತಹ ಕಲಬೆರಕೆಗಳೊಡನೆ ಹೊಂದಾಣಿಕೆ ಮಾಡಿಕೊಂಡು ಬದುಕುವ ಪರಿಸ್ಥಿತಿಯಲ್ಲಿ ಇದೆ. ಇದನ್ನು ಸರಿಪಡಿಸುವುದು ಕಷ್ಟವಾದರೂ ಜಾಗೃತಿ ಮೂಡಿಸುವ ನೈತಿಕ ಜವಾಬ್ದಾರಿ ಇರುವ ವಿದ್ಯುನ್ಮಾನ ಮಾಧ್ಯಮಗಳು ವೃತ್ತಿಧರ್ಮದ ನೈತಿಕ ಕಲಬೆರಕೆಯ ಪರಾಕಾಷ್ಠೆ ತಲುಪಿರುವುದನ್ನು ದರ್ಶನ್, ಪ್ರಜ್ವಲ್, ಮುಡಾ, ಮುನಿರತ್ನ ಪ್ರಕರಣಗಳಲ್ಲಿ ನೋಡುತ್ತಿದ್ದೇವೆ. ಮಾಧ್ಯಮ ವಲಯದ ವೃತ್ತಿಶುದ್ಧತೆಯನ್ನೇ ಮರೆತಂತಿರುವ ಕೆಲವು ಸುದ್ದಿಮನೆಗಳು ಬಿತ್ತರಿಸುವ ಬ್ರೇಕಿಂಗ್ ನ್ಯೂಸ್‌ಗಳು ಸಹ, ಆಯಾ ಮಾರುಕಟ್ಟೆಯ ಅವಶ್ಯಕತೆಗಳಿಗೆ ಅನುಗುಣವಾಗಿ ಕಲಬೆರಕೆಗೆ ಒಳಗಾಗಿರುವುದು ಸುಡು ವಾಸ್ತವ.

ಸಮಾಜದ ಓರೆಕೋರೆಗಳನ್ನು ತಿದ್ದಬೇಕಾದ ಜವಾಬ್ದಾರಿಯನ್ನೇ ಮರೆತಿರುವ ಅಧಿಕಾರ ರಾಜಕಾರಣ, ಮಾಧ್ಯಮ, ಆಡಳಿತ ವ್ಯವಸ್ಥೆ ಹಾಗೂ ಜನಪ್ರತಿನಿಧಿಗಳು ತಾವು ಪೋಷಿಸುತ್ತಿರುವ ಕಲಬೆರಕೆಯ ಸಮಾಜದತ್ತ ಒಮ್ಮೆಯಾದರೂ ಕಣ್ಣು ಹಾಯಿಸಿರುವುದುಂಟೇ?

ಶುದ್ಧೀಕರಣ ಆಗುವುದೇ ಆದರೆ ಈಗ ತುರ್ತಾಗಿ ಮೇಲಿನಿಂದ ಕೆಳಗಿನವರೆಗೆ ಇಡೀ ಆಡಳಿತ ವ್ಯವಸ್ಥೆಯ ಶುದ್ಧೀಕರಣ ಆಗಬೇಕಿದೆ. ಇದಕ್ಕೆ ಯಾವುದೇ ಧಾರ್ಮಿಕ ವಿಧಿವಿಧಾನಗಳು ಬೇಕಿಲ್ಲ. ಸಾಂವಿಧಾನಿಕ ಪ್ರಜ್ಞೆ ಮತ್ತು ಸಾಮಾಜಿಕ ನೈತಿಕತೆ-ಜವಾಬ್ದಾರಿ ಇದ್ದರೆ ಸಾಕು.

ವಾಚಕರ ವಾಣಿ

ಅಧ್ಯಕ್ಷರ ಆಯ್ಕೆ: ಜಿದ್ದಿಗೆ ಬೀಳದಿರೋಣ

ಕನ್ನಡ ಸಾಹಿತ್ಯ ಸಮ್ಮೇಳನವನ್ನು ದಶಕಗಳ ಬಳಿಕ ಮತ್ತೆ ಆಯೋಜಿಸುವ ಅವಕಾಶ ಮಂಡ್ಯ ನೆಲಕ್ಕೆ ಲಭಿಸಿರುವುದು ಹೆಮ್ಮೆಯ ವಿಚಾರ. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಹಲವು ವೈಶಿಷ್ಟ್ಯಗಳಿಗೆ ಕಾರಣವಾಗಬೇಕಿದೆ. ಆದರೆ ಅಧ್ಯಕ್ಷರಾಗಿ ಸಾಹಿತ್ಯೇತರ ಕ್ಷೇತ್ರದವರು ಆಯ್ಕೆಯಾಗಲಿ ಮತ್ತು ಮಂಡ್ಯದವರೇ ಅಧ್ಯಕ್ಷರಾಗಲಿ ಎಂಬ ಬೇಡಿಕೆ ಆರಂಭದಲ್ಲೇ ಮುನ್ನೆಲೆಗೆ ಬಂದು, ಟೀಕೆಗೂ ಗುರಿಯಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ.

ಕನ್ನಡ ಸಾಹಿತ್ಯ ಪರಿಷತ್ತು ಹಿಂದಿನಿಂದಲೂ ಸಮ್ಮೇಳನದ ಅಧ್ಯಕ್ಷರ ಆಯ್ಕೆಯಲ್ಲಿ ಘನತೆಯನ್ನು ಕಾಪಾಡಿಕೊಂಡು ಬಂದಿದೆ. ಅದನ್ನು ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲೂ ಉಳಿಸಬೇಕು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಅಖಂಡ ಕರ್ನಾಟಕವನ್ನು ಒಳಗೊಂಡಿರುವಂತಹದ್ದು. ಅದು ಕನ್ನಡನಾಡಿನ ಸಾಂಸ್ಕೃತಿಕ ಆತ್ಮಚೈತನ್ಯವನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಅಖಂಡ ಕರ್ನಾಟಕದ ಸಾಹಿತ್ಯ ಲೋಕದವರು ಅಧ್ಯಕ್ಷರಾಗಲಿ ಎಂಬ ಔದಾರ್ಯವನ್ನು ಮರೆಯೋಣ.

ಲೋಕೇಶ ಬೆಕ್ಕಳಲೆ, ಮಂಡ್ಯ

ಕನ್ನಡ ಮಾಧ್ಯಮಕ್ಕೆ ಆದ್ಯತೆಯ ಬೇಡಿಕೆ: ವ್ಯರ್ಥಾಲಾಪ?

ಸರ್ಕಾರಿ ಶಾಲೆಯನ್ನು ಸುಸಜ್ಜಿತಗೊಳಿಸಿ, ಅಲ್ಲಿರುವ ಕನ್ನಡ ಮಾಧ್ಯಮದ ವ್ಯವಸ್ಥೆಯನ್ನು ಸುಭದ್ರಗೊಳಿಸುವುದು ಬಿಟ್ಟು, ಈ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಸರ್ಕಾರ ಆದ್ಯತೆ ನೀಡುವುದು ಸರಿಯಲ್ಲ ಎಂದು ಪು.ಸೂ.ಲಕ್ಷ್ಮೀನಾರಾಯಣ ರಾವ್ ಅಭಿಪ್ರಾಯಪಟ್ಟಿರುವುದು (ವಾ.ವಾ., ಸೆ. 27) ಸರಿಯಾಗಿದೆ. ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾತೃಭಾಷಾ ಮಾಧ್ಯಮದಲ್ಲೇ ಇರಬೇಕು ಎಂಬ ಶಿಕ್ಷಣತಜ್ಞರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂದು ಸಹ ಅವರು ಹೇಳಿದ್ದಾರೆ. ಸಾವಿರಾರು ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಅಳವಡಿಸುವ 'ಮಹದಾಸೆ'ಯ ಸರ್ಕಾರವಿರುವಾಗ ಶಿಕ್ಷಣ ತಜ್ಞರ ಮಾತಿಗೆ ಬೆಲೆ ಎಲ್ಲಿದೆ? ಈ ಮುಂಚೆ ಅಧಿಕಾರದಲ್ಲಿ ಮೆರೆದ ಸರ್ಕಾರಗಳು ಕನ್ನಡಕ್ಕೆ ಸಲ್ಲಿಸಬೇಕಿದ್ದ ಕನಿಷ್ಠ ಸೇವೆಯಾದರೂ ಯಾವುದಿತ್ತು? ರಾಜ್ಯದಲ್ಲಿನ ಶಿಥಿಲಗೊಂಡ ಅದೆಷ್ಟೋ ಸರ್ಕಾರಿ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ಹೈಟೆಕ್ ಅಲ್ಲದಿದ್ದರೂ ಇದ್ದುದರಲ್ಲಿಯೇ ಸದೃಢ ಕಟ್ಟಡಗಳನ್ನಾಗಿ ಮಾಡುವುದಾಗಿತ್ತು, ಶಿಕ್ಷಕರ ಕೊರತೆ ನೀಗಿಸುವುದು, ಕುಡಿಯುವ ನೀರು, ಶೌಚಾಲಯ, ಪೀಠೋಪಕರಣಗಳಂತಹ ತೀರ ಅಗತ್ಯ ಸೌಲಭ್ಯಗಳನ್ನು ಒದಗಿಸುವುದಾಗಿತ್ತು. ಗತಕಾಲವನ್ನು ನೆನೆದು ಈಗ ಪ್ರಯೋಜನ ಇಲ್ಲ. ಆದರೆ ಅದರಿಂದ ಪಾಠವನ್ನಾದರೂ ಕಲಿತೆವೇ? ಶಾಲೆಗಳ ದುಃಸ್ಥಿತಿಯನ್ನು ಕಂಡೇ ಎಷ್ಟೋ ಪೋಷಕರಿಗೆ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸುವ ಅನಿವಾರ್ಯ ಸಂದರ್ಭ ಒದಗಿತು.

ಈಗ ಹೈಟೆಕ್ ಆಗಿ ಮಕ್ಕಳನ್ನು ಸೆಳೆಯುತ್ತಿರುವ ಬೆಂಗಳೂರಿನ ಬ್ಯಾಟರಾಯನಪುರದ 'ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ'ಯ ನಿದರ್ಶನವೇ (ಪ್ರ.ವಾ., ಸೆ. 26) ನಮ್ಮ ಮುಂದಿದೆಯಲ್ಲ! ಈ ಮೊದಲು, ಸುತ್ತಮುತ್ತ ಖಾಸಗಿ ಶಾಲೆಗಳು ಆರಂಭವಾದ ಮೇಲೆ ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಇಳಿಮುಖವಾಗತೊಡಗಿತ್ತು ಎಂದು ವರದಿ ತಿಳಿಸಿದೆ. ಬೆಂಗಳೂರು ನಗರದ ಸರ್ಕಾರಿ ಶಾಲೆಯ ದುಃಸ್ಥಿತಿಯೇ ಇಂಥದ್ದಾಗಿತ್ತು. ಇನ್ನು ಗ್ರಾಮೀಣ ಪ್ರದೇಶದ ಶಾಲೆಗಳ ಸ್ಥಿತಿ?! ಬ್ಯಾಟರಾಯನಪುರ ಶಾಲೆಯ ಪುನರ್‌ನಿರ್ಮಾಣವು ದಾನಿಗಳ ನೆರವಿನಿಂದ ಆಗಿದ್ದು ಎಂಬುದನ್ನು ನಾವು ಗಮನಿಸಬೇಕು. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲೂ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ತೆರೆಯುವ ಮಹದಾಸೆ ಸರ್ಕಾರದ್ದು. ಹೀಗಿರುವಾಗ, ಕನ್ನಡ ಮಾಧ್ಯಮಕ್ಕೆ ಆದ್ಯತೆ ಎನ್ನುವುದು ಮರೀಚಿಕೆ. ಅದು ವ್ಯರ್ಥಾಲಾಪ ಎನಿಸದೇ?

ಸಾಮಗ ದತ್ತಾತ್ರಿ, ಬೆಂಗಳೂರು

ಮಾಹಿತಿ ಒದಗಿಸದಿರುವುದು ಸರಿಯಲ್ಲ

ರಾಜ್ಯಪಾಲರು ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದು ಪೂರ್ವಗ್ರಹಪೀಡಿತವೇ ಅಥವಾ ಕಾನೂನುಬದ್ಧವೇ ಎಂಬುದರ ಬಗ್ಗೆ ನಡೆದಿದ್ದ ಹಲವಾರು ರೀತಿಯ ವ್ಯಾಖ್ಯಾನಗಳು, ನ್ಯಾಯಾಲಯವು ಈ ಅನುಮತಿಯನ್ನು ಎತ್ತಿ ಹಿಡಿದ ನಂತರವಾದರೂ ಕೊನೆಯಾಗಬೇಕಾಗಿತ್ತು. ಅದನ್ನು ಬಿಟ್ಟು ರಾಜ್ಯಪಾಲರ ವಿರುದ್ಧ ಆಡಳಿತ ಪಕ್ಷ ಇನ್ನೂ ಟೀಕಿಸುವುದನ್ನು ಬಿಟ್ಟಿಲ್ಲ ಎಂದರೆ, ಅದು ಪರೋಕ್ಷವಾಗಿ ನ್ಯಾಯಾಲಯದ ತೀರ್ಪನ್ನು ಅಗೌರವಿಸಿದಂತೆಯೇ ಸರಿ. ಈ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅವಕಾಶ ಇದ್ದಾಗ್ಯೂ ಯಾವುದೇ ವಿವರಣೆ, ಮಾಹಿತಿ ಕೇಳಿ ರಾಜ್ಯಪಾಲರಿಂದ ಬರುವ ಪತ್ರಕ್ಕೆ ನೇರವಾಗಿ ಉತ್ತರ ನೀಡದಿರಲು ಅಧಿಕಾರಿಗಳಿಗೆ ತಾಕೀತು ಮಾಡಿರುವುದು ಸರಿಯಾದ ಕ್ರಮವಲ್ಲ. ಮಾಹಿತಿ ಹಕ್ಕು ಕಾಯ್ದೆಯಡಿ ಸರ್ಕಾರದಿಂದ ಮಾಹಿತಿ ಪಡೆಯುವ ಹಕ್ಕು ಪ್ರತಿ ನಾಗರಿಕನಿಗೂ ಇರುವಾಗ, ರಾಜ್ಯದ ಮೊದಲ ಪ್ರಜೆಯಾದ ರಾಜ್ಯಪಾಲರಿಗೆ ಮಾಹಿತಿ ನೀಡಲು ನಿರಾಕರಿಸುವುದು ಕಾನೂನುಬಾಹಿರ ಆಗಬಹುದೇನೊ.

ರಾಜ್ಯಪಾಲರು ತಮಗೆ ಬಂದ ದೂರಿನ ಅನ್ವಯ ಮುಂದಿನ ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇರುವುದರಿಂದ ಅವರು ಸರ್ಕಾರದಿಂದ ಮಾಹಿತಿಯನ್ನು ಕೇಳುವುದು ಸರಿಯಾದ ಕ್ರಮವಾಗಿರುತ್ತದೆ. ಅಲ್ಲದೆ ರಾಜಭವನ ಮತ್ತು ಸರ್ಕಾರ ಎರಡೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಎರಡು ಅಂಗಗಳು. ಹಾಗಾಗಿ, ಇವೆರಡೂ ಅಂಗಗಳ ನಡುವಿನ ತಿಕ್ಕಾಟ, ಕಾನೂನು ಹೋರಾಟಕ್ಕೆ ತಗಲುವ ವೆಚ್ಚವು ಸಾಮಾನ್ಯ ನಾಗರಿಕನ ತೆರಿಗೆಯ ಹಣದ ಅಪವ್ಯಯ.

ಕೆ.ಎಂ.ನಾಗರಾಜು, ಮೈಸೂರು


ಕನ್ನಡ ಬದ್ಧತೆ: ವೇದಿಕೆಗೆ ಸೀಮಿತವೇ?

ದಾಬಸ್‌ಪೇಟೆ– ದೊಡ್ಡಬಳ್ಳಾಪುರ ನಡುವೆ ನಿರ್ಮಾಣವಾಗಲಿರುವ ಜ್ಞಾನ, ಆರೋಗ್ಯ ಮತ್ತು ಸಂಶೋಧನಾ ನಗರವಾದ 'ಕ್ವಿನ್ ಸಿಟಿ'ಗೆ (Knowledge, Wellbeing and Innovation- KWIN city) ಮುಖ್ಯಮಂತ್ರಿ ಚಾಲನೆ ನೀಡಿದ್ದಾರೆ. ಇದೊಂದು ಮಹತ್ವಾಕಾಂಕ್ಷಿ ಯೋಜನೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ, ಮಾತೆತ್ತಿದರೆ ಆಡಳಿತದಲ್ಲಿ ಕನ್ನಡ ಅನುಷ್ಠಾನದ ಬಗೆಗೆ ಮಾತನಾಡುವ ಸರ್ಕಾರಕ್ಕೆ ಇಂತಹ ಯೋಜನೆಗೆ ಕನ್ನಡದ ಹೆಸರು ದೊರಕದಿರುವುದು ಮಾತ್ರ ತೀರಾ ಆಶ್ಚರ್ಯಕರ. ಇಂಗ್ಲಿಷ್ ಹೆಸರಿಗೆ ಶರಣಾಗುವ ಬದಲು ಕಸ್ತೂರಿ ಕನ್ನಡದಲ್ಲಿ ಸರಳವಾಗಿ 'ಜ್ಞಾನನಗರಿ' ಎಂದು ಕರೆಯಬಹುದಿತ್ತಲ್ಲವೇ? ನಮ್ಮ ಜನಪ್ರತಿನಿಧಿಗಳಿಗೆ 'ಕನ್ನಡ ಬದ್ಧತೆ' ಬರೀ ವೇದಿಕೆಗೆ ಮತ್ತು ಹೇಳಿಕೆಗಳಿಗೆ ಸೀಮಿತವಾಗಿದೆ ಎನ್ನುವುದು ಇನ್ನೊಮ್ಮೆ ದೃಢಪಟ್ಟಿದೆ.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸುದ್ದಿ, ಶಿಕ್ಷೆ, ದಮನ ಮತ್ತು ಬೆಳ್ಳಿ ಬೆಳಕು



• ಹಮೀದ್ ಕೆ.

ಇಡೀ ಜಗತ್ತಿನ ಎಲ್ಲರನ್ನು ಮತ್ತು ಎಲ್ಲವನ್ನೂ ಒಳಗೊಳ್ಳಬಹುದಾದುದು ಏನಾದರೂ ಇದ್ದರೆ ಅದು ಸುದ್ದಿ ಮಾತ್ರ. ನಾವು ಸುದ್ದಿಯನ್ನು ಹೇಳುತ್ತೇವೆ, ಕೇಳುತ್ತೇವೆ, ಬರೆಯುತ್ತೇವೆ, ಓದುತ್ತೇವೆ, ನೋಡುತ್ತೇವೆ ಮತ್ತು ನಾವೇ ಸುದ್ದಿಯೂ ಆಗುತ್ತೇವೆ. ಬಾಯಿಂದ ಬಾಯಿಗೆ ಹರಡುವ ಸುದ್ದಿಯು ಜನಪದವಾಗುತ್ತದೆ. ಬಳಿಕ ಸುದ್ದಿಯು ಮಾಧ್ಯಮವಾಗುತ್ತದೆ, ಉದ್ಯಮವಾಗುತ್ತದೆ. ಕೆಲವೊಮ್ಮೆ ಮಾಫಿಯಾ ಕೂಡ ಆಗುತ್ತದೆ. ಸುದ್ದಿಯು ಅತ್ಯಂತ ಪರಿಣಾಮಕಾರಿಯಾದ ಪ್ರಬಲವಾದ ಮತ್ತು ಪ್ರಭಾವಿಯಾಗಿರುವ ಅಸ್ತ್ರ. ಹಾಗಾಗಿಯೇ, ಅಧಿಕಾರದಲ್ಲಿರುವ ರಾಜಕಾರಣಿಗಳು, ಈ ರಾಜಕಾರಣಿಗಳ ಆದೇಶಗಳನ್ನು ಜಾರಿಗೊಳಿಸುವ ಅಧಿಕಾರಿಗಳು, ಅಧಿಕಾರವಿಲ್ಲದ ರಾಜಕಾರಣಿಗಳು, ಉದ್ಯಮಿಗಳು, ಮಾಫಿಯಾಗಳು– ಹೀಗೆ ಎಲ್ಲರೂ ಸುದ್ದಿ ಅಥವಾ ಮಾಧ್ಯಮವನ್ನು ಓಲೈಸಲು, ಆಮಿಷ ಒಡ್ಡಲು, ತಮಗೆ ಬೇಕಾದಂತೆ ಬಾಗಿಸಲು, ಬಾಗದಿದ್ದರೆ ಬೆದರಿಸಲು ನಿರಂತರವಾಗಿ ಪ್ರಯತ್ನಿಸುತ್ತಾರೆ.

ಅದರ ಪರಿಣಾಮವಾಗಿಯೇ ನಿರಂಕುಶ ಆಡಳಿತ ಇರುವ ದೇಶಗಳಲ್ಲಿ, ತೋಳ್ಬಲವೇ ಪ್ರಧಾನವಾಗಿರುವಲ್ಲಿ ಸುದ್ದಿಯು ಎಂದೂ ಸುದ್ದಿಯಾಗುವುದಿಲ್ಲ. ಸುದ್ದಿಯು ಉಸಿರು ಬಿಗಿಹಿಡಿದೇ ಇರಬೇಕಾಗುತ್ತದೆ. ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಎಂಬ ಸಂಸ್ಥೆಯು ವಿವಿಧ ದೇಶಗಳಲ್ಲಿ ಮಾಧ್ಯಮ ಸ್ವಾತಂತ್ರ್ಯ ಯಾವ ಮಟ್ಟದಲ್ಲಿದೆ ಎಂಬುದರ ಮೌಲ್ಯಮಾಪನವನ್ನು ಪ್ರತಿ ವರ್ಷವೂ ಮಾಡುತ್ತದೆ. ಸೂಚ್ಯಂಕವನ್ನು ಪ್ರಕಟಿಸುತ್ತದೆ. 2024ರಲ್ಲಿ 180 ದೇಶಗಳ ಮೌಲ್ಯಮಾಪನ ಮಾಡಲಾಗಿದೆ. ಸೂಚ್ಯಂಕದಲ್ಲಿ ಕೊನೆಯ 10 ಸ್ಥಾನಗಳಲ್ಲಿರುವ ದೇಶಗಳನ್ನು ಗಮನಿಸಿದರೆ ಯಾವ ರೀತಿಯ ದೇಶಗಳಲ್ಲಿ ಸುದ್ದಿಯನ್ನು ಉಸಿರುಗಟ್ಟಿಸಿ ಇರಿಸಲಾಗಿದೆ ಎಂಬುದು ಅರ್ಥವಾಗುತ್ತದೆ. ಆ ದೇಶಗಳು ಹೀಗಿವೆ: ಈಜಿಪ್ಟ್, ಮ್ಯಾನ್ಮಾರ್, ಚೀನಾ, ಬಹರೈನ್, ವಿಯೆಟ್ನಾಂ, ತುರ್ಕಮೆನಿಸ್ತಾನ, ಇರಾನ್, ಉತ್ತರ ಕೊರಿಯಾ, ಅಫ್ಘಾನಿಸ್ತಾನ, ಸಿರಿಯಾ, ಎರಿಟ್ರಿಯಾ.

ಆಕ್ರಮಿತ ವೆಸ್ಟ್‌ಬ್ಯಾಂಕ್‌ನ ರಮಲ್ಲಾಹ್‌ನಲ್ಲಿರುವ ಅಲ್ ಜಜೀರಾ ಮಾಧ್ಯಮ ಕಚೇರಿಯ ಮೇಲೆ ಇಸ್ರೇಲ್‌ನ ಶಸ್ತ್ರಸಜ್ಜಿತ, ಮುಖವಾಡ ಧರಿಸಿದ ಸೈನಿಕರು ಸೆಪ್ಟೆಂಬರ್ 22ರಂದು ದಾಳಿ ನಡೆಸಿ, ತಕ್ಷಣದಿಂದಲೇ ಕಾರ್ಯಾಚರಣೆ ನಿಲ್ಲಿಸುವಂತೆ ಕಟ್ಟಪ್ಪಣೆ ಮಾಡಿದ್ದಾರೆ. ಅಲ್ಲಿನ ಸಿಬ್ಬಂದಿ ತಮ್ಮ ಸ್ವಂತದ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಕಚೇರಿಯಿಂದ ಹೊರಡಬೇಕು ಎಂದು ಬಲವಂತ ಮಾಡಿದ್ದಾರೆ. ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯ ಸೂಚ್ಯಂಕದಲ್ಲಿ ಇಸ್ರೇಲ್‌ಗೆ 100ನೇ ಸ್ಥಾನವಿದೆ ಎಂಬುದು ಇಲ್ಲಿ ಗಮನಾರ್ಹ.

ಪತ್ರಿಕೋದ್ಯಮವು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಹೇಳಿ ಹೇಳಿ ಅದು ಹಳಸಲಾಗಿದೆ. ಬಹುಶಃ ಹಾಗೆ ಹಳಸಲಾಗಿರುವ ಕಾರಣಕ್ಕೇ ಇರಬೇಕು ನಾಲ್ಕನೇ ಅಂಗ ಎಂಬ ಹಿರಿಮೆ ಮತ್ತು ಘನತೆಯನ್ನು ಅಧಿಕಾರಸ್ಥರು ಪತ್ರಿಕೋದ್ಯಮಕ್ಕೆ ತೋರುತ್ತಿಲ್ಲ. ವಾಸ್ತವದಲ್ಲಿ ಸಂವಿಧಾನವು ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಮಾತ್ರ ಮಾಧ್ಯಮಕ್ಕೆ ಇರುವ ಬಲ. ಭಾರತದಲ್ಲಿ ತಳಮಟ್ಟದಿಂದ ಹಿಡಿದು ರಾಷ್ಟ್ರ ಮಟ್ಟದವರೆಗೆ ಮಾಧ್ಯಮ ಮತ್ತು ಮಾಧ್ಯಮ ಪ್ರವರ್ತಕರನ್ನು ದಮನಿಸುವ ಕೆಲಸ ಆಗಾಗ ನಡೆಯುತ್ತಲೇ ಇರುತ್ತದೆ.

ಕೋಮುವಾದ ಮತ್ತು ಮೂಲಭೂತವಾದದ ವಿರುದ್ಧ ಜಾಗೃತಿ ಮೂಡಿಸಲು ಪತ್ರಿಕೆ ಮತ್ತು ಭಾಷಣಗಳ ಮೂಲಕ ಪ್ರಯತ್ನಿಸಿದ್ದ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಅಸಹಿಷ್ಣುತೆಯ ಹತ್ಯೆಗೆ ಒಂದು ಉದಾಹರಣೆ. 2017ರಲ್ಲಿ ನಡೆದ ಈ ಹತ್ಯೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಯಿತು. ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಮಹಿಳೆಯ ಮೇಲೆ ಅತ್ಯಾಚಾರ ಎಸಗಿ ಹತ್ಯೆಗೈದ ಪ್ರಕರಣದ ವರದಿ ಮಾಡಲು ಹೋಗಿದ್ದ ಕೇರಳದ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರನ್ನು ಉಗ್ರರೊಂದಿಗೆ ನಂಟು ಇದೆ ಎಂಬ ಆರೋಪದಲ್ಲಿ ಬಂಧಿಸಲಾಯಿತು. ಅವರು ಜೈಲಿನಿಂದ ಹೊರಗೆ ಬರಲು 864 ದಿನಗಳು ಬೇಕಾದವು. ಸರ್ಕಾರವು ದಮನಕಾರಿ ನೀತಿ ಅನುಸರಿಸುತ್ತಿದೆ ಎಂಬುದು ವೇದ್ಯವಾದರೂ ನ್ಯಾಯಾಲಯಗಳು ಕೂಡ ‘ಸಂತ್ರಸ್ತರ’ ನೆರವಿಗೆ ಧಾವಿಸುವ ಕ್ರಿಯಾಶೀಲತೆಯನ್ನು ತೋರಲು ಸಾಧ್ಯವಾಗುತ್ತಿಲ್ಲ.

ನ್ಯೂಸ್‌ಕ್ಲಿಕ್ ಸುದ್ದಿ ಪೋರ್ಟಲ್‌ನ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಬಂಧಿಸಲಾಗಿತ್ತು. ಅವರ ಬಂಧನವೇ ಕಾನೂನುಬಾಹಿರ ಎಂದು ಇದೇ ಮೇ 15ರಂದು ಸುಪ್ರೀಂ ಕೋರ್ಟ್ ಹೇಳುತ್ತದೆ. 2023ರ ಅಕ್ಟೋಬರ್‌ನಲ್ಲಿ ಅವರನ್ನು ಬಂಧಿಸಲಾಗಿತ್ತು. ಫ್ಯಾಕ್ಟ್ ಚೆಕ್ ವೆಬ್‌ಸೈಟ್ ಆಲ್ಟ್‌ನ್ಯೂಸ್‌ನ ಸಹ ಸಂಸ್ಥಾಪಕ ಮೊಹಮ್ಮದ್ ಜುಬೇರ್ ಅವರನ್ನು ದೆಹಲಿ ಪೊಲೀಸರು 2022ರ ಜೂನ್ 27ರಂದು ಬಂಧಿಸಿದ್ದು 2018ರಲ್ಲಿ ಅವರು ಹನುಮಾನ್ ದೇವರಿಗೆ ಅವಮಾನ ಮಾಡಿದ್ದಾರೆ ಎಂಬ ಕಾರಣಕ್ಕೆ. ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದರನ್ನು ಅವಮಾನಿಸಿದ್ದನ್ನು ಜುಬೇರ್ ಟ್ವೀಟ್ ಮೂಲಕ ಬಹಿರಂಗಪಡಿಸಿದ್ದರಿಂದ ಕೋಮು ಸೌಹಾರ್ದಕ್ಕೆ ಧಕ್ಕೆ ತಂದಿದೆ ಎಂಬ ಕಾರಣವೂ ಇತ್ತು. ನೂಪುರ್ ಶರ್ಮಾ ಹೇಳಿಕೆಯಿಂದ ಬಿಜೆಪಿ ಅಂತರ ಕಾಯ್ದುಕೊಂಡರೂ ಜುಬೇರ್ ವಿರುದ್ಧ ನಿರ್ದಾಕ್ಷಿಣ್ಯ ಕ್ರಮದ ವಿಚಾರದಲ್ಲಿ ಯಾವ ವಿನಾಯಿತಿಯೂ ಇರಲಿಲ್ಲ. ಅಂದ ಹಾಗೆ, ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್‌ನ 2024ರ ಸೂಚ್ಯಂಕದಲ್ಲಿ ನಮ್ಮ ದೇಶದ ಸ್ಥಾನ 159ನೆಯದಾಗಿದೆ.

ತನಿಖಾ ಪ್ರಕ್ರಿಯೆಯೇ ಶಿಕ್ಷೆಯಾಗಬಾರದು ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದೆ. ಇನ್ನು ಮುಂದೆಯೂ ಹೇಳಬಹುದು. ಆದರೆ, ಭಾರತದಲ್ಲಿ ತನಿಖಾ ಪ್ರಕ್ರಿಯೆಯನ್ನೇ ಶಿಕ್ಷೆಯಾಗಿ ಪರಿವರ್ತಿಸುವ ದಂಡನೆಯ ಹೊಸ ದಾರಿಯೊಂದನ್ನು ಸರ್ಕಾರವು ಕಂಡುಕೊಂಡಿದೆ. ಕ್ಷುಲ್ಲಕ ಆರೋಪಗಳಿಂದ ನೀವು ದೋಷಮುಕ್ತರಾಗಿ ಹೊರಗೆ ಬರಬಹುದು. ಆದರೆ, ಅದಕ್ಕೂ ಮುಂಚೆ ವರ್ಷಗಟ್ಟಲೆ ಜೈಲಿನಲ್ಲಿ ಕೊಳೆಯಬೇಕಾಗುತ್ತದೆ. ಕುಟುಂಬ, ವೃತ್ತಿ, ಆರೋಗ್ಯ ಎಲ್ಲವೂ ಏರುಪೇರಾಗುತ್ತದೆ. ಈ ರೀತಿಯದ್ದೊಂದು ಭೀತಿ ಹುಟ್ಟಿಸಿಬಿಟ್ಟರೆ ಟೀಕಾಕಾರರು ಎಂದಿಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಮಾತೇ ಆಡರು ಎಂಬ ಅಚಲ ವಿಶ್ವಾಸ ಪ್ರಭುತ್ವಕ್ಕೆ ಇದೆ. ಪತ್ರಿಕೆಗಳಿಗೆ, ಸುದ್ದಿ ವಾಹಿನಿಗಳಿಗೆ ಸರ್ಕಾರಿ ಜಾಹೀರಾತು ತಡೆಯಂತಹ ಆರ್ಥಿಕ ದಮನಕಾರಿ ನೀತಿ ಹೊಸದೇನೂ ಅಲ್ಲ.

ಇದು ಸುದ್ದಿ ಅಥವಾ ಮಾಧ್ಯಮದ ಒಂದು ಆಯಾಮವಾದರೆ, ಇನ್ನೊಂದು ಚೇತೋಹಾರಿ ಆಯಾಮವೂ ಇದೆ. ಇದು ಹೆಚ್ಚು ಆಶಾವಾದದಿಂದ ಕೂಡಿದ್ದಾಗಿದೆ. ಎಲ್ಲ ಉಸಿರುಗಟ್ಟಿಸುವಿಕೆ ಮಧ್ಯೆಯೂ ಸರ್ಕಾರಕ್ಕೆ ಎಚ್ಚರಿಕೆಯಾಗಿ, ಸಮುದಾಯಗಳಿಗೆ ಜಾಗೃತಿಯ ಸಾಧನವಾಗಿ ಮಾಧ್ಯಮವು ಕೆಲಸ ಮಾಡಬಹುದಾಗಿದೆ ಮತ್ತು ಮಾಡುತ್ತಿದೆ. ಇತ್ತೀಚೆಗೆ, ‘ಪ್ರಜಾವಾಣಿ’ ಪತ್ರಿಕೆಯಿಂದಾಗಿ ಉಂಟಾದ ಬದಲಾವಣೆಯ ಎರಡು ಉದಾಹರಣೆಗಳು ಇಲ್ಲಿವೆ; ಕರ್ನಾಟಕ ಸರ್ಕಾರವು 2022ರಲ್ಲಿ ಹೈಸ್ಕೂಲ್ ವರೆಗಿನ ಹಲವು ಪಠ್ಯಪುಸ್ತಕಗಳನ್ನು ತನ್ನಿಚ್ಛೆಗೆ ಅನುಸಾರವಾಗಿ ಬದಲಾಯಿಸುತ್ತದೆ. ಈ ಕುರಿತು ನಿರಂತರವಾದ ವರದಿಗಳನ್ನು ಬರೆದ ಪರಿಣಾಮವಾಗಿ ಈ ಬದಲಾವಣೆಯಿಂದ ಸರ್ಕಾರವು ಹಿಂದೆ ಸರಿಯುತ್ತದೆ. ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಇದ್ದ ದೋಷಗಳ ಕುರಿತು ಮಾಡಿದ ವರದಿ ಮತ್ತೊಂದು ಉದಾಹರಣೆ. ಸರ್ಕಾರವು ಪರೀಕ್ಷೆಯನ್ನು ರದ್ದು ಮಾಡಿ ಮರುಪರೀಕ್ಷೆಯ ದಿನಾಂಕ ಪ್ರಕಟಿಸಿದೆ. ಇಂತಹ ಫಲಶ್ರುತಿ ಹತ್ತಾರು. ಹಾಗಾಗಿಯೇ, ಎಲ್ಲ ದಮನಕಾರಿ ನೀತಿಗಳ ನಡುವೆಯೂ ಭರವಸೆಯ ಬೆಳ್ಳಿ ಬೆಳಕು ನಮ್ಮ ನಡುವೆ ಇದ್ದೇ ಇದೆ. ❖

ವಿಶ್ವ ಸುದ್ದಿ ದಿನ

ಪತ್ರಿಕೋದ್ಯಮದ ಮೊದಲ ಜವಾಬ್ದಾರಿಯೇ ಸತ್ಯವನ್ನು ಹೇಳುವುದು. ಸತ್ಯದ ಮಹತ್ವ ಮತ್ತು ಅದನ್ನು ಜನರಿಗೆ ಹೆಕ್ಕಿಕೊಡುವ ಪತ್ರಕರ್ತರ ಪಾತ್ರದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಾಗತಿಕ ಮಟ್ಟದಲ್ಲಿ ಸೆ. 28ರಂದು ‘ವಿಶ್ವ ಸುದ್ದಿ ದಿನ’ ಆಚರಿಸಲಾಗುತ್ತಿದೆ. ‘ವಿಶ್ವ ಸುದ್ದಿ ದಿನ’ದ ಪ್ರಯುಕ್ತ ಅದರ ಅಗತ್ಯ, ಹಲವು ಆಯಾಮ ಮತ್ತು ಅದು ಸಮಾಜಕ್ಕೆ ಹರಡುವ ಅನಿವಾರ್ಯ ಬೆಳಕಿನ ಬಗ್ಗೆ ಮಾಧ್ಯಮ ರಂಗದ ಪರಿಣತರ ಬರಹಗಳು ಇಲ್ಲಿವೆ. ‘ಪ್ರಜಾವಾಣಿ’ಯು ಈ ಅಭಿಯಾನದ ಭಾಗವಾಗಿದೆ

ಸುಳ್ಳಿನ ಸಾಗರ, ಸತ್ಯದ ಹಾಯಿದೋಣಿ

• ಕ್ಯಾಥಿ ಇಂಗ್ಲಿಷ್



‘ಸತ್ಯದ ಅನ್ವೇಷಣೆ ಮತ್ತು ಸತ್ಯಸಂಗತಿಗಳ ವರದಿಗಾರಿಕೆ...’ – ಬಹಳ ಹಿಂದಿನ ಕಾಲದಿಂದಲೂ ಇದು ಪತ್ರಿಕಾ ಉದ್ಯಮದ ಏಕಮಾತ್ರ ಧ್ಯೇಯ.

‘ಸತ್ಯವೇ ಅವರ (ಪತ್ರಕರ್ತರ) ಆರಾಧ್ಯ ದೈವವಾಗಿರಬೇಕು ಮತ್ತು ಯಾವಾಗಲೂ ಸತ್ಯವೇ ಅವರ ಮೊದಲ ಮತ್ತು ಕೊನೆಯ ಧ್ಯಾನವಾಗಿರಬೇಕು’ ಎಂದು 1853ರಲ್ಲಿ ಸೈಂಟಿಫಿಕ್ ಅಮೆರಿಕನ್ ಮ್ಯಾಗಜೀನ್‌ನಲ್ಲಿ ಪ್ರಕಟವಾದ ‘ಪತ್ರಿಕೋದ್ಯಮದಲ್ಲಿ ಸತ್ಯ’ ಎಂಬ ಲೇಖನದಲ್ಲಿ ಹೇಳಲಾಗಿತ್ತು.

‘ಸತ್ಯವನ್ನು ಪತ್ತೆಹಚ್ಚಿ ಮತ್ತು ಅದನ್ನು ವರದಿ ಮಾಡಿ’ ಎಂಬುದು ವೃತ್ತಿಪರ ಪತ್ರಕರ್ತರ ಸೊಸೈಟಿಯು 1926ರಲ್ಲಿ ಸಿದ್ಧಪಡಿಸಿದ್ದ ಕರಡು ‘ನೀತಿ ಸಂಹಿತೆ’ಯಲ್ಲಿ ಪಟ್ಟಿ ಮಾಡಿದ್ದ ಮೊದಲ ಅಂಶ.

ಪ್ರಜಾಪ್ರಭುತ್ವ ಮತ್ತು ನಾಗರಿಕರಿಗೆ ಮೌಲ್ಯಯುತ ಸುದ್ದಿಗಳನ್ನು ನೀಡುವುದರಲ್ಲಿ ಪತ್ರಕರ್ತರು ನಿರ್ವಹಿಸುವ ಪಾತ್ರಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಆರಂಭಿಸಿರುವ ಜಾಗತಿಕ ಕಾರ್ಯಕ್ರಮ ‘ವಿಶ್ವ ಸುದ್ದಿ ದಿನ’ದ ಅಂಗವಾಗಿ ಈ ವರ್ಷ ‘ಸತ್ಯವನ್ನೇ ಆಯ್ಕೆ ಮಾಡಿ’ ಎಂದು ನಾವೆಲ್ಲರೂ ಜಗತ್ತಿಗೆ ಕರೆ ನೀಡುತ್ತಿದ್ದೇವೆ.

ಪ್ರತಿವರ್ಷ ಸೆಪ್ಟೆಂಬರ್ 28ರಂದು ಆಚರಿಸಲಾಗುವ ಈ ದಿನವನ್ನು 2018ರಲ್ಲಿ ಕೆನಡಿಯನ್ ಜರ್ನಲಿಸಮ್ ಫೌಂಡೇಷನ್ (ಸಿಜೆಎಫ್) ಆರಂಭಿಸಿತ್ತು. ಸುದ್ದಿ ಉದ್ಯಮ ಮತ್ತು ಅದರ ಓದುಗರು, ವೀಕ್ಷಕರ ನಡುವಿನ ಬಾಂಧವ್ಯವನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶ ‘ವಿಶ್ವ ಸುದ್ದಿ ದಿನ’ ಆಚರಣೆಯ ಹಿಂದಿದೆ.

ಒಟ್ಟಾರೆಯಾಗಿ, ತಪ್ಪು, ಸುಳ್ಳು ಮಾಹಿತಿಗಳಿಂದ ಮಲಿನವಾಗಿರುವ ಈ ಜಗತ್ತಿನಲ್ಲಿ ಗುಣಮಟ್ಟದ ಪತ್ರಿಕೋದ್ಯಮ ಏಕೆ ಮುಖ್ಯ ಎಂಬುದರ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಈ ದಿನದ ಮುಖ್ಯ ಗುರಿ.

ಈ ವರ್ಷದ ‘ವಿಶ್ವ ಸುದ್ದಿ ದಿನ’ದ ಧ್ಯೇಯವಾಕ್ಯ ‘ಸತ್ಯವನ್ನೇ ಆಯ್ಕೆ ಮಾಡಿ’. ಈಗಿನ ದಿನಮಾನದಲ್ಲಿ ಈ ಸಂದೇಶವು ಇದಕ್ಕಿಂತ ಹೆಚ್ಚು ಸಮಯೋಚಿತ ಹಾಗೂ ನಿರ್ಣಾಯಕವಾಗಿ ಇರಲು ಸಾಧ್ಯವೇ ಇಲ್ಲ.

ಪ್ರವಾಹ ರೂಪದ ಸುಳ್ಳು ಮಾಹಿತಿ ಮತ್ತು ಸತ್ಯ ಸಂಗತಿಗಳ ನಡುವಿನ ಘರ್ಷಣೆ ಹೆಚ್ಚುತ್ತಿರುವ ಈ ಜಗತ್ತಿನಲ್ಲಿ, ಸತ್ಯವನ್ನು ಆಯ್ಕೆ ಮಾಡುವುದು ಬಹುಶಃ ಈವರೆಗೂ ಈಗಿನಷ್ಟು ಮುಖ್ಯ ಅಥವಾ ಇಷ್ಟು ಕಷ್ಟಕರ ಆಗಿರಲಿಲ್ಲ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಸೃಷ್ಟಿಸುತ್ತಿರುವ ಡಿಜಿಟಲ್ ಮಾಹಿತಿಯ ಈ ಯುಗದಲ್ಲಿ ಸುಳ್ಳುಗಳೇ ಸತ್ಯವಾಗುತ್ತಿವೆ. ದ್ವೇಷ ಕಾರುವ, ದುರುದ್ದೇಶಪೂರಿತ ತಪ್ಪು ಮಾಹಿತಿಯನ್ನು ಹರಡುವವರೂ ಇಲ್ಲಿದ್ದಾರೆ. ಹೀಗಿರುವಾಗ, ನಿಜವಾದ ಸುದ್ದಿಗಳು ಮತ್ತು ವದಂತಿಗಳ ನಡುವೆ ವ್ಯತ್ಯಾಸ ಗುರುತಿಸುವುದು ಜನರ ಮುಂದಿರುವ ಬಹುದೊಡ್ಡ ಸವಾಲು. ಇಂತಹ ಸನ್ನಿವೇಶದಲ್ಲಿ ವಾಸ್ತವ ಸಂಗತಿಗಳನ್ನು ಕೂಲಂಕಷವಾಗಿ ದೃಢೀಕರಿಸಿ ಸತ್ಯವಾದ ಮಾಹಿತಿಯನ್ನು ಜನರ ಮುಂದಿಡುವ ಪತ್ರಕರ್ತರ ಜವಾಬ್ದಾರಿ ಈಗ ಎರಡು ಪಟ್ಟು ಹೆಚ್ಚಿದೆ.

‘ಸತ್ಯವನ್ನೇ ಆಯ್ಕೆ’ ಮಾಡಬೇಕಾದರೆ ಜನರು ಮತ್ತು ಪತ್ರಕರ್ತರ ನಡುವಿನ ಬಾಂಧವ್ಯ ನಂಬಿಕೆಯ ಮೇಲೆ ನಿಂತಿರಬೇಕು. ಆದರೆ, ‘ಜಗತ್ತಿನಾದ್ಯಂತ ಬಹುತೇಕ ಜನರು ಹೆಚ್ಚಿನ ಸಂದರ್ಭಗಳಲ್ಲಿ ಸುದ್ದಿಗಳನ್ನು ನಂಬುವುದಿಲ್ಲ’ ಎಂದು ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ರಾಯಿಟರ್ಸ್ ಇನ್‌ಸ್ಟಿಟ್ಯೂಟ್, ಈ ವರ್ಷ ನಡೆಸಿರುವ ಅಧ್ಯಯನ ವರದಿ ಹೇಳಿದೆ.

• ಸತ್ಯದ ಅನ್ವೇಷಣೆ ಮತ್ತು ಅದನ್ನು ವರದಿ ಮಾಡುವುದಕ್ಕೆ ಸಂಬಂಧಿಸಿದಂತೆ ಮಾಧ್ಯಮದ ಹೊಣೆಗಾರಿಕೆ ಏನು?

ಜನರ ನಂಬಿಕೆಗೆ ಅರ್ಹರಾಗಲು ಪತ್ರಕರ್ತರಾದವರು ನಿಷ್ಠೆ ಮತ್ತು ಬದ್ಧತೆ ಹೊಂದಿರಬೇಕು. ವಾಸ್ತವ ಸಂಗತಿಗಳನ್ನು ಪರಿಶೀಲನೆಗೆ ಒಳಪಡಿಸುವಾಗ ಕರಾರುವಾಕ್ಕಾಗಿ ಮತ್ತು ನ್ಯಾಯಸಮ್ಮತವಾಗಿರಬೇಕು. ಸತ್ಯವನ್ನು ಖಚಿತಪಡಿಸಿಕೊಳ್ಳುವ ಸಂದರ್ಭದಲ್ಲಿ ಪಾರದರ್ಶಕವಾಗಿ ನಡೆದುಕೊಳ್ಳಬೇಕು. ಓದುಗರು, ವೀಕ್ಷಕರಿಗೆ ಮಾಹಿತಿ ನೀಡುವಾಗ, ನಮ್ಮ ಮೂಲಗಳ ಬಗ್ಗೆ ಸ್ಪಷ್ಟತೆ ಇರಬೇಕು. ನಮಗೆ ಏನು ತಿಳಿದಿದೆ ಮತ್ತು ಅದು ಹೇಗೆ ತಿಳಿಯಿತು ಎಂಬುದನ್ನೂ ವಿವರಿಸಬೇಕು.

ಯಾವುದೇ ವಿಚಾರಕ್ಕೆ ಸಂಬಂಧಿಸಿದ ಸತ್ಯ ಸಂಗತಿಗಳೆಲ್ಲವೂ ಒಂದೇ ದಿನಕ್ಕೆ ಸಿಗಬಹುದು ಎಂದು ಹೇಳಲು ಸಾಧ್ಯವಿಲ್ಲ. ನಮಗೆ ಸಿಕ್ಕ ಅಧಿಕೃತ ಮಾಹಿತಿಗಳ ಆಧಾರದಲ್ಲಿ ನಡೆದಿರುವ ವಿಚಾರವನ್ನು ನಾವು ಜನರ ಮುಂದಿಡುತ್ತೇವೆ. ಇದುವೇ ಅಂತಿಮವಲ್ಲ. ವರದಿ ಬರೆದು ಸುಮ್ಮನಿರದೆ, ನೈಜ ಸಂಗತಿಗಳನ್ನು ಕಲೆ ಹಾಕುತ್ತಲೇ ಇರಬೇಕು. ಅದನ್ನು ಜನರಿಗೆ ತಿಳಿಸುತ್ತಲೇ ಇರಬೇಕು. ನಾವು ಈ ಹಿಂದೆ ನೀಡಿದ್ದ ಮಾಹಿತಿಯಲ್ಲಿ ತಪ್ಪಾಗಿದ್ದರೆ, ಅದನ್ನು ತಿದ್ದಿಕೊಳ್ಳಬೇಕು.

ಸತ್ಯವು ಕಾಲಾತೀತ ಮತ್ತು ಅತ್ಯಂತ ಸಂಕೀರ್ಣ. ಅದು ಯಾವಾಗಲೂ ತನ್ನನ್ನು ತಾನು ಸತ್ಯ ಎಂದು ಬಿಂಬಿಸಿಕೊಳ್ಳುವುದಿಲ್ಲ. ಪತ್ರಿಕೋದ್ಯಮವು ದೋಷಾತೀತವೂ ಅಲ್ಲ.


ಧ್ರುವೀಕರಣಗೊಂಡಿರುವ ಈ ಜಗತ್ತಿನಲ್ಲಿ ಹಲವರು ಸತ್ಯವನ್ನು ಒಪ್ಪಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ, ‘ಸತ್ಯ ಸತ್ತು ಹೋಗಿದೆ’ ಎಂದೂ ವಾದಿಸುತ್ತಾರೆ. ಇಂತಹ ಮನೋಭಾವ, ಜವಾಬ್ದಾರಿಯುತ ಪತ್ರಕರ್ತರು ಮತ್ತು ಜನರಿಗೆ ನಂಬಿಕೆಗೆ ಅರ್ಹವಾದ ಮತ್ತು ಸಾಕ್ಷ್ಯ ಆಧಾರಿತ ಮಾಹಿತಿ ಯಾವುದು ಎಂದು ಅರ್ಥೈಸಿಕೊಳ್ಳುವುದನ್ನು ಸಂಕೀರ್ಣಗೊಳಿಸಿದೆ.

ಪತ್ರಿಕೋದ್ಯಮ ಎಂದರೆ ಸುದ್ದಿಗಳನ್ನು ನೀಡುವ ಅಥವಾ ಓದುವ ಅಥವಾ ವೀಕ್ಷಿಸುವಂತಹ ಸರಳ ವಿಚಾರವಲ್ಲ. ಬದಲಿಗೆ, ಸತ್ಯ ಸಂಗತಿಗಳ ಮೂಲಕ ಜನರನ್ನು ಸಬಲೀಕರಣಗೊಳಿಸುವುದಾಗಿದೆ. ಜನರ ಹಿತದೃಷ್ಟಿಯಿಂದ ಸತ್ಯ ಮತ್ತು ಗುಣಮಟ್ಟದ ಪತ್ರಿಕೋದ್ಯಮ ಅತ್ಯಂತ ಮಹತ್ವದ್ದಾಗಿದೆ. ಇಲ್ಲಿ ವಾಸ್ತವ ಸಂಗತಿ, ಸತ್ಯ ಮುಖ್ಯವಾಗುತ್ತದೆ. ‘ವಿಶ್ವ ಸುದ್ದಿ ದಿನ’ದ ಸಂದರ್ಭದಲ್ಲಿ ಪತ್ರಕರ್ತರಾದ ನಾವೆಲ್ಲರೂ ಮತ್ತು ನಾಗರಿಕರು ‘ಸತ್ಯವನ್ನೇ ಆಯ್ಕೆ’ ಮಾಡಿಕೊಳ್ಳಬೇಕು.

ಲೇಖಕಿ: ಕೆನಡಿಯನ್ ಜರ್ನಲಿಸಮ್ ಫೌಂಡೇಷನ್ ಅಧ್ಯಕ್ಷೆ

‘ಅಲ್ಲಿ’ ನಿಂತು, ‘ಇಲ್ಲಿ’ಯ ಸುದ್ದಿ ಹೆಕ್ಕಿ

• ಕಾರ್ಲೋಸ್ ಎಫ್.ಚಾಮರೋಮ್



‘ಮನಗುವಾದ ಸೇನಾ ನೆಲೆಯಲ್ಲಿ ರಷ್ಯಾ ಗುಪ್ತಚರ ಕೇಂದ್ರ ಕಾರ್ಯಾಚರಣೆ’, ‘ಡೇನಿಯಲ್ ಒರ್ಟೆಗಾ ಅಂಗರಕ್ಷಕರ ಮುಖ್ಯಸ್ಥನ ವಜಾ’, ‘ಬಹುಕೋಟಿ ಡಾಲರ್ ಯೋಜನೆಗಳಲ್ಲಿ ಭ್ರಷ್ಟಾಚಾರ: ಎಂಐಎಫ್‌ಸಿಸಿಎ ಸಚಿವರ ತಲೆದಂಡ’, ‘ದೇಶದ ‘ಪುನರ್‌ರಚನೆ’ಯ ಘೋಷಣೆ ಬಳಿಕ ಸರ್ಕಾರಿ ನೌಕರರಲ್ಲಿ ಆತಂಕ, ಮೌನ’...

28 ವರ್ಷಗಳ ಹಿಂದೆ ನಿಕರಾಗುವಾದಲ್ಲಿ ನಾನು ಸ್ಥಾಪನೆ ಮಾಡಿದ್ದ ಸ್ವತಂತ್ರ ಮಾಧ್ಯಮ ಸಂಸ್ಥೆ ಕಾನ್ಫಿಡೆನ್ಶಿಯಲ್. ಡಿಜಿಟಲ್‌ನಲ್ಲಿ ಇತ್ತೀಚಿನ ವಾರಗಳಲ್ಲಿ ನಾವು ಪ್ರಕಟಿಸಿರುವ ತನಿಖಾ ವರದಿಗಳ ತಲೆ ಬರಹಗಳಿವು. ನಾನೀಗ ನಿಕರಾಗುವಾದಿಂದ ಗಡಿಪಾರುಗೊಂಡು ಕೋಸ್ಟರಿಕಾದಲ್ಲಿ ಸಂಸ್ಥೆ ನಡೆಸುತ್ತಿದ್ದೇನೆ.

2018ರಲ್ಲಿ ನಿಕರಾಗುವಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಯ ಅಲೆಗಳು ಎದ್ದ ನಂತರ ಪೊಲೀಸರು ಕೋರ್ಟ್ ಆದೇಶ ಇಲ್ಲದೆಯೇ ನಮ್ಮ ಸಂಪಾದಕೀಯ ಕಚೇರಿಯ ಮೇಲೆ ಎರಡು ಬಾರಿ ದಾಳಿ ನಡೆಸಿದ್ದರು. 2021ರಲ್ಲಿ ಡೇನಿಯಲ್ ಒರ್ಟೆಗಾ ಅವರ ಸರ್ವಾಧಿಕಾರಿ ಆಡಳಿತ ನಮ್ಮ ಸಂಸ್ಥೆಯನ್ನು ಅಕ್ರಮವಾಗಿ ಜಪ್ತಿ ಮಾಡಿತ್ತು. ನಮ್ಮ ಸ್ವತಂತ್ರ ಮಾಹಿತಿ ಮೂಲಗಳನ್ನು ವಿಚಾರಣೆಗೆ ಒಳಪಡಿಸಲಾಯಿತಲ್ಲದೇ, ಬೆದರಿಕೆಯನ್ನೂ ಒಡ್ಡಲಾಯಿತು. ಸ್ವತಂತ್ರವಾಗಿ ಪತ್ರಿಕೋದ್ಯಮ ನಡೆಸುವುದಕ್ಕಾಗಿ ನಮ್ಮ ಎಲ್ಲ ಪತ್ರಕರ್ತರು ಬಲವಂತವಾಗಿ ದೇಶದಿಂದ ಗಡಿಪಾರಾಗಬೇಕಾಯಿತು.

ಹಾಗಿದ್ದರೂ, ಸಾರ್ವಜನಿಕ ಭ್ರಷ್ಟಾಚಾರ, ದೇಶದ ಆಡಳಿತದಲ್ಲಿನ ಆಂತರಿಕ ಸಂಘರ್ಷ, ಶೇ 10ರಷ್ಟು ಜನರ ಸಾಮೂಹಿಕ ವಲಸೆ, ವಲಸಿಗರನ್ನು ಅಮೆರಿಕಕ್ಕೆ ಅಕ್ರಮವಾಗಿ ಕಳುಹಿಸಲು ನಿಕರಾಗುವಾವನ್ನು ಚಿಮ್ಮುಹಲಗೆಯನ್ನಾಗಿ ಬಳಸುತ್ತಿರುವುದರ ಬಗ್ಗೆ ನಾವು ನಿರಂತರವಾಗಿ ವರದಿಗಳನ್ನು ಪ್ರಕಟಿಸುತ್ತಲೇ ಇದ್ದೇವೆ. ಇಂತಹ ವರದಿಗಳನ್ನು ಅಧಿಕೃತ ಮಾಧ್ಯಮದಲ್ಲಿ ಯಾರೊಬ್ಬರೂ ನೋಡುತ್ತಿಲ್ಲ, ಕೇಳುತ್ತಲೂ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ, ನಮ್ಮ ವೀಕ್ಷಕರಿಗೆಲ್ಲರಿಗೂ ಸರ್ಕಾರದ ನಿರ್ಬಂಧದಿಂದ ಮುಕ್ತವಾಗಿರುವ ಪರ್ಯಾಯ ಮಾಹಿತಿಗಳು ದೇಶದಿಂದ ಹೊರದಬ್ಬಿಸಿಕೊಂಡ ಪತ್ರಿಕೋದ್ಯಮದಿಂದ ಸಿಗುತ್ತಿವೆ.

ಈ ಪ್ರತಿಯೊಂದು ತನಿಖಾ ವರದಿಯ ಹಿಂದೆ ಯುವ ಪ್ರತಿಭಾವಂತ ಪತ್ರಕರ್ತರಿದ್ದಾರೆ. ಅವರು ತಮ್ಮ ವರದಿಗಳನ್ನು ಸರ್ಕಾರದ ನಿರ್ಬಂಧಕ್ಕೆ ಒಳಪಡಿಸುವುದಿಲ್ಲ. ಸ್ವತಃ ನಿರ್ಬಂಧಕ್ಕೂ ಒಳಗಾಗಿಲ್ಲ. ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಸರ್ಕಾರಿ ನೌಕರರು, ನಾಗರಿಕರು, ಸೇನೆಯಲ್ಲಿರುವವರೂ ಸೇರಿದಂತೆ ಹಲವು ಮೂಲಗಳ ಕೊಡುಗೆಯೂ ವರದಿಗಳ ಹಿಂದಿದೆ.

ಕ್ಯೂಬಾ ಮತ್ತು ವೆನೆಜುವೆಲಾದಲ್ಲಿ ಇತಿಹಾಸ ಪುನರಾವರ್ತನೆಯಾಗುತ್ತಿದೆ. ದೇಶದ ಹೊರಗಿನಿಂದ ಕಾರ್ಯನಿರ್ವಹಿಸುತ್ತಿರುವ ಸ್ವತಂತ್ರ ಪತ್ರಿಕೋದ್ಯಮವು, ಲ್ಯಾಟಿನ್ ಅಮೆರಿಕದಲ್ಲಿ ಮಾಧ್ಯಮಗಳಿಗೆ ಬೆದರಿಕೆ ಒಡ್ಡುವ ನಿರಂಕುಶ ಪ್ರಭುತ್ವಗಳ ನಡವಳಿಕೆಯನ್ನು, ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಕಾನೂನು ಸುವ್ಯವಸ್ಥೆ ಕುಸಿದಿರುವ, ನಾಗರಿಕ ಸಮಾಜ ದಿಗ್ಬಂಧನ ಎದುರಿಸುತ್ತಿರುವ ಅಥವಾ ಅಳಿವಿನ ಅಂಚಿನಲ್ಲಿರುವ ಕಡೆಗಳಲ್ಲಿ ಸ್ವತಂತ್ರ ಮಾಧ್ಯಮಗಳ ರಕ್ಷಣೆಗೆ ಇರುವ ಏಕೈಕ ಅಸ್ತ್ರ ಎಂದರೆ ಅವುಗಳ ವಿಶ್ವಾಸಾರ್ಹತೆ.

ಈ ಮೂರೂ ರಾಷ್ಟ್ರಗಳಲ್ಲಿ ಸರ್ವಾಧಿಕಾರಿ ಆಡಳಿತಗಳು ಪತ್ರಿಕಾ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅಪರಾಧವನ್ನಾಗಿ ಮಾಡಿವೆ. ಪತ್ರಕರ್ತರು ತಾವು ಪತ್ರಕರ್ತರೆಂದು ಗುರುತಿಸಿಕೊಳ್ಳುವಂತಿಲ್ಲ. ಬಂಧನದಿಂದ ತಪ್ಪಿಸಿಕೊಳ್ಳಬೇಕಾದರೆ, ತಮ್ಮ ವರದಿಗಳಲ್ಲಿ ಹೆಸರುಗಳನ್ನೂ ಪ್ರಕಟಿಸುವಂತಿಲ್ಲ. ಸರ್ಕಾರಗಳು ಸ್ವತಂತ್ರ ಮಾಧ್ಯಮಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನಿರ್ಬಂಧ ವಿಧಿಸುತ್ತಿವೆ. ಇಂತಹ ನಿರ್ಬಂಧಗಳ ನಡುವೆಯೂ ಹೊರದೂಡಲಾದ ಪತ್ರಿಕೋದ್ಯಮದಿಂದಾಗಿ ಸ್ವತಂತ್ರ ಮಾಧ್ಯಮಗಳು ಉಳಿದುಕೊಂಡಿವೆ.


ಬಲವಂತವಾಗಿ ದೇಶ ತೊರೆದ ಅಥವಾ ಹಿಂಸಾಚಾರ, ಬೆದರಿಕೆ, ಸಮಾಜ ಘಾತುಕರು, ಭ್ರಷ್ಟ ಅಧಿಕಾರಿಗಳು ಮತ್ತು ಸರ್ವಾಧಿಕಾರಿ ಸರ್ಕಾರಗಳ ಕಿರುಕುಳ ತಾಳಲಾರದೆ ಅನಿವಾರ್ಯವಾಗಿ ವಲಸೆ ಹೋದ ಲ್ಯಾಟಿನ್ ಅಮೆರಿಕಾದ ಮಾಧ್ಯಮ ಸಹೋದ್ಯೋಗಿಗಳ ಗೌರವಾರ್ಥ ‘ಇಂಟರ್–ಅಮೆರಿಕನ್ ಪ್ರೆಸ್ ಅಸೋಸಿಯೇಷನ್’ ಈ ವರ್ಷ ‘ಗ್ರೇಟ್ ಪ್ರೈಜ್ ಫಾರ್ ಪ್ರೆಸ್ ಫ್ರೀಡಂ–2024’ ಅನ್ನು ‘ದೇಶದಿಂದ ಬಲವಂತವಾಗಿ ಗಡಿಪಾರು ಮಾಡಲಾದ ಪತ್ರಿಕೋದ್ಯಮ’ಕ್ಕೆ ನೀಡಿದೆ.

ದೇಶದಿಂದ ಹೊರದೂಡಿದ ಪತ್ರಿಕೋದ್ಯಮವನ್ನು ಮುಂದುವರಿಸಲು ಬೆಟ್ಟದಷ್ಟು ಸವಾಲುಗಳಿವೆ. ಈ ನಿರಂಕುಶ ಪ್ರಭುತ್ವಗಳ ಆಡಳಿತದಲ್ಲಿ ಮಾಧ್ಯಮಗಳು ಶಾಶ್ವತವಾಗಿ ದೇಶದಿಂದ ಹೊರಗುಳಿದೇ ಕಾರ್ಯನಿರ್ವಹಿಸಬೇಕಾದ ಪರಿಸ್ಥಿತಿ ಸದ್ಯಕ್ಕೆ ಇದೆ. ಮಾಧ್ಯಮಗಳ ಮೇಲೆ ಸರ್ವಾಧಿಕಾರಿ ಆಡಳಿತಗಳು ಮಾಡುತ್ತಿರುವ ಪ್ರಹಾರವು ಅಂತರರಾಷ್ಟ್ರೀಯ ಸಮುದಾಯಕ್ಕೂ ಸವಾಲೊಡ್ಡಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲ ಸ್ವಾತಂತ್ರ್ಯಗಳಿಗಿಂತಲೂ ಮುಖ್ಯವಾಗಿರುವ ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸುವುದು ಬಹಳ ಮುಖ್ಯವಾಗಿದೆ.

ಲೇಖಕ: ಕಾನ್ಫಿಡೆನ್ಶಿಯಲ್ ಸಂಪಾದಕ

ಮಾಧ್ಯಮಕ್ಕೆ ‘ಬೆಂಬಲ ಶುಲ್ಕ’ ನೀಡಿ

• ಮಾರ್ಸೆಲೊ ರೆಶ್



ವಿಷಯ ಅಥವಾ ಕಂಟೆಂಟ್ ಬಗ್ಗೆ ನೀವು ಏಕೆ ಗಮನ ಕೊಡುತ್ತೀರಿ? ಅದು ಪತ್ರಿಕಾ ಉದ್ಯಮಕ್ಕೆ ಸಂಬಂಧಿಸಿದ್ದೇ ಆಗಿರಬಹುದು ಅಥವಾ ಮನರಂಜನಾ ಕ್ಷೇತ್ರದ್ದೇ ಆಗಿರಬಹುದು. ಈ ಬಗ್ಗೆ ಎಂದಾದರೂ ಯೋಚಿಸಿದ್ದೀರಾ? ಯಾವುದು ನಿಮ್ಮ ಗಮನವನ್ನು ಸೆಳೆಯುತ್ತದೆ? ಯಾವುದು ನಿಮ್ಮ ಗಮನವನ್ನು ಬೇರೆಡೆಗೆ ತಿರುಗುವಂತೆ ಮಾಡುತ್ತದೆ?

ಮೇಲಿನ ಎಲ್ಲಾ ಪ್ರಶ್ನೆಗಳು ನಮ್ಮ ಕಾಲದ ಅತ್ಯಂತ ಬೆಲೆಬಾಳುವ ಆಸ್ತಿಯೊಂದಕ್ಕೆ ಸಂಬಂಧಿಸಿದಂಥವು. ಆ ಆಸ್ತಿ ಬೇರೆ ಯಾವುದೂ ಅಲ್ಲ; ಸಮಯ. ಕೃತಕ ಬುದ್ಧಿಮತ್ತೆ, 5ಜಿ, 8ಕೆ ಅಥವಾ 1000 ಎಂಬಿಪಿಎಸ್ ವೇಗದ ಇಂಟರ್‌ನೆಟ್ ಸೇರಿದಂತೆ ತಂತ್ರಜ್ಞಾನ ಮಿತಿಗಳಿಲ್ಲದೇ ಮುಂದುವರಿಯುತ್ತಿದೆ. ಆದರೆ, ಇವೆಲ್ಲವೂ ಜೀವನದ ಸರಳ ಮತ್ತು ಎಂದೂ ಬದಲಾಗದ, ‘ದಿನಕ್ಕೆ 24 ಗಂಟೆಗಳೇ ಇರುವುದು, ಅದನ್ನು ವಿಸ್ತರಿಸಲು ಸಾಧ್ಯವಿಲ್ಲ’ ಎಂಬ ಸತ್ಯದ ವಿರುದ್ಧವಾಗಿಯೇ ಬರುತ್ತಿವೆ. ಹಾಗಾಗಿ, ಇಂತಹ ಅತ್ಯಮೂಲ್ಯ ಸಮಯವನ್ನು ಬಳಸುವಾಗ ಒಂದು ತರ್ಕ ಇರಬೇಕು. ಅದು ನಿಮ್ಮ ಜೀವನಕ್ಕೆ ಅರ್ಥ ಕಲ್ಪಿಸಬೇಕು. ಅಷ್ಟೇ ಅಲ್ಲ, ಬದುಕು ಮತ್ತು ಸಮಾಜವನ್ನು ಸಕಾರಾತ್ಮಕವಾಗಿ ಬದಲಾಯಿಸಬೇಕು.

ಈ ಆಲೋಚನೆಗಳು ನಮ್ಮ ಜೀವನದ ಹಾದಿಯಲ್ಲಿ ಅತ್ಯಂತ ಮಹತ್ವದ್ದಾಗಿವೆ. ಇದು, ಸತ್ಯ ಮತ್ತು ಸುಳ್ಳುಗಳ ನಡುವಿನ ಹಾಗೂ ವಾಸ್ತವತೆ ಮತ್ತು ಕಲ್ಪನೆಯ ನಡುವಿನ ವಿಭಜನೆಯಲ್ಲ. ಇವುಗಳು ನಮ್ಮ ಜೀವನದಲ್ಲಿ ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವ, ಜನರ ಓಲೈಕೆ ಮತ್ತು ಪ್ರಾಮಾಣಿಕತೆ, ಸ್ಥಿರತೆ ಮತ್ತು ಸಾಮಾಜಿಕ ಸಾಮರಸ್ಯ ಇಲ್ಲದಿರುವಿಕೆಯ ನಡುವಿನ ಆಯ್ಕೆಯಾಗಿವೆ.

ನಮ್ಮ ಕಾಲದಲ್ಲಿರುವ ಎಲ್ಲ ಸಂದಿಗ್ಧತೆಗಳಿಗೆ ಮಾಧ್ಯಮ ಪರಿಹಾರವಲ್ಲ. ಆದರೆ, ಮಾಧ್ಯಮ ಇಲ್ಲದ ಜಗತ್ತನ್ನು ಊಹಿಸಿ ನೋಡಿ. ಮಾಧ್ಯಮಗಳು ಇಲ್ಲದೇ ಇದ್ದರೆ ಸತ್ಯ ಸಂಗತಿ ಮತ್ತು ವದಂತಿಗಳನ್ನು ತಿಳಿಸುವವರು ಯಾರು? ಸ್ವತಂತ್ರವಾದ ಪತ್ರಿಕಾ ವರದಿಗಳು ವಿಶ್ವಾಸಾರ್ಹತೆಯ ಪ್ರಮಾಣಪತ್ರ ನೀಡದೇ ಇದ್ದರೆ ಯಾವುದನ್ನಾದರೂ ಅಥವಾ ಯಾವುದೇ ಸಂಸ್ಥೆಯನ್ನು ನೀವು ಹೇಗೆ ನಂಬುತ್ತೀರಿ? ಜನರಿಗೆ ಹಣ ವಂಚಿಸುವ ಹೊಸ ಸೈಬರ್ ಅಪರಾಧಗಳು ಹುಟ್ಟಿಕೊಂಡಿವೆ ಎಂಬುದನ್ನು ವರದಿ ಮಾಡುವವರು ಯಾರು? ಸರ್ಕಾರಿ ತನಿಖಾ ಸಂಸ್ಥೆಗಳು ವಿಳಂಬ ಧೋರಣೆ ಅನುಸರಿಸಿದಾಗ ಅಥವಾ ನಿರ್ಲಕ್ಷ್ಯ ವಹಿಸಿದಾಗ ಭ್ರಷ್ಟಾಚಾರ ಮತ್ತು ಇತರ ಅಪರಾಧ ಪ್ರಕರಣಗಳ ಬಗ್ಗೆ ತನಿಖೆ ನಡೆಸುವವರು ಯಾರು? ದೈತ್ಯ ತಂತ್ರಜ್ಞಾನ ಕಂಪನಿಗಳ ಅನೀತಿಗಳ ಬಗ್ಗೆ, ಭಾವನಾತ್ಮಕ, ರಾಜಕೀಯ ಮತ್ತು ಆರ್ಥಿಕ ಸ್ಥಿರತೆಯ ಮೇಲೆ ಸಾಮಾಜಿಕ ಜಾಲತಾಣಗಳು ತಂದೊಡ್ಡುವ ಅಪಾಯಗಳ ಬಗ್ಗೆ ಮಾತನಾಡುವವರು ಯಾರು? ಅಧಿಕಾರದಲ್ಲಿರುವ ಭ್ರಷ್ಟ ನಿರಂಕುಶವಾದಿಗಳು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವರು ಒಡ್ಡುತ್ತಿರುವ ಬೆದರಿಕೆಯನ್ನು ಬಯಲಿಗೆ ಎಳೆಯುವವರು ಯಾರು?

ಸ್ವತಂತ್ರ ಪತ್ರಿಕೋದ್ಯಮ ನಡೆಸುವವರೇನೂ ಸಮಸ್ಯೆಗಳಿಂದ ಮುಕ್ತವಾಗಿಲ್ಲ. ಅವರ ಚಟುವಟಿಕೆಗಳು ಸುಸ್ಥಿರವಾಗಿ ನಡೆಯುವುದರಿಂದ ಮೊದಲುಗೊಂಡು ಸಮಸ್ಯೆಗಳ ಸಂಕಷ್ಟ ಶುರುವಾಗುತ್ತದೆ. ಗಂಭೀರ ಮಾಧ್ಯಮಗಳು ಬದುಕುಳಿಯಲು ತಮ್ಮದೇ ಆದ ವ್ಯಾಪಾರಿ ಮಾದರಿಗಳನ್ನು ಹೊಂದಿರುತ್ತವೆ. ಆದರೆ, ಅಸಮತೋಲನದಿಂದ ಕೂಡಿದ ತಂತ್ರಜ್ಞಾನ ವೇದಿಕೆಗಳ ನಿಯಂತ್ರಣದಿಂದ ಅವುಗಳು ಬಸವಳಿಯುತ್ತವೆ. ನೈತಿಕತೆ ಅಥವಾ ಸತ್ಯಾಸತ್ಯತೆಯ ಪರಿಕಲ್ಪನೆಗಳನ್ನು ಕೈಬಿಟ್ಟು ಯಾವ ಸಂಸ್ಥೆಯೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದರೆ, ಮಾಧ್ಯಮ ಸಂಸ್ಥೆಗಳು ಇಂತಹ ಮೌಲ್ಯಗಳನ್ನು ತ್ಯಜಿಸಬೇಕು ಎಂದು ದೈತ್ಯ ತಂತ್ರಜ್ಞಾನ ಸಂಸ್ಥೆಗಳು ಬಯಸುತ್ತವೆ.

ದೈತ್ಯ ತಂತ್ರಜ್ಞಾನ ಕಂಪನಿಗಳು ಅನುಸರಿಸುವ ವ್ಯಾಪಾರ ಮಾದರಿಗಳ ಅಡ್ಡ ಪರಿಣಾಮವಾಗಿ ಸಾಮಾಜಿಕ ಮಾಲಿನ್ಯ ಉಂಟಾಗುತ್ತಿದ್ದು, ಇದು ಜನರ ಮಾನಸಿಕ ಆರೋಗ್ಯ ಮತ್ತು ಭೂಮಿಯ ಸ್ಥಿರತೆಗೆ ಬೆದರಿಕೆ ಒಡ್ಡುತ್ತಿದೆ. ತಂತ್ರಜ್ಞಾನ ಕಂಪನಿಗಳು ತಮ್ಮ ಲಾಭದ ಒಂದು ಭಾಗವನ್ನು ವೃತ್ತಿಪರ ಪತ್ರಿಕೋದ್ಯಮಕ್ಕೆ ‘ಬೆಂಬಲ ಶುಲ್ಕ’ವನ್ನಾಗಿ ನೀಡಬೇಕಿರುವುದು ನ್ಯಾಯಸಮ್ಮತವಾಗಿದೆ. ಏಕೆಂದರೆ, ಪತ್ರಿಕೋದ್ಯಮವು ಸಾಮಾಜಿಕ ಮಾಲಿನ್ಯದ ಬಹುಪಾಲನ್ನು ಶುಚಿಗೊಳಿಸುತ್ತದೆ.

ಅಲ್ಗರಿದಮ್‌ಗಳ ಜಗತ್ತಿನಲ್ಲಿರುವ ಲೋಪದೋಷಗಳ ಲಾಭ ಪಡೆಯುದು ಹೇಗೆ ಎಂಬುದನ್ನು ಅರಿತಿರುವ ಕಪಟಿಗಳು ಇಲ್ಲಿ ಸಾಕಷ್ಟಿದ್ದಾರೆ. ಮಾನವೀಯತೆ ಪ್ರಪಾತಕ್ಕೆ ಕುಸಿಯುತ್ತಿದೆ. ಇಂತಹ ಹೊತ್ತಿನಲ್ಲಿ ತಂತ್ರಜ್ಞಾನ ಕಂಪನಿಗಳು ಸ್ವತಂತ್ರ ಪತ್ರಿಕೋದ್ಯಮಕ್ಕೆ ಹಣಕಾಸಿನ ನೆರವು ನೀಡಿ ಮಾನವೀಯತೆ ಉಳಿಸಿದರೆ ಅದು ಈ ಕಂಪನಿಗಳು ಜಗತ್ತಿನ ಭವಿಷ್ಯಕ್ಕೆ ನೀಡುವ ಬಹುದೊಡ್ಡ ಕೊಡುಗೆಯಾಗಬಹುದು.

ಲೇಖಕ: ಬ್ರೆಜಿಲ್ ವೃತ್ತಪತ್ರಿಕೆಗಳ ಒಕ್ಕೂಟದ ಅಧ್ಯಕ್ಷ

ಪದಬಂಧ 5816

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸೈರಣೆ ಅಥವಾ ತಾಳ್ಮೆ (4)
3.ನೀರಿಗೆ ಆಶ್ರಯವಾದ ಕೊಳ,ಸರೋವರ ಮುಂತಾದವು (4)
5.ಈತ ಪೆದ್ದ (3)
7.ಕಾವ್ಯವನ್ನು ಅರ್ಥಪೂರ್ಣವಾಗಿ ಓದುವವನು (3)
9.ನಾರಿಕೇಳದ ಹತ್ತಿರವಿರುವ ಕೊಳವೆ (2)
10.ಹುರುಪು ಈ ರೀತಿ ಬಂದಿದೆ (3)
11.ಆಕಾರದ ವಿವರಗಳನ್ನೊಳಗೊಂಡ ಸ್ವರೂಪ (2)
12.ಈಕೆ ಹೆಂಗಸು (3)
14.ರವಿ ಮೂಡಿದಾಗ ಕಾಣಿಸಿದ ಗುಬ್ಬಚ್ಚಿ (3)
16.ಬರ ಬಂದಾಗ ಕುಡಿದ ಪಾನಕ (4)
17.ಹೆದರಿಕೆಯನ್ನುಂಟು ಮಾಡುವುದು (4)

ಮೇಲಿಂದ ಕೆಳಕ್ಕೆ

1.ಕೊನೆಗೆ ರಾಗವಿದ್ದರೆ ಇದು ಸುಲಭ! (3)
2.ನಡೆದ ಅಥವಾಕಲ್ಪಿತ ಸಂಗತಿಯಿಲ್ಲಿ ಉಲ್ಟಾ ಕಾಣುತ್ತಿದೆ (2)
3.ಯಮನ ವೇಗ! (2)
4.ಯಮನ ಬಳಿಯಿರುವ ಜೋಡಿ (3)
6.ಕರದಲ್ಲಿ ಕಲಸನ್ನ (7)
8.ಹಿರಿದಾದ ಆಸೆಯಿದು (5)
9.ನಾಯಕನೊಡನಿರುವ ವೇಶ್ಯೆ ಕಾಣುತ್ತಿರುವಳೇ? (5)
11.ಯಯಾತಿಯ ತಂದೆ (3)
13.ತೆರ ಪಾವತಿಸದ ದಡ್ಡ! (3)
14.ಕತ್ತು ಎತ್ತಿದ್ದಕ್ಕೆ ಈ ತೊಂದರೆ! (2)
15.ಸಂಸಾರ ಬಂಧನಕ್ಕೆ ಒಳಗಾದವ ತಿರುಗಿದ್ದಾನಲ್ಲಾ! (2)

1			2	■	3			4
	■	■	5	6		■	■	
7	8		■		■	■	9	10
■		■	■		■	■		■
■		■	10			■		■
■		■	■		■	■		■
11		■	■		■	12		13
	■	■	14		15	■	■	
16				■	17			

5815ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಳ್ಳಕ 3.ಎಚ್ಚರ
5.ನೆರೆ 6.ಬಳಗ
7.ನೆಪ 11.ಗೆಹ
13.ಕಪ್ಪಡ 15.ತೆನೆ
16.ಪರಾತ 17.ಸಿಡಿಲು

ಮೇಲಿಂದ ಕೆಳಕ್ಕೆ:

1.ಅಕ್ಕರೆ 2.ಕಲಬತ್ತು
3.ಎತ್ತಂಗಡಿ 4.ರವಾನೆ
5.ನೆಲಮಾಳಿಗೆ 8.ಪರ್ಯಾಲೋಚನೆ
9.ಏಕದಂತ 10.ಪಡಪೋಸಿ
12.ಹಡಪ 15.ತೆವಲು

ಸುಡೊಕು 6201

6		4		9		1		8
	1	2		3			6	
		7	4		1	3		9
2	9				4	6		
1	4							
							9	4
3		9			5		7	1
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6200 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಏಕಾದಶಿ ಗಂ. 14-50 ನಕ್ಷತ್ರ: ಆಶ್ಲೇಷ ಗಂ. 27-38 ಯೋಗ: ಸಿದ್ಧ ಗಂ. 23-51 ಕರಣ: ಬಾಲವ ಗಂ. 14-50, ಕನ್ಯಾ ಮಾಸದ 11 ನೇ ದಿನ, ಮಳೆನಕ್ಷತ್ರ: ಹಸ್ತ 1.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-23 ಸೂರ್ಯಾಸ್ತ: 06-19
ಮುಸ್ಲಿಂ ದಿನಾಂಕ: 24 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ: 5, 8

ಮೇಷ: ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಉತ್ಸಾಹ ತೋರುವಿರಿ. ವಿಳಂಬವಾಗಿದ್ದ ಕಾರ್ಯ ಕಲಾಪಗಳು ಚುರುಕುಗೊಂಡು ಹೆಚ್ಚಿನ ಅನುಕೂಲ ಒದಗಿಬರಲಿದೆ. ಹಸಿರು ಬಣ್ಣ ಅದೃಷ್ಟ ತರುತ್ತದೆ.

ವೃಷಭ: ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಹೊಂದಿಕೊಳ್ಳುವುದು ಬಹಳ ಕಷ್ಟಕರ ಎಂದು ಅನಿಸಲಿದೆ. ಹಿರಿಯರೊಡನೆ ವಾಗ್ವಾದ ಬರದಂತೆ ಜಾಗ್ರತೆ ವಹಿಸಿರಿ. ವಾಹನ ಚಾಲಕರಿಗೆ ಬಿಡುವಿಲ್ಲದ ಕೆಲಸ ಇರುತ್ತದೆ.

ಮಿಥುನ: ಸಿದ್ಧ ಉಡುಪು ಮಾರಾಟಗಾರರಿಗೆ ದೊಡ್ಡ ಪ್ರಮಾಣದ ಸಂಗ್ರಹಣೆಗೆ ಉತ್ತಮ ದಿನ. ಕಚೇರಿಯಲ್ಲಿದ್ದ ಭಿನ್ನಾಭಿಪ್ರಾಯಗಳು ಬಗೆಹರಿಯುವುದು. ಸಂಪರ್ಕ ಕಲ್ಪಿಸುವ ಕೆಲಸಗಾರರಿಗೆ ಹೆಚ್ಚಿನ ಕೆಲಸ ಇರುವುದು.

ಕರ್ಕಾಟಕ: ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸುವ ಅಭ್ಯಾಸದಲ್ಲಿ ವ್ಯತ್ಯಾಸ ಆಗುವುದು. ಮಗನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಆಪ್ತರೊಬ್ಬರ ನೆರವು ದೊರೆಯಲಿದೆ. ನಿರುದ್ಯೋಗಿಗಳಿಗೆ ಉದ್ಯೋಗಕ್ಕಾಗಿ ಅಲೆದಾಟ ತಪ್ಪದು.

ಸಿಂಹ: ಸ್ವಲ್ಪ ಕಾಲದ ನಂತರ ಮಾಡುತ್ತೇನೆ ಎಂದು ನೀವು ಅಂದುಕೊಳ್ಳುವ ವಿಷಯಗಳು ಬಿಟ್ಟ ಹಂತದಲ್ಲೇ ನಿಂತು ಹೋಗುವ ಸಾಧ್ಯತೆ ಇರುವುದರಿಂದ ಅದನ್ನು ಈ ಕೂಡಲೇ ಪೂರೈಸುವ ಯೋಚನೆ ಮಾಡಿ.

ಕನ್ಯಾ: ರೈತರು ಬೆಳೆಗಳ ಅಭಿವೃದ್ಧಿ, ರಕ್ಷಣೆಯ ಬಗ್ಗೆ ಗಮನಹರಿಸುವುದು ಒಳ್ಳೆಯದು. ಸೇವಾ ಮನೋಭಾವಕ್ಕೆ ಕುಟುಂಬ ವರ್ಗದವರು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ. ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ.

ತುಲಾ: ಮಕ್ಕಳ ವಿಷಯದಲ್ಲಿ ಸಂಯಮದಿಂದ ವರ್ತಿಸುವುದು ಉತ್ತಮ. ದಿನಸಿ ವ್ಯಾಪಾರ ವಹಿವಾಟುಗಳು ಹೆಚ್ಚಿನ ಲಾಭ ತರಲಿದೆ. ಕೆಲಸಗಳೆಲ್ಲವೂ ನಿರಾತಂಕವಾಗಿ ಸಾಗಲಿದೆ.

ವೃಶ್ಚಿಕ: ಪ್ರತಿ ವರ್ಷದಲ್ಲಿ ಮಾಡಿಕೊಂಡುಬಂದ ಧಾರ್ಮಿಕ ಕೆಲಸವನ್ನು ಮುಂದುವರಿಸುವ ಬಗ್ಗೆ ತೀರ್ಮಾನಿಸಿ. ಕೆಲವು ವಿಚಾರದಲ್ಲಾದರೂ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಿರಿ, ಅದರ ಫಲ ದೇವರು ಕೊಡುತ್ತಾನೆ.


ಧನು: ಉದ್ವೇಗ ಹಾಗೂ ಕೆಲ ವೈಮನಸ್ಯಗಳು ತಂದೆಯ ಮಾರ್ಗದರ್ಶನದಿಂದ ದೂರಾವಾಗುವುದು. ಉನ್ನತ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಕೃಷಿ ಕಾರ್ಯವು ಬರದಿಂದ ಸಾಗುವುದು.

ಮಕರ: ಸ್ವಂತ ಕೆಲಸಕ್ಕಾಗಿ ಅಧಿಕಾರವನ್ನು ಬಳಸಿಕೊಳ್ಳಬೇಡಿ. ದುಬಾರಿ ವಸ್ತುಗಳ ಖರೀದಿಯಂಥ ಅನಾವಶ್ಯಕ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇಬೇಕಾದ ಪರಿಸ್ಥಿತಿ ತೋರಲಿದೆ.

ಕುಂಭ: ಸಾಮಾಜಿಕ ರಂಗದಲ್ಲಿ ಮುಜುಗರದ ಸನ್ನಿವೇಶಗಳು ಸೃಷ್ಟಿಯಾದೀತು ಜಾಗ್ರತೆವಹಿಸಿ. ಬೇಸರ ಕಳೆಯಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ. ಸಂಜೆಯ ಸಮಯದಲ್ಲಿ ದೇಹಾಯಾಸ ಕಾಣುವುದು.

ಮೀನ: ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೆ ಆತಂಕ ಪಡಬೇಕಿಲ್ಲ. ಈ ದಿನದ ನಿಮ್ಮ ಈ ಪರಿಶ್ರಮವು ಮುಂದಿನ ದಿನಕ್ಕೆ ಅಡಿಪಾಯವಾಗಲಿದೆ. ಸಂಜೆಯ ವೇಳೆ ಶುಭವಾಗಲಿದೆ.

ಷೇರುಪೇಟೆ ವಹಿವಾಟು 264



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	26,216
ಇಂದಿನ ಅಂತ್ಯ	26,178
	37
ದಿನದ ಕನಿಷ್ಠ	26,151

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹224
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹205

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹550
12 ಕ್ಕೆ	₹75
ಮೈಸೂರು 100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹389-565
ದ್ವಿತಳಿ (ಪ್ರ.ಕೆ)	₹343-703

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ [illegible]	₹1540 (1530)
ಸೋಯಾ [illegible]	₹1280 (1265)
ಸೂರ್ಯಕಾಂತಿ [illegible]	₹1285 (1270)
ಪಾಮೋಲಿನ್	₹1270 (1260)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	47629-48029
ಬೆಟ್ಟೆ	33129-33499
ಕೆಂಪುಗೋಟು	27609-28129
ರಾಶಿ	47129-47579
ಕುಮಟಾ	
ಚಿಪ್ಪು	22569-26019
ಕೋಕ	7019-22669
ಫ್ಯಾಕ್ಟರಿ	6090-16829
ಹಳೆಚಾಲಿ	36689-39099
ಹೊಸಚಾಲಿ	28599-34599
ಪುತ್ತೂರು	
ಹೊಸತು	32000-40500
ಹಳತು	34000-47500
ಶಿವಮೊಗ್ಗ	
ಬೆಟ್ಟೆ	44599-55319
ಗೊರಬಲು	15099-33389
ಸರಕು	36019-44509
ಕೆಂಪುಗೋಟು	36009-48759
ರಾಶಿ	62009-83996
ಸಿದ್ದಾಪುರ	
ಬಿಳಿಗೋಟು	24799-28099
ಚಾಲಿ	31509-34409
ಕೋಕ	20119-22699
ಕೆಂಪುಗೋಟು	21019-22389
ರಾಶಿ	42099-46299
ತಟ್ಟಿಬೆಟ್ಟೆ	27089-35119
ಶಿರಸಿ	
ಬೆಟ್ಟೆ	26889-39299
ಬಿಳಿಗೋಟು	23199-29719
ಚಾಲಿ	32308-36101
ರಾಶಿ	40339-45609
ಯಲ್ಲಾಪುರ	
ಅಪಿ	56899-60179
ಬಿಳಿಗೋಟು	18099-28960
ಚಾಲಿ	29719-35209
ಕೋಕ	4612-18899
ಕೆಂಪುಗೋಟು	15099-18899
ರಾಶಿ	39619-54599
ತಟ್ಟಿಬೆಟ್ಟೆ	25699-38469

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹12150-16000
ದಾವಣಗೆರೆ	₹8950-8950
ಕೆ.ಆರ್.ಪೇಟೆ	₹10000-11000
ತಿಪಟೂರು	₹16300-17000

ಮುಂಬೈ ಧಾರಣೆ (ಶೇಂಗಾ) 27-09-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1550 (1540)
ಒಂದು ವಾರದ ಡೆಲಿವರಿ	1545 (1535)
ಪಾಮ್ ವಾರದ ಡೆಲಿವರಿ	1268 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1205 (1200)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಚಿನ್ನ 10ಗ್ರಾಂ	₹75,300 (75,350)
ಬೆಳ್ಳಿ ಕೆ.ಜಿ	₹91,400 (92,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

2029ರ ವೇಳೆಗೆ 3.5 ಲಕ್ಷ ಉದ್ಯೋಗ ಸೃಷ್ಟಿ: ಸಚಿವ ಪ್ರಿಯಾಂಕ್ ಖರ್ಗೆ

ಜಿಸಿಸಿ ಕರಡು ನೀತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವು 2029ರ ವೇಳೆಗೆ ಹೊಸದಾಗಿ 500 ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಆಕರ್ಷಿಸುವ ಗುರಿ ಹೊಂದಿದೆ. ಇದರಿಂದ 3.5 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ' ಎಂದು ಐ.ಟಿ ಮತ್ತು ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಶುಕ್ರವಾರ ಕರ್ನಾಟಕದ ಜಿಸಿಸಿ ಕರಡು ನೀತಿ ಬಿಡುಗಡೆಗೊಳಿಸಿದ ಬಳಿಕ ಅವರು ಮಾತನಾಡಿದರು.

'ಜಾಗತಿಕ ಸಾಮರ್ಥ್ಯ ಕೇಂದ್ರಗಳ ಮೂಲಕ ಆರ್ಥಿಕ ಉತ್ಪಾದನೆಯನ್ನು 50 ಬಿಲಿಯನ್ ಡಾಲರ್ (₹4.18 ಲಕ್ಷ ಕೋಟಿ) ಗುರಿ ತಲುಪಲಾಗುವುದು' ಎಂದು ವಿವರಿಸಿದರು.

ಕರ್ನಾಟಕವು ದೇಶದಲ್ಲಿಯೇ ಮೊದಲ ಜಿಸಿಸಿ ನೀತಿ ಜಾರಿಗೆ ಮುಂದಾಗಿದೆ. ಕರಡು ಪ್ರತಿಯು ಸಾರ್ವಜನಿಕರಿಗೆ ಮುಕ್ತವಾಗಿದ್ದು, ಪ್ರತಿಕ್ರಿಯೆ ಸಲ್ಲಿಸಲು ನವೆಂಬರ್ 11ರ ವರೆಗೆ ಕಾಲಾವಕಾಶ ನೀಡಲಾಗಿದೆ. ನಾಗರಿಕರು, ಉದ್ಯಮದ ತಜ್ಞರು, ಸಮುದಾಯ ಸಂಘಟನೆಗಳು ಇಲಾಖೆಯ ವೆಬ್‌ಸೈಟ್‌ನಲ್ಲಿರುವ ಕ್ಯುಆರ್ ಕೋಡ್ ಮೂಲಕ ಪ್ರತಿಕ್ರಿಯೆ, ಸಲಹೆ ನೀಡಬಹುದಾಗಿದೆ ಎಂದರು.

ದೇಶದ ಜಿಸಿಸಿಗಳಲ್ಲಿ ಸುಮಾರು 5.70 ಲಕ್ಷ ವೃತ್ತಿಪರರಿದ್ದಾರೆ. ಈ ಪೈಕಿ ಬೆಂಗಳೂರು ಶೇ 39ರಷ್ಟು ಮಾರುಕಟ್ಟೆ ಪಾಲು ಹೊಂದಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ 570 ಜಿಸಿಸಿಗಳಿವೆ ಎಂದು ವಿವರಿಸಿದರು.

ಮೈಸೂರು, ಶಿವಮೊಗ್ಗ, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ ಮತ್ತು ಕಲಬುರಗಿಯಲ್ಲಿ ನ್ಯಾನೊ ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಐ.ಟಿ ಮತ್ತು ಬಿ.ಟಿ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್ ಅವರು, ಜಿಸಿಸಿ ನೀತಿ ಬಗ್ಗೆ ವಿವರಿಸಿದರು. ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಇದ್ದರು.



ಬೆಂಗಳೂರಿನಲ್ಲಿ ಶುಕ್ರವಾರ ಕರ್ನಾಟಕ ಜಿಸಿಸಿ ಕರಡು ನೀತಿಯನ್ನು ಐ.ಟಿ ಮತ್ತು ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆಗೊಳಿಸಿದರು. ಇಲಾಖೆಯ ಉಪ ಕಾರ್ಯದರ್ಶಿ ರುಚಿ ಬಿಂದಾಲ್, ಕಾರ್ಯದರ್ಶಿ ಏಕರೂಪ್ ಕೌರ್, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಹಾಗೂ ಉದ್ಯಮಿಗಳು ಇದ್ದರು

ಎ.ಐ ಕೌಶಲ ಮಂಡಳಿ ಸ್ಥಾಪನೆ

'ಬೆಂಗಳೂರು ಮತ್ತು ಬೆಂಗಳೂರಿನ ಹೊರವಲಯದಲ್ಲಿ ಮೂರು ಹೊಸ ಟೆಕ್ ಪಾರ್ಕ್ ಸ್ಥಾಪನೆ ಮೂಲಕ ಜಾಗತಿಕ ನಾವೀನ್ಯ ಜಿಲ್ಲೆಗಳ ರಚನೆಗೆ ನಿರ್ಧರಿಸಲಾಗಿದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.


ತಂತ್ರಜ್ಞಾನ ಕ್ಷೇತ್ರದಲ್ಲಿ ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗೆ ₹100 ಕೋಟಿ ಅವಿಷ್ಕಾರ ನಿಧಿ ಸ್ಥಾಪಿಸಲಾಗುವುದು. ಕೃತಕ ಬುದ್ಧಿಮತ್ತೆಗೆ ಉತ್ತೇಜನ ನೀಡಲು ಉತ್ಕೃಷ್ಟತಾ ಕೇಂದ್ರ ಮತ್ತು ಎ.ಐ ಕೌಶಲ ಮಂಡಳಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಶುಕ್ರವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಹೂಡಿಕೆದಾರರು ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ದೇಶೀಯ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 264 ಅಂಶ ಇಳಿಕೆ ಕಂಡು, 85,571 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 37 ಅಂಶ ಇಳಿಕೆ ಕಂಡು 26,178 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಪವರ್ ಗ್ರಿಡ್, ಐಸಿಐಸಿಐ ಬ್ಯಾಂಕ್, ಭಾರ್ತಿ ಏರ್‌ಟೆಲ್, ಎಚ್‌ಡಿಎಫ್‌ಸಿ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಎಲ್ ಆ್ಯಂಡ್ ಟಿ, ಅದಾನಿ ಪೋರ್ಟ್ಸ್ ಮತ್ತು ಅಲ್ಟ್ರಾ ಟೆಕ್ ಸಿಮೆಂಟ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಸನ್ ಫಾರ್ಮಾ, ರಿಲಯನ್ಸ್ ಇಂಡಸ್ಟ್ರೀಸ್, ಟೈಟನ್, ಎಚ್‌ಸಿಎಲ್ ಟೆಕ್ನಾಲಜೀಸ್, ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಕೋಥಾಸ್ ಕಾಫಿಗೆ 75ರ ಸಂಭ್ರಮ

ಬೆಂಗಳೂರು: ಕೋಥಾಸ್ ಕಾಫಿ ಕಂಪನಿಯು 75 ವರ್ಷ ಪೂರ್ಣಗೊಳಿಸಿದ ಪ್ರಯುಕ್ತ ಶುಕ್ರವಾರ ಹೊಸ ಲೋಗೊ ಮತ್ತು ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ.

₹2, ₹3 ಮತ್ತು ₹5 ಬೆಲೆಯ ಇನ್‌ಸ್ಟಂಟ್ ಕಾಫಿ ಸ್ಯಾಷೆಗಳು ಮತ್ತು ಕೋಲ್ಡ್ ಕಾಫಿಗಳ ಶ್ರೇಣಿಗಳನ್ನು ಬಿಡುಗಡೆ ಮಾಡಿದೆ.

'ಕೋಥಾಸ್ ಕಾಫಿಯು ಗ್ರಾಹಕರಿಗೆ ವಿಶಿಷ್ಟ ಬಗೆಯ ಕಾಫಿಯ ಅನುಭವ ನೀಡಲಿದೆ. ಹಲವು ವರ್ಷದಿಂದ ನಾವು ನಮ್ಮ ಮೂಲ ರುಚಿಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಈಗಾಗಲೇ ₹300 ಕೋಟಿಯ ಆದಾಯ ಹೊಂದಿರುವ ಕಂಪನಿಯು ಮುಂದಿನ ಮೂರು ವರ್ಷದಲ್ಲಿ ₹1,000 ಕೋಟಿ ಆದಾಯ ಗಳಿಸುವ ಗುರಿ ಹೊಂದಿದೆ' ಎಂದು ಕೋಥಾಸ್ ಕಾಫಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಿ.ಕೆ. ಶ್ರೀನಾಥನ್ ತಿಳಿಸಿದ್ದಾರೆ.

'ಶೀಘ್ರವೇ, ದುಬೈನಲ್ಲಿ ಕೋಥಾಸ್‌ನ ಮೊದಲ ಅಂತರ-ರಾಷ್ಟ್ರೀಯ ಶಾಖೆ ಆರಂಭವಾಗಲಿದೆ. ದೇಶದಲ್ಲಿ ಅಂಗಡಿಗಳ ಸಂಖ್ಯೆಯನ್ನು 100ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ದೇಶದಾದ್ಯಂತ ಕಾಫಿ ವೆಂಡಿಂಗ್ ಯಂತ್ರಗಳನ್ನು ಅಳವಡಿಸಲಾಗುವುದು' ಎಂದು ಕೋಥಾಸ್ ಕಾಫಿಯ ನಿರ್ದೇಶಕ ಸಿ.ಎಸ್. ನಿತಿನ್ ತಿಳಿಸಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಜಮ್ಮು–ಕಾಶ್ಮೀರ ವಿಚಾರ ಪ್ರಸ್ತಾಪಿಸಿದ ಪಾಕ್

ವಿಶ್ವಸಂಸ್ಥೆ (ಪಿಟಿಐ): ಜಮ್ಮು–ಕಾಶ್ಮೀರದ ಬಗ್ಗೆ ಶುಕ್ರವಾರ ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸಿದ ಪಾಕಿಸ್ತಾನ, '370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಭಾರತ ಮತ್ತೆ ನೀಡಬೇಕು ಮತ್ತು ಈ ವಿಚಾರವನ್ನು ಮಾತುಕತೆಯೊಂದಿಗೆ ಬಗೆಹರಿಸಿ-ಕೊಳ್ಳಬೇಕು' ಎಂದು ಹೇಳಿದೆ.



ಶೆಹಬಾಜ್ ಷರೀಫ್

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 79ನೇ ಅಧಿವೇಶನದಲ್ಲಿ ಮಾತನಾಡಿದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು, 'ಪ್ಯಾಲೆಸ್ಟೀನ್‌ನ ನಾಗರಿಕರಂತೆ ಜಮ್ಮು ಮತ್ತು ಕಾಶ್ಮೀರದ ಜನರು ಹಲವಾರು ವರ್ಷಗಳಿಂದ ತಮ್ಮ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ' ಎಂದು ಹೇಳಿದರು.

'ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿರುವ ಏಕಪಕ್ಷೀಯ ಮತ್ತು ಕಾನೂನುಬಾಹಿರ ನಿರ್ಧಾರವನ್ನು ಭಾರತ ಹಿಂಪಡೆದುಕೊಳ್ಳಬೇಕು' ಎಂದು ಆಗ್ರಹಿಸಿದರು. ಜಮ್ಮು ಮತ್ತು ಕಾಶ್ಮೀರದ ವಿಚಾರವನ್ನು ಪಾಕಿಸ್ತಾನವು ಪದೇ ಪದೇ ವಿಶ್ವಸಂಸ್ಥೆಯ ವಿವಿಧ ವೇದಿಕೆಗಳಲ್ಲಿ ಪ್ರಸ್ತಾಪಿಸುತ್ತಿದೆ. ಜಮ್ಮು, ಕಾಶ್ಮೀರ ಮತ್ತು ಲಡಾಖ್ ಭಾರತದ ಭಾಗ ಆಗಿದ್ದು,ಈ ಬಗ್ಗೆ ಪಾಕಿಸ್ತಾನ ಯೋಚಿಸುವ ಅಗತ್ಯವಿಲ್ಲ ಎಂದು ಭಾರತ ಹಲವು ಬಾರಿ ತಿರುಗೇಟು ನೀಡಿದೆ.

ಎಫ್‌ಕೆಸಿಸಿಐ ಸಭೆಯಲ್ಲಿ ಸಚಿವ ಶಿವಾನಂದ ಪಾಟೀಲ ಹೇಳಿಕೆ

'ಎಪಿಎಂಸಿ ಡಿಜಿಟಲ್ ಶೀಘ್ರ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ನಡೆಯುತ್ತಿರುವ ಎಪಿಎಂಸಿಗಳ ಡಿಜಿಟಲೀಕರಣ ಪ್ರಕ್ರಿಯೆಯು ಶೀಘ್ರವೇ ಮುಕ್ತಾಯಗೊಳ್ಳಲಿದೆ' ಎಂದು ಕೃಷಿ ಮಾರುಕಟ್ಟೆ, ಜವಳಿ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಶುಕ್ರವಾರ ನಡೆದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) 107ನೇ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಪಕ್ಷದ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಲಾಗಿತ್ತು. ಇದಕ್ಕೆ ಪೂರಕವಾಗಿ ಕಾನೂನನ್ನು ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ಎಪಿಎಂಸಿ ವ್ಯವಸ್ಥೆಯಲ್ಲಿ ಹಲವು ಮಂದಿ ಪಾಲುದಾರರಿದ್ದಾರೆ. ಯಾರಿಗೂ ಸಮಸ್ಯೆ ಯಾಗದಂತೆ ಡಿಜಿಟಲೀಕರಣ ವ್ಯವಸ್ಥೆ ಅಳವಡಿಸುವ ಕಾರ್ಯ ನಡೆದಿದೆ. ಇದರಿಂದ ರೈತರು ಮತ್ತು ವರ್ತಕರಿಗೆ ಅನುಕೂಲವಾಗಲಿದೆ ಎಂದರು.

ಕೈಗಾರಿಕಾ ಸಂಸ್ಥೆಯಲ್ಲಿ ಐದು ಸಾವಿರ ಸದಸ್ಯರಿದ್ದು, ರಾಜ್ಯದ ಆರ್ಥಿಕ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ ಎಂದರು.

ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮಾತನಾಡಿ, 'ಬೆಂಗಳೂರು ನಗರವು ಜಾಗತಿಕ ಮಟ್ಟದಲ್ಲಿ ವಿಶೇಷ ಸ್ಥಾನ ಪಡೆದುಕೊಳ್ಳುವಲ್ಲಿ ಎಫ್‌ಕೆಸಿಸಿಐ ಕೊಡುಗೆ ಹೆಚ್ಚಿದೆ' ಎಂದು ಶ್ಲಾಘಿಸಿದರು.

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗಲು ಉತ್ತಮ ವಾತಾವರಣ ಸೃಷ್ಟಿಸುವಲ್ಲಿ ಎಫ್‌ಕೆಸಿಸಿಐ ಪಾತ್ರ ಹಿರಿದು ಎಂದರು.

ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮಾತನಾಡಿ, 'ಎಪಿಎಂಸಿ ಡಿಜಿಟಲೀಕರಣದಿಂದ ಕೈಗಾರಿಕಾ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ' ಎಂದು ಹೇಳಿದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಎಫ್‌ಕೆಸಿಸಿಐ ಸರ್ವ ಸದಸ್ಯರ ಸಭೆಯನ್ನು ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಉದ್ಘಾಟಿಸಿದರು. ಮಹಾಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ, ಹಿರಿಯ ಉಪಾಧ್ಯಕ್ಷೆ ಉಮಾರೆಡ್ಡಿ, ಸದಸ್ಯ ಬಿ.ವಿ. ಗೋಪಾಲರೆಡ್ಡಿ ಇದ್ದರು

ಟೆಕ್ಸ್‌ಟೈಲ್ ಪಾರ್ಕ್‌ಗೆ ₹390 ಕೋಟಿ ಅನುದಾನ

'ಕಲಬುರಗಿಯಲ್ಲಿ ಸ್ಥಾಪಿಸುತ್ತಿರುವ ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್‌ಗೆ ಮೂಲಸೌಕರ್ಯ ಕಲ್ಪಿಸಲು ಸರ್ಕಾರವು ₹390 ಕೋಟಿ ಅನುದಾನ ನೀಡಲಿದೆ' ಎಂದು ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಈಗಾಗಲೇ, ಪಾರ್ಕ್ ನಿರ್ಮಾಣಕ್ಕೆ ಒಂದು ಸಾವಿರ ಎಕರೆ ಭೂಮಿ ಹಂಚಿಕೆ ಮಾಡಿ ಖಾತೆ ಮಾಡಿಕೊಡಲಾಗಿದೆ ಎಂದರು.

ಮೂಲಸೌಕರ್ಯ ಅಭಿವೃದ್ಧಿಗೆ ಈ ಮೊದಲು ₹50 ಕೋಟಿ ಹಂಚಿಕೆ ಮಾಡಲಾಗಿತ್ತು. ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯು ಅನುದಾನ ಬಿಡುಗಡೆಗೆ ಒಪ್ಪಿಗೆ ನೀಡಿದೆ. ಈ ಯೋಜನೆಯಿಂದ ಸುಮಾರು 1.5 ಲಕ್ಷ ಉದ್ಯೋಗ ಸೃಷ್ಟಿಯಾಗಲಿವೆ ಎಂದು ವಿವರಿಸಿದರು.

ರಾಜ್ಯದ ವಿವಿಧೆಡೆ 88 ಉದ್ಯಮ ಸ್ಥಾಪನೆ

₹4,071 ಕೋಟಿ ಹೂಡಿಕೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿವಿಧೆಡೆ ಒಟ್ಟು ₹4,071.11 ಕೋಟಿ ಮೊತ್ತದ 88 ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಒಪ್ಪಿಗೆ ನೀಡಿದೆ. ಇದರಿಂದ 10,585 ಉದ್ಯೋಗಗಳು ಸೃಷ್ಟಿಯಾಗಲಿವೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಪಾಟೀಲ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಮಿತಿಯ ಸಭೆಯಲ್ಲಿ ಕೈಗಾರಿಕೆ ಸ್ಥಾಪನೆಯ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲಾಗಿದೆ.

'ಬೆಂಗಳೂರಿನ ಆನೇಕಲ್‌ನ ವೀರಸಂದ್ರದಲ್ಲಿ ಅರಾಟ್ ಒನ್ ವರ್ಲ್ಡ್ ಪ್ರೈ.ಲಿ. ₹485 ಕೋಟಿ ವೆಚ್ಚದಲ್ಲಿ ಘಟಕ ಆರಂಭಿಸಲಿದೆ. ಈ ಘಟಕದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ 1,000 ಮಂದಿಗೆ ಉದ್ಯೋಗ ಸಿಗಲಿದೆ. ಡೇರಿ ಕ್ಲಾಸಿಕ್ ಐಸ್ ಕ್ರೀಂ ಸಂಸ್ಥೆಯು, ಕಲಬುರ್ಗಿಯ ನಂದೂರು ಕಾಸರಟಗಿ ಕೈಗಾರಿಕಾ ಪ್ರದೇಶದಲ್ಲಿ ₹285 ಕೋಟಿ ವೆಚ್ಚದಲ್ಲಿ ಐಸ್ ಕ್ರೀಂ ಉತ್ಪಾದನಾ ಘಟಕ ಸ್ಥಾಪಿಸಲಿದೆ. ಇಲ್ಲಿ 900 ಜನರಿಗೆ ಉದ್ಯೋಗ ಸಿಗಲಿದೆ' ಎಂದು ಮಾಹಿತಿ ನೀಡಿದರು.

'₹50 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯ 14 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ಒಟ್ಟು ₹2,031.76 ಕೋಟಿ ಹೂಡಿಕೆಯಾಗಲಿದ್ದು, 3,302 ಉದ್ಯೋಗ ಸೃಷ್ಟಿಯಾಗಲಿವೆ. ₹15 ಕೋಟಿಯಿಂದ ₹50 ಕೋಟಿವರೆಗಿನ ಮೊತ್ತದ 68 ಯೋಜನೆಗಳಿಂದ ಒಟ್ಟು ₹1,355.07 ಕೋಟಿ ಹೂಡಿಕೆಯಾಗಲಿದ್ದು, 5,049 ಉದ್ಯೋಗ ಸೃಷ್ಟಿಯಾಗಲಿವೆ' ಎಂದರು.

'ಅತ್ಯಧಿಕ ಬಂಡವಾಳ ಹೂಡಿಕೆಯ ಆರು ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ₹684.28 ಕೋಟಿ ಹೂಡಿಕೆ ಮತ್ತು 2,234 ಉದ್ಯೋಗ ಸೃಷ್ಟಿಯಾಗಲಿವೆ' ಎಂದರು.

ಅರೆಬರೆ ಬಟ್ಟೆ: ಮಹಿಳೆ ವಿರುದ್ಧ ಪ್ರಕರಣ

ಇಂದೋರ್ (ಪಿಟಿಐ): ಪ್ರಸಿದ್ಧ '56 ದುಕಾನ್' ಫುಡ್ ಸ್ಟ್ರೀಟ್‌ನಲ್ಲಿ ಅರೆಬರೆ ಬಟ್ಟೆ ಧರಿಸಿ ಓಡಾಡಿದ ಮಹಿಳೆ ವಿರುದ್ಧ ಮಧ್ಯಪ್ರದೇಶದ ಇಂದೋರ್‌ನಲ್ಲಿ ಪೊಲೀಸರು ಶುಕ್ರವಾರ ಪ್ರಕರಣ ದಾಖಲಿಸಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಮಹಿಳೆ ಧರಿಸಿದ್ದ ಬಟ್ಟೆ ಬಗ್ಗೆ ಸ್ಥಳೀಯರಿಂದ ತೀವ್ರ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 296 (ಸಾರ್ವಜನಿಕ ಪ್ರದೇಶದಲ್ಲಿ ಅಶ್ಲೀಲ ನಡತೆ) ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸ್ಥಳೀಯ ಮಹಿಳಾ ಸಂಘಟನೆಗಳು ಹಾಗೂ ಸಾಮಾಜಿಕ, ಸಾಂಸ್ಕೃತಿಕ ಸಂಘಗಳು ಮಹಿಳೆ ವಿರುದ್ಧ ದೂರು ನೀಡಿದ್ದವು ಎಂದು ತಿಳಿಸಿದ್ದಾರೆ.

ಜಿಎಸ್‌ಟಿ ಪರಿಹಾರ ಸೆಸ್ ಸಚಿವರ ಸಮಿತಿ ರಚನೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಪರಿಹಾರ ಸೆಸ್‌ಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರ ಅಧ್ಯಕ್ಷತೆಯಲ್ಲಿ 10 ಸಚಿವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.



ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಮತ್ತು ಐಷಾರಾಮಿ ಸರಕುಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಡಿ ವಿಧಿಸುವ ಪರಿಹಾರ ಸೆಸ್ ಅವಧಿಯು 2026ರ ಮಾರ್ಚ್‌ಗೆ ಮುಕ್ತಾಯವಾಗಲಿದೆ. ಸಮಿತಿಯು ಈ ಬಗ್ಗೆ ಪರಿಶೀಲನೆ ನಡೆಸಿ ಈ ವರ್ಷದ ಡಿಸೆಂಬರ್ 31ರೊಳಗೆ ವರದಿ ಸಲ್ಲಿಸಲಿದೆ.

ಅಸ್ಸಾಂ, ಛತ್ತೀಸಗಢ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಪಂಜಾಬ್, ತಮಿಳುನಾಡು, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳದ ಸಚಿವರು ಈ ಸಮಿತಿ ಸದಸ್ಯರಾಗಿದ್ದಾರೆ.

'ಪರಿಹಾರ ಸೆಸ್ ಅವಧಿ ಮುಗಿದ ಬಳಿಕ ಯಾವ ರೀತಿ ತೆರಿಗೆ ಹಂಚಿಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆಯೂ ಸಮಿತಿ ಶಿಫಾರಸು ಮಾಡಲಿದೆ' ಎಂದು ಜಿಎಸ್‌ಟಿ ಮಂಡಳಿಯ ಕಾರ್ಯದರ್ಶಿ ತಿಳಿಸಿದ್ದಾರೆ.

ತೆರಿಗೆ ಎಷ್ಟು?: ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಮತ್ತು ಐಷಾರಾಮಿ ಸರಕುಗಳ ಮೇಲೆ ಶೇ 28ರಷ್ಟು ಹಾಗೂ ಅದಕ್ಕೂ ಹೆಚ್ಚು ಜಿಎಸ್‌ಟಿ ವಿಧಿಸಲಾಗುತ್ತದೆ. ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆ ಜಾರಿಗೊಂಡ ವೇಳೆ ರಾಜ್ಯಗಳಿಗೆ ಆಗುವ ವರಮಾನದ ನಷ್ಟವನ್ನು ಐದು ವರ್ಷದವರೆಗೆ ತುಂಬಿಕೊಡುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು.

ಹಾಗಾಗಿ, 2022ರ ಜೂನ್‌ವರೆಗೆ ಜಿಎಸ್‌ಟಿ ಪರಿಹಾರ ವ್ಯವಸ್ಥೆ ಜಾರಿಯಲ್ಲಿತ್ತು. ಬಳಿಕ ಇದನ್ನು 2026ರ ವರೆಗೆ ವಿಸ್ತರಿಸಲಾಗಿದೆ.

ಕೋವಿಡ್‌ನಿಂದಾಗಿ 2021 ಮತ್ತು 2022ರಲ್ಲಿ ವರಮಾನ ಸಂಗ್ರಹದಲ್ಲಿ ಕೊರತೆಯಾಗಿತ್ತು. ಇದನ್ನು ಸರಿದೂಗಿಸಲು ಕೇಂದ್ರವು ₹2.69 ಲಕ್ಷ ಕೋಟಿ ಸಾಲ ಪಡೆದಿದೆ. ಸಾಲದ ಅಸಲು ಮತ್ತು ಬಡ್ಡಿ ಪಾವತಿಸಲು ಈ ವಿಸ್ತರಣೆ ಮಾಡಿತ್ತು.

ಜಪಾನ್: ಶಿಗೆರು ಇಶಿಬಾ ಮುಂದಿನ ಪ್ರಧಾನಿ

ಟೋಕಿಯೊ (ಎಪಿ): ಜಪಾನ್‌ನ ಆಡಳಿತಾರೂಢ ಪಕ್ಷವು ಮಾಜಿ ರಕ್ಷಣಾ ಸಚಿವ ಶಿಗೆರು ಇಶಿಬಾ ಅವರನ್ನು ನಾಯಕನನ್ನಾಗಿ ಶುಕ್ರವಾರ ಆಯ್ಕೆ ಮಾಡಿದ್ದು, ಮುಂದಿನ ವಾರ ಅವರು ಪ್ರಧಾನಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿಯುವ ನಿರೀಕ್ಷೆ ಇದೆ.



ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ನೇತೃತ್ವದ ಮೈತ್ರಿಕೂಟವು ಪ್ರಸ್ತುತ ಸಂಸತ್ತನ್ನು ನಿಯಂತ್ರಿಸುತ್ತಿರುವ ಕಾರಣ, ಪಕ್ಷದ ನಾಯಕತ್ವದ ಗೆಲುವು ಉನ್ನತ ಹುದ್ದೆಗೇರಲು ಅವಕಾಶ ಮಾಡಿಕೊಡಲಿದೆ. ಇಶಿಬಾ ಅವರು ದೇಶದ ಮೊದಲ ಮಹಿಳಾ ಪ್ರಧಾನಿಯಾಗುವ ಕನಸು ಕಾಣುತ್ತಿದ್ದ ಕಟ್ಟಾ ಸಂಪ್ರದಾಯವಾದಿಯಾದ ಸಚಿವೆ ಸನೇ ತಕೈಚಿ ಅವರನ್ನು ಸೋಲಿಸಿದ್ದಾರೆ.

ಭ್ರಷ್ಟಾಚಾರದ ಹಗರಣಗಳಿಂದ ವರ್ಚಸ್ಸು ಕಳೆದುಕೊಂಡಿರುವ, ನಿರ್ಗಮನದ ಹೊಸ್ತಿಲಿನಲ್ಲಿರುವ ಪ್ರಧಾನಿ ಫ್ಯೂಮಿಯೊ ಕಿಶಿಡಾ ಮತ್ತು ಅವರ ಸಂಪುಟ ಸಚಿವರು ಮಂಗಳವಾರ ರಾಜೀನಾಮೆ ನೀಡಲಿದ್ದಾರೆ. ಇಶಿಬಾ ಅವರು ಸಂಸತ್ತಿನ ಮತದಾನದಲ್ಲಿ ಔಪಚಾರಿಕವಾಗಿ ಚುನಾಯಿತರಾದ ನಂತರ, ಹೊಸ ಸಂಪುಟ ರಚನೆ ಮಾಡಲಿದ್ದಾರೆ.

ಚೀನಾ ಗಡಿ: ಭಾರತದ ಫಿರಂಗಿ ದಳದ ಸಾಮರ್ಥ್ಯ ಹೆಚ್ಚಳ

ನವದೆಹಲಿ (ಪಿಟಿಐ): ಚೀನಾ ಗಡಿಯಲ್ಲಿ ನಿಯೋಜನೆಗೊಂಡಿರುವ ಭಾರತೀಯ ಸೇನೆಯ ಫಿರಂಗಿ ದಳವು ಅತ್ಯಾಧುನಿಕ ಯುದ್ಧ ಸಾಮಗ್ರಿಗಳನ್ನು ಹೊಂದುವ ಮೂಲಕ ತನ್ನ ಸಾಮರ್ಥ್ಯ ಹೆಚ್ಚಿಸುತ್ತಿದೆ.

'ಕೆ-9 ವಜ್ರ' ಯುದ್ಧ ಟ್ಯಾಂಕ್‌ಗಳ ಸಂಖ್ಯೆ ಹೆಚ್ಚಿಸುವುದು, ಡ್ರೋನ್‌ಗಳ ನಿಯೋಜನೆ ಮತ್ತು ಕಣ್ಗಾವಲು ವ್ಯವಸ್ಥೆಗೆ ಅತ್ಯಾಧುನಿಕ ಸಲಕರಣೆಗಳ ಬಳಕೆಗೆ ನಿರ್ಧರಿಸಲಾಗಿದೆ.

'ರಾಷ್ಟ್ರೀಯ ಭದ್ರತೆಗೆ ಎದುರಾಗಿರುವ ಸವಾಲುಗಳನ್ನು ಮನಗಂಡು ಫಿರಂಗಿ ದಳದ ಸಾಮರ್ಥ್ಯವನ್ನು ಹೆಚ್ಚಿಸಲು ವಿವಿಧ ಯುದ್ಧ ಸಲಕರಣೆಗಳನ್ನು ಖರೀದಿಸಲಾಗುತ್ತಿದೆ' ಎಂದು ಸೇನೆಯ ಫಿರಂಗಿ ದಳದ ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ಅದೋಷ್ ಕುಮಾರ್ ತಿಳಿಸಿದ್ದಾರೆ.

'ಫಿರಂಗಿ ದಳವನ್ನು ನಾವು ಹಿಂದೆಂದೂ ಕಾಣದಂತಹ ವೇಗದಲ್ಲಿ ಅಧುನೀಕರಣಗೊಳಿಸುತ್ತಿದ್ದೇವೆ' ಎಂದು ಆರ್ಟಿಲರಿ ರೆಜಿಮೆಂಟ್‌ನ (ಫಿರಂಗಿ ದಳ) 198ನೇ ವರ್ಷಾಚರಣೆ ಅಂಗವಾಗಿ ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಸೇನೆಯು ಈಗಾಗಲೇ 100 ರಷ್ಟು ಕೆ-9 ವಜ್ರ ಯುದ್ಧ ಟ್ಯಾಂಕ್‌ಗಳನ್ನು ನಿಯೋಜಿಸಿದ್ದು, ಇನ್ನೂ 100 ಯುದ್ಧ ಟ್ಯಾಂಕ್‌ಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸಾರಂಗ್ ಮತ್ತು ಧನುಷ್ ಸೇರಿದಂತೆ 155 ಎಂಎಂ ಗನ್ ಸಿಸ್ಟಂಗಳನ್ನೂ ಗಡಿ ಭಾಗದಲ್ಲಿ ನಿಯೋಜಿಸಲಾಗಿದೆ' ಎಂದು ಮಾಹಿತಿ ನೀಡಿದರು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯವೂ ಪ್ರಗತಿಯಲ್ಲಿದೆ ಎಂದು ಅವರು ಮಾಹಿತಿ ನೀಡಿದರು. ಹೈಪರ್‌ಸಾನಿಕ್ ಕ್ಷಿಪಣಿಗಳು ಶಬ್ದದ ವೇಗಕ್ಕಿಂತ ಸುಮಾರು ಐದು ಪಟ್ಟು ಅಧಿಕ ವೇಗದಲ್ಲಿ ಸಾಗಬಲ್ಲದು.

ಲೆಬನಾನ್: 'ಹಿಜ್ಬುಲ್ಲಾ ವಿರುದ್ಧ ಭೂ ಕಾರ್ಯಾಚರಣೆಗೆ ಸಿದ್ಧತೆ'

ದಾಳಿ ತೀವ್ರಗೊಳಿಸಿದ ಇಸ್ರೇಲ್

ಬೈರೂತ್, ಲೆಬನಾನ್ (ಎಎಫ್‌ಪಿ/ ರಾಯಿಟರ್ಸ್): ಹಿಜ್ಬುಲ್ಲಾ ವಿರುದ್ಧದ ದಾಳಿಯನ್ನು ಇಸ್ರೇಲ್ ಇನ್ನಷ್ಟು ತೀವ್ರಗೊಳಿಸಿದ್ದು, ಲೆಬನಾನ್‌ನಲ್ಲಿ ಒಂದು ವಾರದಲ್ಲಿ ಮೃತಪಟ್ಟವರ ಸಂಖ್ಯೆ 700ರ ಗಡಿ ದಾಟಿದೆ.

ಅಮೆರಿಕ ಹಾಗೂ ಅದರ ಮಿತ್ರ ರಾಷ್ಟ್ರಗಳು ಮುಂದಿಟ್ಟಿದ್ದ ಕದನ ವಿರಾಮ ಪ್ರಸ್ತಾವವನ್ನು ಇಸ್ರೇಲ್ ಗುರುವಾರ ತಿರಸ್ಕರಿಸಿತ್ತು. ಶುಕ್ರವಾರ ಬೆಳಿಗ್ಗೆ ಹಿಜ್ಬುಲ್ಲಾ ತಾಣಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನೆಯು ದಕ್ಷಿಣ ಲೆಬನಾನ್ ಮೇಲೆ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಹಿಜ್ಬುಲ್ಲಾ, ಹಲವು ರಾಕೆಟ್‌ಗಳನ್ನು ಹಾರಿಸಿದೆ.

'ಇಸ್ರೇಲ್‌ನ 'ಕ್ರೂರ ಕೃತ್ಯ'ಕ್ಕೆ ಪ್ರತ್ಯುತ್ತರವಾಗಿ ಟೈಬೀರಿಯಸ್ ನಗರದ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದೇವೆ' ಎಂದು ಹಿಜ್ಬುಲ್ಲಾ ಸಂಘಟನೆ ಹೇಳಿದೆ.

ಶುಕ್ರವಾರ ಬೆಳಿಗ್ಗೆಯಿಂದ ನಡೆದ ದಾಳಿಯಲ್ಲಿ 25 ಮಂದಿ ಮೃತಪಟ್ಟಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವ ಫಿರಾಸ್ ಅಬಿಯದ್ ಹೇಳಿದ್ದಾರೆ.

ಶುಕ್ರವಾರ ಬೆಳಗಿನ ಜಾವ ದಕ್ಷಿಣ ಲೆಬನಾನ್‌ನ ಶೆಬಾ ಪಟ್ಟಣದ ಮೇಲೆ ನಡೆದ ದಾಳಿಯಲ್ಲಿ ನಾಲ್ವರು ಮಕ್ಕಳೂ ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಮಂದಿ ಬಲಿಯಾಗಿದ್ದಾರೆ ಎಂದು ಅಲ್ಲಿನ ಮೇಯರ್ ಮೊಹಮ್ಮದ್ ಸಲಬ್ ಮಾಹಿತಿ ನೀಡಿದ್ದಾರೆ.

'ಸಾಧ್ಯವಾದಷ್ಟು ಬೇಗ ಲೆಬನಾನ್‌ನಲ್ಲಿ ಭೂ ಕಾರ್ಯಾಚರಣೆ ಆರಂಭಿಸುತ್ತೇವೆ. ಅದಕ್ಕಾಗಿ ಎಲ್ಲ ತಯಾರಿ ನಡೆಯುತ್ತಿದೆ' ಎಂದು ಇಸ್ರೇಲ್ ಸೇನೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಮೂಲಕ ಪೂರ್ಣ ಪ್ರಮಾಣದ ಯುದ್ಧದಲ್ಲಿ ತೊಡಗುವ ಸೂಚನೆ ಕೊಟ್ಟಿದ್ದಾರೆ.

ಟೆಲ್ ಅವಿವ್ ಮೇಲೆ ದಾಳಿ- ಹುಥಿ (ದುಬೈ ವರದಿ): ಇಸ್ರೇಲ್‌ನ ಟೆಲ್ ಅವಿವ್ ಮತ್ತು ಅಶ್ಕೆಲಾನ್ ನಗರಗಳನ್ನು ಗುರಿಯಾಗಿಸಿ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಲಾಗಿದೆ ಎಂದು ಯೆಮೆನ್‌ನ ಇರಾನ್ ಬೆಂಬಲಿತ ಹುಥಿ ಬಂಡುಕೋರರು ಶುಕ್ರವಾರ ಹೇಳಿದ್ದಾರೆ.

'ಗುರಿ ಈಡೇರುವವರೆಗೂ ಕಾರ್ಯಾಚರಣೆ'

ಹಿಜ್ಬುಲ್ಲಾ ತಾಣಗಳ ಮೇಲಿನ ದಾಳಿ ಮುಂದುವರಿಯಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದು, ಹಮಾಸ್ ವಿರುದ್ಧದ ಹೋರಾಟ 'ಗೆಲುವು ಸಾಧಿಸುವವರೆಗೂ' ನಡೆಯಲಿದೆ ಎಂದಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಹಿಜ್ಬುಲ್ಲಾ ಯುದ್ಧದ ಮಾರ್ಗ ಆಯ್ಕೆಮಾಡಿಕೊಂಡರೆ, ಇಸ್ರೇಲ್‌ಗೆ ಯುದ್ಧ ನಡೆಸದೆ ಬೇರೆ ಆಯ್ಕೆಗಳಿಲ್ಲ. ಹಿಜ್ಬುಲ್ಲಾ ಒಡ್ಡಿರುವ ಬೆದರಿಕೆಯನ್ನು ಕಿತ್ತೊಗೆಯುವ ಮತ್ತು ನಮ್ಮ ನಾಗರಿಕರನ್ನು ಅವರ ಮನೆಗಳಿಗೆ ಸುರಕ್ಷಿತವಾಗಿ ಮರಳಿಸುವ ಎಲ್ಲ ಹಕ್ಕು ಇಸ್ರೇಲ್‌ಗೆ ಇದೆ' ಎಂದು ಹೇಳಿದ್ದಾರೆ. 'ಅಂತಿಮ ಗುರಿ ಈಡೇರುವವರೆಗೂ ಲೆಬನಾನ್‌ನಲ್ಲಿ ನಮ್ಮ ಕಾರ್ಯಾಚರಣೆ ಮುಂದುವರಿಯಲಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ಯೆಮನ್ ಕಡೆಯಿಂದ ಬಂದ ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. 'ಗಾಜಾ ಮತ್ತು ಲೆಬನಾನ್ ಮೇಲಿನ ದಾಳಿಯನ್ನು ನಿಲ್ಲಿಸುವವರೆಗೂ ನಾವು ಇಸ್ರೇಲ್ ವಿರುದ್ಧ ಹೋರಾಟ ಮುಂದುವರಿಸುತ್ತೇವೆ' ಎಂದು ಹುಥಿ ಸೇನಾ ವಕ್ತಾರ ಯಹ್ಯಾ ಸರೀ ತಿಳಿಸಿದ್ದಾರೆ.

ಸಿರಿಯಾದ ಐವರು ಸೈನಿಕರು ಬಲಿ: (ಡಮಾಸ್ಕಸ್ ವರದಿ): ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಲೆಬನಾನ್ ಗಡಿ ಸಮೀಪ ಸಿರಿಯಾದ ಐವರು ಯೋಧರು ಮೃತಪಟ್ಟಿದ್ದಾರೆ ಎಂದು ಸನಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಸಿರಿಯಾ–ಲೆಬನಾನ್ ಗಡಿ ಸಮೀಪದ ಕಫಾರ್ ಯಬೂಸ್ ಎಂಬಲ್ಲಿ ನಿಯೋಜಿಸಲಾಗಿದ್ದ ಸೇನಾ ತುಕಡಿಯ ಮೇಲೆ ಇಸ್ರೇಲ್ ಸೇನೆ ದಾಳಿ ನಡೆಸಿದೆ ಎಂದು ವರದಿ ತಿಳಿಸಿದೆ.

ಒಂಬತ್ತು ಸದಸ್ಯರ ವಿಶೇಷ ತನಿಖಾ ತಂಡಕ್ಕೆ ಐಜಿಪಿ ಸರ್ವಶ್ರೇಷ್ಠ ತ್ರಿಪಾಠಿ ನೇತೃತ್ವ


ಲಾಡು ವಿವಾದ: ಎಸ್‌ಐಟಿ ರಚನೆ

ಅಮರಾವತಿ (ಪಿಟಿಐ): ತಿರುಪತಿ ಪ್ರಸಾದವಾದ ಲಾಡುಗಳನ್ನು ಸಿದ್ಧಪಡಿಸಲು ಪೂರೈಕೆಯಾಗಿದ್ದ ಕಲಬೆರಕೆ ತುಪ್ಪ ವಿವಾದ ಕುರಿತು ತನಿಖೆ ನಡೆಸಲು ಆಂಧ್ರ ಪ್ರದೇಶ ಸರ್ಕಾರ ಒಂಬತ್ತು ಸದಸ್ಯರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

ಗುಂಟೂರು ವಲಯದ ಐಜಿಪಿ ಸರ್ವಶ್ರೇಷ್ಠ ತ್ರಿಪಾಠಿ ಅವರನ್ನು ಎಸ್‌ಐಟಿ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ರಾಜ್ಯದಲ್ಲಿ ಹಿಂದಿದ್ದ ವೈಎಸ್‌ಆರ್‌ಸಿಪಿ ಸರ್ಕಾರವು ತಿರುಪತಿಯ ಪ್ರಸಾದ ತಯಾರಿಕೆಗೆ ಅಗ್ಗದ ಬೆಲೆಯ ಕಲಬೆರಕೆ ತುಪ್ಪ ಖರೀದಿಸುವ ಮೂಲಕ ಟಿಟಿಡಿಯ ಪಾವಿತ್ರ್ಯಕ್ಕೆ ಧಕ್ಕೆ ತಂದಿದೆ ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಇತ್ತೀಚೆಗೆ ಎನ್‌ಡಿಎ ಶಾಸಕಾಂಗ ಪಕ್ಷದ ಸಭೆಯಲ್ಲಿ ಆರೋಪ ಮಾಡಿದ್ದರು.

ಅದಕ್ಕೆ ಪೂರಕವಾಗಿ, ಟಿಟಿಡಿಗೆ ಪೂರೈಕೆಯಾಗಿದ್ದ ತುಪ್ಪದಲ್ಲಿ ಹಂದಿ ಮತ್ತು ಇತರ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿರುವ ಕುರಿತು ಗುಜರಾತ್‌ನ ಎನ್‌ಡಿಡಿಬಿ ಪ್ರಯೋಗಾಲಯದ



ವರದಿಯನ್ನು ಟಿಡಿಪಿ ಪ್ರಕಟಿಸಿತ್ತು.

ತುಪ್ಪದ ಕಲಬೆರಕೆಯಿಂದ ತಿರುಪತಿಯ ಲಾಡುವಿನ ಪಾವಿತ್ರ್ಯಕ್ಕೆ ಮತ್ತು ಕೋಟ್ಯಂತರ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗಿದೆ ಎಂಬ ಆರೋಪ ವ್ಯಕ್ತವಾಗಿತ್ತು.

ವೈಎಸ್‌ಆರ್‌ಸಿಪಿ ವಿರೋಧ: ಮುಖ್ಯಮಂತ್ರಿ ಅಡಿಯಲ್ಲಿ ಕೆಲಸ ನಿರ್ವಹಿಸುವ ಯಾವುದೇ ಏಜೆನ್ಸಿ ನಡೆಸುವ ತನಿಖೆ ಸಮರ್ಪಕವಾಗಿ ಇರುವುದಿಲ್ಲ ಎಂದು ಪ್ರತಿಕ್ರಿಯಿಸಿರುವ ವೈಎಸ್‌ಆರ್‌ಸಿಪಿ, 'ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ಆಗಬೇಕು' ಎಂದು ಒತ್ತಾಯಿಸಿದೆ.

'ಪ್ರಸಾದ ತಯಾರಿಕೆ: ಸುಧಾರಣೆ ಆಗಬೇಕು'

ಲಖನೌ (ಪಿಟಿಐ): ತಿರುಪತಿ ಲಾಡುವಿನ ಕಲಬೆರಕೆ ವಿವಾದದ ಬೆನ್ನಲ್ಲೇ, ಅಯೋಧ್ಯೆ, ಮಥುರಾ ಸೇರಿದಂತೆ ಉತ್ತರ ಪ್ರದೇಶದ ಹಲವು ದೇವಾಲಯಗಳ ಪ್ರತಿನಿಧಿಗಳು, ಪ್ರಸಾದ ಸಿದ್ಧಪಡಿಸುವ ಮತ್ತು ವಿತರಿಸುವ ಕಾರ್ಯದಲ್ಲಿ ಸುಧಾರಣೆಗಳನ್ನು ತರಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

'ಹೊರಗಿನ ಏಜೆನ್ಸಿಗಳ ಮೂಲಕ ಪ್ರಸಾದ ಸಿದ್ಧಪಡಿಸುವ ಕಾರ್ಯವನ್ನು ಸಂಪೂರ್ಣವಾಗಿ ನಿಷೇಧಿಸಬೇಕು' ಎಂದು ಅಯೋಧ್ಯೆಯ ರಾಮ ಜನ್ಮಭೂಮಿ ದೇವಾಲಯದ ಪ್ರಧಾನ ಅರ್ಚಕ ಸತ್ಯೇಂದ್ರ ದಾಸ್ ಒತ್ತಾಯಿಸಿದ್ದಾರೆ.

ದೇವಾಲಯಗಳಲ್ಲಿ ಬಳಸುವ ತುಪ್ಪದ ಶುದ್ಧತೆ ಕುರಿತು ಕಾಳಜಿ ವ್ಯಕ್ತಪಡಿಸಿರುವ ಅವರು, 'ದೇವಾಲಯಗಳ ಅರ್ಚಕರ ನಿಗಾದಲ್ಲಿಯೇ ಎಲ್ಲ ಬಗೆಯ ಪ್ರಸಾದ ಸಿದ್ಧಪಡಿಸುವ ಕಾರ್ಯ ನಡೆಯಬೇಕು' ಎಂದು ಹೇಳಿದ್ದಾರೆ.

'ದೇಶದಾದ್ಯಂತ ಮಾರಾಟವಾಗುತ್ತಿರುವ ಎಣ್ಣೆ ಮತ್ತು ತುಪ್ಪದ ಗುಣಮಟ್ಟವನ್ನೂ ಕಟ್ಟುನಿಟ್ಟಾಗಿ ಪರಿಶೀಲಿಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ. ದೇವಾಲಯಗಳ ಪ್ರಸಾದದಲ್ಲಿ ಅನುಚಿತವಾದ ಪದಾರ್ಥಗಳನ್ನು ಮಿಶ್ರಣಗೊಳಿಸುವುದರ ಹಿಂದೆ ಅಂತರರಾಷ್ಟ್ರೀಯ ಪಿತೂರಿ ಇದ್ದಂತಿದೆ ಎಂದು ಅವರು ಆರೋಪಿಸಿದ್ದಾರೆ.

ಸಾತ್ವಿಕ ಪ್ರಸಾದ: ಪ್ರಾಚೀನ ಪಾಕ ಶೈಲಿಯಲ್ಲಿ ಪ್ರಸಾದ ಸಿದ್ಧಪಡಿಸುವ ವಿಧಾನಕ್ಕೆ ಮರಳುವ ನಿರ್ಧಾರವನ್ನು ಮಥುರಾದ ರಕ್ಷಾ ಸಂಘ ಪ್ರಕಟಿಸಿದೆ. ಸಿಹಿ ತಿನಿಸುಗಳ ಬದಲಿಗೆ, ಹಣ್ಣು ಮತ್ತು ಇತರ ನೈಸರ್ಗಿಕ ಪದಾರ್ಥಗಳನ್ನು ಬಳಸಿ ಪ್ರಸಾದ ಸಿದ್ಧಪಡಿಸಲಾಗುವುದು ಎಂದು ಅದು ಹೇಳಿದೆ.

ಶುದ್ಧ, ಸಾತ್ವಿಕ ಪ್ರಸಾದವನ್ನು ಸಿದ್ಧಪಡಿಸುವ ಸಾಂಪ್ರದಾಯಿಕ ಆಚರಣೆಗಳಿಗೆ ಮರಳಲು ಧಾರ್ಮಿಕ ಮುಖಂಡರು ಒಮ್ಮತ ಸೂಚಿಸಿದ್ದಾರೆ ಎಂದು ಸಂಘದ ರಾಷ್ಟ್ರೀಯ ಅಧ್ಯಕ್ಷ ಸೌರಭ್ ಗೌರ್ ಪ್ರತಿಕ್ರಿಯಿಸಿದ್ದಾರೆ.

ಜಗನ್ ತಿರುಪತಿ ಪ್ರವಾಸ ರದ್ದು



ತಿರುಪತಿಯ ವೆಂಕಟೇಶ್ವರ ದೇವಾಲಯಕ್ಕೆ ಭೇಟಿ ನೀಡುವ ತನ್ನ ಕಾರ್ಯಕ್ರಮವನ್ನು ವೈಎಸ್‌ಆರ್‌ಸಿಪಿ ಮುಖ್ಯಸ್ಥ ವೈ.ಎಸ್.ಜಗನ್ ಮೋಹನ್ ರೆಡ್ಡಿ ರದ್ದುಗೊಳಿಸಿದ್ದಾರೆ ಎಂದು ಅವರ ಸಮೀಪವರ್ತಿಗಳು ತಿಳಿಸಿದ್ದಾರೆ.

ಪ್ರವಾಸ ರದ್ದುಪಡಿಸಿದ್ದಕ್ಕೆ ರೆಡ್ಡಿ ಅವರು ಯಾವುದೇ ಕಾರಣ ತಿಳಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಆದರೆ, ದೇವಾಲಯ ಪ್ರವೇಶಕ್ಕೂ ಮುನ್ನ ಜಗನ್ ಅವರು ತಮ್ಮ ಶ್ರದ್ಧೆಯನ್ನು ಘೋಷಿಸಬೇಕು ಎಂದು ಎನ್‌ಡಿಎ ನಾಯಕರು ಆಗ್ರಹಿಸಿದ ಬೆನ್ನಲ್ಲೇ ಜಗನ್ ಪ್ರವಾಸ ರದ್ದಾಗಿದೆ.

ಶಾಲೆಯ ಏಳ್ಗೆಗಾಗಿ ವಿದ್ಯಾರ್ಥಿ ಬಲಿ–ಐವರ ಬಂಧನ

ಆಗ್ರಾ (ಪಿಟಿಐ): ಶಾಲೆಯಲ್ಲಿ ಮತ್ತಷ್ಟು ಸಮೃದ್ಧಿ ಉಂಟಾಗಲಿ ಎಂದು ಶಾಲೆಯ ಮಾಲೀಕ, ಮತ್ತಿತರು ಸೇರಿ 11 ವರ್ಷದ ಬಾಲಕನನ್ನು ಬಲಿ ನೀಡಿರುವ ಘಟನೆ ಉತ್ತರ ಪ್ರದೇಶದ ಹಾಥರಸ್‌ನಲ್ಲಿ ನಡೆದಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ಪ್ರಕರಣ ಸಂಬಂಧ ಶಾಲೆಯ ಮಾಲೀಕ, ನಿರ್ದೇಶಕ, ಪ್ರಾಂಶುಪಾಲ ಮತ್ತು ಇಬ್ಬರು ಶಿಕ್ಷಕರನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಮೃತ ವಿದ್ಯಾರ್ಥಿಯನ್ನು ಕೃತಾರ್ಥ್ (11) ಎಂದು ಗುರುತಿಸಲಾಗಿದೆ.

ಎರಡನೇ ತರಗತಿ ವಿದ್ಯಾರ್ಥಿಯನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿರುವುದು ಮರಣೋತ್ತರ ಪರೀಕ್ಷೆಯಲ್ಲಿ ಪತ್ತೆಯಾಗಿದೆ.

'ಡಿಎಲ್ ಪಬ್ಲಿಕ್ ಶಾಲೆ ಮಾಲೀಕ ಜಸೋಧನ್ ಸಿಂಗ್ ಅವರಿಗೆ 'ಮಾಟ, ಮಂತ್ರ'ದಲ್ಲಿ ನಂಬಿಕೆ ಇದ್ದು, ಶಾಲೆ ಮತ್ತು ಕುಟುಂಬದ ಏಳ್ಗೆಗಾಗಿ ಮಗುವೊಂದನ್ನು ಬಲಿ ನೀಡಬೇಕೆಂದು ತಮ್ಮ ಮಗ, ಶಾಲೆಯ ನಿರ್ದೇಶಕ ದಿನೇಶ್ ಬಘೇಲ್‌ಗೆ ತಿಳಿಸಿದ್ದರು. ಸೆಪ್ಟೆಂಬರ್ 23ರಂದು ಶಾಲೆಯ ಹಾಸ್ಟೆಲ್‌ನಿಂದ ವಿದ್ಯಾರ್ಥಿಯನ್ನು ಶಿಕ್ಷಕ ರಾಮ್‌ಪ್ರಕಾಶ್ ಸೋಲಂಕಿ, ದಿನೇಶ್ ಬಘೇಲ್ ಮತ್ತು ಜಸೋಧನ್ ಸಿಂಗ್ ಅಪಹರಿಸಿದ್ದರು. ಬಲಿ ಕೊಡಲು ನಿರ್ಧರಿಸಿದ್ದ ಸ್ಥಳದಲ್ಲಿ ಪ್ರಾಂಶುಪಾಲ ಲಕ್ಷ್ಮಣ್ ಸಿಂಗ್ ಮತ್ತು ಶಿಕ್ಷಕ ವೀರಪಾಲ್ ಸಿಂಗ್ ಕಾವಲು ಕಾಯುತ್ತಿದ್ದರು. ಆದರೆ ಬಾಲಕ ನಿದ್ದೆಯಿಂದ ಎಚ್ಚರಗೊಂಡು ಅಳಲು ಪ್ರಾರಂಭಿಸಿದ. ನಂತರ ಆತನನ್ನು ಉಸಿರುಗಟ್ಟಿಸಿ ಹತ್ಯೆ ಮಾಡಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕುಮಾರ್ ಸಿಂಗ್ ಮಾಹಿತಿ ನೀಡಿದರು

ಕೃತಾರ್ಥ್‌ನ ಆರೋಗ್ಯ ಸರಿ ಇಲ್ಲದ ಕಾರಣ ಬಘೇಲ್ ಅವರ ಕಾರಿನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿದೆ ಎಂದು ಪೋಷಕರಿಗೆ ಆರೋಪಿಗಳು ಮಾಹಿತಿ ನೀಡಿದ್ದರು. ಬಾಲಕನ ಕುಟುಂಬಸ್ಥರೊಬ್ಬರು ಕಾರು ಅಡ್ಡಗಟ್ಟಿ, ಬಾಲಕ ಮೃತಪಟ್ಟಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು. ಮರಣೋತ್ತರ ವರದಿಯಲ್ಲಿ ಆರೋಪಿಗಳ ಕೃತ್ಯ ಬಯಲಾಗಿದೆ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಶ್ರೇಯಾಂಸ್ ಕುಮಾರ್ ಐಎನ್‌ಎಸ್ ಅಧ್ಯಕ್ಷ

ನವದೆಹಲಿ (ಪಿಟಿಐ): ಮಲಯಾಳ ದಿನಪತ್ರಿಕೆ 'ಮಾತೃಭೂಮಿ'ಯ ಎಂ.ವಿ.ಶ್ರೇಯಾಂಸ್ ಕುಮಾರ್ ಅವರು ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿಯ (ಐಎನ್‌ಎಸ್) ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಡೆಪ್ಯುಟಿ ಪ್ರೆಸಿಡೆಂಟ್ ಆಗಿ ವಿವೇಕ್ ಗುಪ್ತಾ (ಸನ್ಮಾರ್ಗ್), ಉಪಾಧ್ಯಕ್ಷರಾಗಿ ಕರಣ್ ರಾಜೇಂದ್ರ (ಲೋಕಮತ) ಮತ್ತು ಗೌರವ ಖಜಾಂಚಿಯಾಗಿ ತನ್ಮಯ್ ಮಾಹೇಶ್ವರಿ (ಅಮರ್ ಉಜಾಲ) ಅವರು ಆಯ್ಕೆಯಾದರು. ವಿಡಿಯೊ ಕಾನ್ಫರೆನ್ಸ್ ಮೂಲಕ ಶುಕ್ರವಾರ ನಡೆದ ಸಂಸ್ಥೆಯ 85ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಕೆ.ಎನ್.ತಿಲಕ್ ಕುಮಾರ್ (ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಸಮೂಹದ ಮಾತೃಸಂಸ್ಥೆಯಾದ ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ), ಎಸ್.ಬಾಲ ಸುಬ್ರಮಣ್ಯನ್ ಆದಿತ್ಯನ್ (ಡೈಲಿ ತಂತಿ) ಮತ್ತು ವಿವೇಕ್ ಗೋಯೆಂಕಾ (ದಿ ಇಂಡಿಯನ್ ಎಕ್ಸ್‌ಪ್ರೆಸ್) ಸೇರಿದಂತೆ 41 ಮಂದಿಯನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.

6 ಸಾವಿರ ವಿಶೇಷ ರೈಲುಗಳ ಸಂಚಾರ



ನವದೆಹಲಿ (ಪಿಟಿಐ): ಮುಂಬರುವ ಹಬ್ಬಗಳ ಸಂದರ್ಭದಲ್ಲಿ ಜನದಟ್ಟಣೆ ಉಂಟಾಗುವ ಸಾಧ್ಯತೆ ಇರುವ ಕಾರಣ ದೇಶದಾದ್ಯಂತ ಒಟ್ಟು 6,000 ವಿಶೇಷ ರೈಲುಗಳ ಸಂಚಾರಕ್ಕೆ ಭಾರತೀಯ ರೈಲ್ವೆ ವ್ಯವಸ್ಥೆ ಮಾಡಿದ್ದು ಇದರಿಂದ ಸುಮಾರು 1 ಕೋಟಿ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, 'ದುರ್ಗಾ ಪೂಜೆ, ದೀಪಾವಳಿ ಹಾಗೂ ಛತ್ ಹಬ್ಬಗಳ ಸಂದರ್ಭದಲ್ಲಿ ದೇಶದ ಅನೇಕ ಕಡೆಗಳಿಂದ ತಮ್ಮ ಊರುಗಳಿಗೆ ತೆರಳುವ ಜನರಿಗೆ ಅನುಕೂಲ ಕಲ್ಪಿಸಲು ಹಾಗೂ ದಟ್ಟಣೆ ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಪ್ರಯಾಣಿಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ 108 ರೈಲುಗಳಿಗೆ ಹೆಚ್ಚುವರಿಯಾಗಿ ಸುಮಾರು 12,500 ಬೋಗಿಗಳ ವ್ಯವಸ್ಥೆ ಮಾಡಲಾಗಿದೆ' ಎಂದರು.

ಕೇರಳ: ಎಂಪಾಕ್ಸ್ 2ನೇ ಪ್ರಕರಣ ದೃಢ

ತಿರುವನಂತಪುರ: ಕೇರಳದಲ್ಲಿ ಎಂಪಾಕ್ಸ್‌ನ ಎರಡನೇ ಪ್ರಕರಣ ವರದಿಯಾಗಿದ್ದು, ಸಂಯುಕ್ತ ಅರಬ್ ಸಂಸ್ಥಾನದಿಂದ (ಯುಎಇ) ವಾಪಸಾದ ವ್ಯಕ್ತಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

ಸೋಂಕಿತ ವ್ಯಕ್ತಿಯನ್ನು ಕೊಚ್ಚಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. 26 ವರ್ಷದ ಸೋಂಕಿತ ವ್ಯಕ್ತಿಯನ್ನು ವಿಮಾನ ನಿಲ್ದಾಣದಲ್ಲಿ ತಪಾಸಣೆ ಮಾಡುವಾಗ ರೋಗಲಕ್ಷಣಗಳು ಕಂಡುಬಂದವು. ನಂತರ ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ರೈಲಿನ ಮೇಲೆ ಕಲ್ಲು ತೂರಾಟ

ಸಮಸ್ತಿಪುರ (ಬಿಹಾರ) (ಪಿಟಿಐ): ಜಯನಗರ-ನವದೆಹಲಿ ನಡುವೆ ಸಂಚರಿಸುವ ಸ್ವತಂತ್ರ ಸೇನಾನಿ ಎಕ್ಸ್‌ಪ್ರೆಸ್ ಮೇಲೆ ಬಿಹಾರದ ಸಮಸ್ತಿಪುರ ರೈಲು ನಿಲ್ದಾಣದ ಬಳಿ ಅಪರಿಚಿತ ವ್ಯಕ್ತಿಗಳು ಕಲ್ಲು ತೂರಾಟ ನಡೆಸಿದ್ದಾರೆ ಎಂದು ಪೂರ್ವ ಕೇಂದ್ರ ರೈಲ್ವೆ (ಇಸಿಆರ್) ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಗುರುವಾರ ರಾತ್ರಿ 9.50ರ ಸುಮಾರಿಗೆ ರೈಲು ನಿಲ್ದಾಣದ ಹೊರ ಸಿಗ್ನಲ್ ತಲುಪಿದಾಗ ಈ ಘಟನೆ ನಡೆದಿದೆ.

ಸಿಬಿಐ ತನಿಖೆ: ಕಲ್ಕತ್ತ ಹೈಕೋರ್ಟ್ ಆದೇಶ ರದ್ದುಪಡಿಸಿದ 'ಸುಪ್ರೀಂ'

ಪತ್ರಗಳನ್ನೇ ಆಧರಿಸಿ ಆದೇಶಿಸುವಂತಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಬಂಧಪಟ್ಟ ಸಚಿವರಿಗೆ ಪತ್ರಗಳನ್ನು ಬರೆಯಲಾಗಿದೆ ಎಂದ ಮಾತ್ರಕ್ಕೆ ಅವುಗಳನ್ನೇ ಆಧಾರವನ್ನಾಗಿಟ್ಟುಕೊಂಡು ಪ್ರಕರಣವೊಂದರ ಕುರಿತು ಸಿಬಿಐ ತನಿಖೆಗೆ ಆದೇಶಿಸಲು, ಹೈಕೋರ್ಟ್ ತನಗಿರುವ ಅಧಿಕಾರ ಚಲಾಯಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪ್ರಕರಣವೊಂದರ ಕುರಿತು ರಾಜ್ಯ ಪೊಲೀಸರು ನಡೆಸುವ ತನಿಖೆ ನಿಷ್ಪಕ್ಷಪಾತದಿಂದ ಕೂಡಿರುವುದಿಲ್ಲ ಎಂದು ಹೈಕೋರ್ಟ್ ಭಾವಿಸಿದಲ್ಲಿ, ಅದನ್ನು ಸಮರ್ಥಿಸುವ ಕಾರಣಗಳನ್ನು ದಾಖಲಿಸಿ, ನಂತರ ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಹೇಳಿದೆ.

ಪಶ್ಚಿಮ ಬಂಗಾಳದ ಗೋರ್ಖಾ ಪ್ರಾದೇಶಿಕ ಆಡಳಿತವು, ಗೌರವ ಶಿಕ್ಷಕರ ಕಾಯಮಾತಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಉಸ್ತುವಾರಿ ಸಚಿವರಿಗೆ ಪತ್ರಗಳನ್ನು ಬರೆಯಲಾಗಿತ್ತು. ಈ ಪತ್ರಗಳ ಆಧಾರದಲ್ಲಿ, ಎಸ್‌ಐಟಿಯಿಂದ ತನಿಖೆ ನಡೆಸುವಂತೆ ಸಿಬಿಐಗೆ ಸೂಚಿಸಿ ಕಲ್ಕತ್ತ ಹೈಕೋರ್ಟ್ ಕಳೆದ ಏಪ್ರಿಲ್ 19ರಂದು ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠವು ಅರ್ಜಿ ವಿಚಾರಣೆ ನಡೆಸಿ, ಹೈಕೋರ್ಟ್ ಅದೇಶವನ್ನು ರದ್ದುಪಡಿಸಿದೆ.

'ಯಾವುದೇ ಪ್ರಕರಣ ಕುರಿತ ತನಿಖೆಯನ್ನು ಸಿಬಿಐಗೆ ವಹಿಸಲು, ಸಂವಿಧಾನದ 226ನೇ ವಿಧಿಯಡಿ ದತ್ತವಾದ ಅಧಿಕಾರ ಚಲಾಯಿಸಲು ಹೈಕೋರ್ಟ್‌ಗೆ ಅವಕಾಶ ಇದೆ ಎಂಬುದರಲ್ಲಿ ಸಂಶಯ ಇಲ್ಲ. ಆದರೆ, ಇಂತಹ ಆದೇಶ ಹೊರಡಿಸುವ ಮುನ್ನ, ರಾಜ್ಯ ಪೊಲೀಸರು ನಡೆಸುವ ತನಿಖೆ ಯಾಕೆ ತಾರತಮ್ಯದಿಂದ ಕೂಡಿದೆ ಅಥವಾ ನ್ಯಾಯಯುತವಾಗಿಲ್ಲ ಎಂಬುದನ್ನು ವಿಶ್ಲೇಷಿಸಬೇಕು' ಎಂದು ಪೀಠ ಹೇಳಿದೆ.

'ಈ ಪ್ರಕರಣ ಕುರಿತು ರಾಜ್ಯ ಪೊಲೀಸರು ನಡೆಸುತ್ತಿರುವ ತನಿಖೆ ಸಮರ್ಪಕವಾಗಿಲ್ಲ ಎಂಬ ದೂರುಗಳು ಇರಲಿಲ್ಲ. ಆದಾಗ್ಯೂ, ಸಿಬಿಐನಿಂದ ತನಿಖೆ ನಡೆಸುವುದು ಸೂಕ್ತ ಎಂದು ತನಗೆ ಅನಿಸಿದ್ದೇಕೆ ಎಂಬ ಬಗ್ಗೆ ಹೈಕೋರ್ಟ್ ಏಕಸದಸ್ಯ ಪೀಠದಲ್ಲಿದ್ದ ನ್ಯಾಯಮೂರ್ತಿ ಹೇಳಬೇಕಿತ್ತು.

ಈ ಆದೇಶದ ವಿಚಾರದಲ್ಲಿ ತಾನು ಮಧ್ಯಪ್ರವೇಶಿಸುವುದು ಅಗತ್ಯವಾಗಿತ್ತು ಎಂದು ಹೈಕೋರ್ಟ್‌ನ ವಿಭಾಗೀಯ ಪೀಠವೂ ಭಾವಿಸಲಿಲ್ಲ. ಅಪರೂಪದ ಪ್ರಕರಣಗಳಲ್ಲಿ ಮಾತ್ರ, ತನಿಖೆಯನ್ನು ಸಿಬಿಐಗೆ ವಹಿಸಲು ಹೈಕೋರ್ಟ್ ತನ್ನ ಅಧಿಕಾರ ಚಲಾಯಿಸಬೇಕು ಎಂಬುದಾಗಿ ಸುಪ್ರೀಂ ಕೋರ್ಟ್ ಹೇಳುತ್ತಲೇ ಬಂದಿದೆ ಎಂದು ಪೀಠ ಹೇಳಿದೆ.

ಮತಾಂತರ: ಅಲಹಾಬಾದ್ ಹೈಕೋರ್ಟ್ ಉಲ್ಲೇಖ ತೆಗೆದುಹಾಕಿದ 'ಸುಪ್ರೀಂ'

ಧಾರ್ಮಿಕ ಸಮಾವೇಶಗಳಲ್ಲಿ ಮತಾಂತರ ನಿಲ್ಲದೇ ಹೋದರೆ ಈ ದೇಶದ ಬಹುಸಂಖ್ಯಾತರು ಒಂದು ದಿನ ಅಲ್ಪಸಂಖ್ಯಾತರಾಗುತ್ತಾರೆ ಎಂದು ಅಲಹಾಬಾದ್ ಹೈಕೋರ್ಟ್ ಉಲ್ಲೇಖ ಮಾಡಿದ್ದನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಕಡತದಿಂದ ತೆಗೆದುಹಾಕಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು ಆರೋಪಿಯೊಬ್ಬರಿಗೆ ಜಾಮೀನು ಮಂಜೂರು ಮಾಡಿ, ಈ ಅಭಿಪ್ರಾಯ ವ್ಯಕ್ತಪಡಿಸಿತು. ಆರೋಪಿ ವಿರುದ್ಧ ಉತ್ತರ ಪ್ರದೇಶ ಕಾನೂನುಬಾಹಿರ ಮತಾಂತರ ನಿಷೇಧ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.



'ಹೈಕೋರ್ಟ್‌ನ ಈ ಅಭಿಪ್ರಾಯಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ. ಇದು ಪ್ರಕರಣದ ವಿಲೇವಾರಿಗೂ ಅಡ್ಡಿಯಾಗುವುದಿಲ್ಲ. ಹಾಗೆಯೇ ಹೈಕೋರ್ಟ್ ಅಥವಾ ಯಾವುದೇ ಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಅಲಹಾಬಾದ್ ಹೈಕೋರ್ಟ್‌ನ ಈ ಅಭಿಪ್ರಾಯವನ್ನು ಉಲ್ಲೇಖಿಸುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಸೂಚಿಸಿತು.

ಆರೋಪಿ ಶಿಂದೆ ಶವಸಂಸ್ಕಾರಕ್ಕೆ ಜಾಗ ಗುರುತಿಸಲು ನಿರ್ದೇಶನ

ಮುಂಬೈ (ಪಿಟಿಐ): ಬದ್ಲಾಪುರ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಅಕ್ಷಯ್ ಶಿಂದೆ ಶವ ಹೂಳುವುದಕ್ಕಾಗಿ ಪ್ರತ್ಯೇಕ ಸ್ಥಳವೊಂದನ್ನು ಗುರುತಿಸುವಂತೆ ಪೊಲೀಸರಿಗೆ ಬಾಂಬೆ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಸ್ಥಳ ಗುರುತಿಸಿದ ನಂತರ, ಅದರ ಕುರಿತು ಶಿಂದೆ ಕುಟುಂಬಕ್ಕೆ ಮಾಹಿತಿ ನೀಡಬೇಕು ಎಂದು ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ–ಡೇರೆ ಹಾಗೂ ಎಂ.ಎಂ.ಸಥಾಯೆ ಅವರಿದ್ದ ವಿಭಾಗೀಯ ನ್ಯಾಯಪೀಠ ಹೇಳಿದೆ.

ಲೈಂಗಿಕ ಪ್ರಕರಣದ ಆರೋಪಿ ಅಕ್ಷಯ್ ಶಿಂದೆ, ಪೊಲೀಸ್ ಶೂಟೌಟ್‌ನಲ್ಲಿ ಕೊಲೆಯಾಗಿದ್ದು, ಮಗನ ಅಂತ್ಯಕ್ರಿಯೆಗೆ ಜಾಗ ಒದಗಿಸುವಂತೆ ಕೋರಿ ಅಕ್ಷಯ್ ತಂದೆ ಶುಕ್ರವಾರ ಅರ್ಜಿ ಸಲ್ಲಿಸಿದ್ದರು.

ಶಿಂದೆ ಸಮುದಾಯದಲ್ಲಿ ಶವವನ್ನು ಹೂಳುವ ಪದ್ಧತಿ ಇಲ್ಲ ಎಂಬ ಪ್ರಾಸಿಕ್ಯೂಷನ್ ವಾದವನ್ನು ತಳ್ಳಿಹಾಕಿದ ಪೀಠ, 'ಅಂತ್ಯಕ್ರಿಯೆ ಹೇಗೆ ನಡೆಸಬೇಕು ಎಂಬುದು ಅಕ್ಷಯ್ ಪಾಲಕರ ಆಯ್ಕೆ' ಎಂದು ಹೇಳಿದೆ.

'ಬದ್ಲಾಪುರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇರುವ ಸ್ಮಶಾನಗಳಲ್ಲಿ ಶಿಂದೆ ಶವ ಹೂಳುವುದಕ್ಕೆ ಜಾಗ ನೀಡಲು ನಿರಾಕರಿಸಲಾಗುತ್ತಿದೆ. ವಿರೋಧವೂ ವ್ಯಕ್ತವಾಗುತ್ತಿದೆ. ಹೀಗಾಗಿ, ಪೊಲೀಸರೇ ಪ್ರತ್ಯೇಕ ಜಾಗ ಹುಡುಕಬೇಕು' ಎಂದು ಸರ್ಕಾರಿ ವಕೀಲ ಹಿತೇನ್ ವೆನೆಗಾಂವಕರ್, ಪೀಠಕ್ಕೆ ತಿಳಿಸಿದರು.

ಶವಸಂಸ್ಕಾರ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಕ್ರಮ ತೆಗೆದುಕೊಳ್ಳುವರು. ಯಾವುದೇ ಸದ್ದು– ಗದ್ದಲ ಇಲ್ಲದಂತೆ ಕುಟುಂಬಸ್ಥರು ಅಂತ್ಯಕ್ರಿಯೆ ನೆರವೇರಿಸಬೇಕು ಎಂದು ವೆನೆಗಾಂವಕರ್ ಹೇಳಿದರು. ಇದನ್ನು ಮಾನ್ಯ ಮಾಡಿದ ಪೀಠ, ವಿಚಾರಣೆಯನ್ನು ಸೆ.30ಕ್ಕೆ ಮುಂದೂಡಿತು.

ವಿದೇಶ ಪ್ರಯಾಣ: ಅನುಮತಿ ರದ್ದು

ಮುಂಬೈ (ಪಿಟಿಐ): ಪುತ್ರಿ ಶೀನಾ ಬೋರಾ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಇಂದ್ರಾಣಿ ಮುಖರ್ಜಿ ಅವರಿಗೆ ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿ ನೀಡಿ ಸಿಬಿಐ ವಿಶೇಷ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಬಾಂಬೆ ಹೈಕೋರ್ಟ್ ಶುಕ್ರವಾರ ರದ್ದು ಮಾಡಿದೆ.

ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಶ್ಯಾಮ್ ಚಾಂಡಕ್ ಅವರು ಇದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.



'ಗಂಭೀರ ಅಪರಾಧ ಕೃತ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿ ಇಂದ್ರಾಣಿ ಮುಖರ್ಜಿ ವಿಚಾರಣೆ ಎದುರಿಸುತ್ತಿದ್ದಾರೆ. ಅವರು ದೇಶ ತೊರೆಯುವ ಸಾಧ್ಯತೆ ಇರುವ ಕಾರಣ, ವಿದೇಶ ಪ್ರಯಾಣಕ್ಕೆ ನೀಡಿರುವ ಅನುಮತಿಯನ್ನು ರದ್ದು ಮಾಡಬೇಕು' ಎಂದು ಸಿಬಿಐ ಕೋರಿತ್ತು.

ಸಿಬಿಐ ವಾದವನ್ನು ಒಪ್ಪಿದ ಹೈಕೋರ್ಟ್, 'ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಲಾಗಿದೆ' ಎಂದು ಹೇಳಿತು.

ತೆಲಂಗಾಣ: ಸಚಿವರಿಗೆ ಸೇರಿದ ಸ್ಥಳಗಳಲ್ಲಿ ಇ.ಡಿ ಶೋಧ

ಹೈದರಾಬಾದ್ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ತೆಲಂಗಾಣದ ಕಂದಾಯ ಸಚಿವ ಪಿ.ಶ್ರೀನಿವಾಸ ರೆಡ್ಡಿ ಮತ್ತು ಇತರರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ) ಶುಕ್ರವಾರ ಶೋಧ ನಡೆಸಿದೆ.

ಹೈದರಾಬಾದ್ ಸೇರಿದಂತೆ ರಾಜ್ಯದಲ್ಲಿರುವ ಐದು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಶ್ರೀನಿವಾಸ್ ರೆಡ್ಡಿ ಪುತ್ರ, ರಾಘವ್ ಸಮೂಹ ಸಂಸ್ಥೆಗಳ ಹರ್ಷ ರೆಡ್ಡಿ ಅವರು ಐದು ಕೋಟಿ ಮೌಲ್ಯದ ಏಳು ವಾಚ್‌ಗಳನ್ನು ಖರೀದಿಸಿದ್ದಾರೆ ಎಂದು ಆರೋಪಿಸಿ ಗುಪ್ತಚರ ನಿರ್ದೇಶನಾಲಯವು ನೀಡಿರುವ ದೂರಿಗೆ ಸಂಬಂಧಿಸಿ ಇ.ಡಿ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿಕೊಂಡಿದೆ.

ವಾಚ್ ಖರೀದಿಗೆ ಮಾಡಲಾದ ಹಣ ಪಾವತಿಯು, ₹100 ಕೋಟಿ ಮೌಲ್ಯದ ಹವಾಲ ಮತ್ತು ಕ್ರಿಪ್ಟೋ ಕರೆನ್ಸಿ ಅವ್ಯವಹಾರಕ್ಕೆ ಸಂಬಂಧಿಸಿದೆ ಎಂದು ಆರೋಪಿಸಲಾಗಿದೆ. ಇದೇ ಪ್ರಕರಣದಲ್ಲಿ ಆರೋಪಿಯಾಗಿರುವ ಎ.ನವೀನ್ ಕುಮಾರ್ ಅವರನ್ನು ಇ.ಡಿ ವಿಚಾರಣೆ ನಡೆಸುತ್ತಿದೆ.



ಪ್ರವಾಸೋದ್ಯಮ ದಿನ...

ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಕೋಲ್ಕತ್ತದ ವಿಕ್ಟೋರಿಯಾ ಸ್ಮಾರಕದ ಬಳಿ ವಿದ್ಯಾರ್ಥಿಗಳು ಅಲಂಕೃತ ಸಾರೋಟಿನಲ್ಲಿ ಸಾಗಿದರು –ಪಿಟಿಐ ಚಿತ್ರ

ತಮಿಳುನಾಡು ಯೂಟ್ಯೂಬರ್ ಜೆರಾಲ್ಡ್‌ಗೆ ಜಾಮೀನು

ಚಾನೆಲ್ ಬಂದ್ ಮಾಡಬೇಕೆಂಬ ಷರತ್ತು 'ಅನಪೇಕ್ಷಿತ': ಕೋರ್ಟ್

ನವದೆಹಲಿ(ಪಿಟಿಐ): ಯೂಟ್ಯೂಬರ್ ಫೆಲಿಕ್ಸ್ ಜೆರಾಲ್ಡ್ ಅವರಿಗೆ ಜಾಮೀನು ನೀಡುವ ವೇಳೆ, ಯೂಟ್ಯೂಬ್ ಚಾನೆಲ್ ಬಂದ್ ಮಾಡಬೇಕು ಎಂಬ ಷರತ್ತನ್ನೂ ವಿಧಿಸಿರುವ ಮದ್ರಾಸ್ ಹೈಕೋರ್ಟ್‌ನ ನಿರ್ದೇಶನ 'ಅನಪೇಕ್ಷಿತ' ಹಾಗೂ 'ಅಸಂಬದ್ಧ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಜೆರಾಲ್ಡ್ ಅವರಿಗೆ ಸೆಪ್ಟೆಂಬರ್ 6ರಂದು ಜಾಮೀನು ನೀಡಿರುವುದನ್ನು ದೃಢೀಕರಿಸಿದ ಸುಪ್ರೀಂ ಕೋರ್ಟ್, ಅವರ ಯೂಟ್ಯೂಬ್ ಚಾನೆಲ್ 'ರೆಡ್‌ಪಿಕ್ಸ್ 24X7' ಬಂದ್ ಮಾಡಬೇಕಿಲ್ಲ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಈ ಹಿಂದಿನ ತನ್ನ ಆದೇಶದಂತೆ, ಜೆರಾಲ್ಡ್ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂಬ ವಿಚಾರವನ್ನು ಗಣನೆಗೆ ತೆಗೆದುಕೊಂಡಿತು. ಜೆರಾಲ್ಡ್ ಪರ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ವಾದ ಮಂಡಿಸಿದರು.

ಮತ್ತೊಬ್ಬ ಯೂಟ್ಯೂಬರ್ ಸವುಕ್ಕು ಶಂಕರ್ ಅವರ 'ಆಕ್ಷೇಪಾರ್ಹ' ಸಂದರ್ಶನವನ್ನು ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಿದ ಆರೋಪದಡಿ ಜೆರಾಲ್ಡ್ ಅವರನ್ನು ಬಂಧಿಸಲಾಗಿತ್ತು.

ಈ ಸಂದರ್ಶನದಲ್ಲಿ, ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಕೆಲ ಮಹಿಳಾ ಪೊಲೀಸ್ ಅಧಿಕಾರಿಗಳ ವಿರುದ್ಧ ಶಂಕರ್ ಅವರು ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದರು ಎಂದು ಆರೋಪಿಸಲಾಗಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಇಬ್ಬರೂ ಯೂಟ್ಯೂಬರ್‌ಗಳಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಅಲ್ಲದೇ ಯೂಟ್ಯೂಬ್ ಚಾನೆಲ್ ಬಂದ್ ಮಾಡಬೇಕು ಎಂಬುದು ಜೆರಾಲ್ಡ್ ಅವರಿಗೆ ವಿಧಿಸಿದ್ದ ಷರತ್ತುಗಳಲ್ಲೊಂದಾಗಿತ್ತು.

ತೀರ್ಪುಗಳ ಸಾರಾಂಶ: ವೆಬ್‌ಪೇಜ್

ಜನರಿಗೆ ಮಹತ್ವದ ತೀರ್ಪುಗಳ ಸಾರಾಂಶ ಒದಗಿಸುವ ಉದ್ದೇಶದಿಂದ ಸುಪ್ರೀಂ ಕೋರ್ಟ್ ನೂತನ ವೆಬ್‌ಪೇಜ್ ಆರಂಭಿಸಿದೆ.

'ಲ್ಯಾಂಡ್‌ಮಾರ್ಕ್ ಜಜ್‌ಮೆಂಟ್ ಸಮರೀಜ್' ಎಂಬ ವೆಬ್‌ಪೇಜ್ ಆರಂಭಿಸಲಾಗಿದ್ದು, ಮಹತ್ವದ ತೀರ್ಪುಗಳನ್ನು ಜನರು ಸುಲಭವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಇದು ಅನುಕೂಲ ಕಲ್ಪಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಪ್ರಕಟಣೆ ತಿಳಿಸಿದೆ. ಸುಪ್ರೀಂ ಕೋರ್ಟ್‌ನ ಸಂಶೋಧನೆ ಮತ್ತು ಯೋಜನಾ ಕೇಂದ್ರವು ತೀರ್ಪುಗಳ ಸಾರಾಂಶ ಸಿದ್ಧಪಡಿಸುತ್ತದೆ.

ಪ್ರಜೆಗಳಿಗೆ ತೀರ್ಪುಗಳ ಮಾಹಿತಿ ಇರಬೇಕು, ಕಾನೂನು ಕುರಿತು ಜಾಗೃತಿ ಮೂಡಿಸುವುದು ಹಾಗೂ ಕಾನೂನು ಅನುಷ್ಠಾನ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಬೇಕು ಎಂಬ ಸುಪ್ರೀಂಕೋರ್ಟ್‌ನ ಆಶಯದಂತೆ ಈ ವೆಬ್‌ಪೇಜ್ ರೂಪಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಶ್ಚಿಮ ಬಂಗಾಳ: ಪ್ರಮಾಣಪತ್ರ ಸಲ್ಲಿಸಲು ಸರ್ಕಾರಕ್ಕೆ ಸೂಚನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ವೈದ್ಯಕೀಯ ಕಾಲೇಜುಗಳಲ್ಲಿ ಬೆದರಿಕೆ, ಭ್ರಷ್ಟಾಚಾರ, ಕಿರುಕುಳ ಸೇರಿದಂತೆ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ (ಪಿಐಎಲ್) ಯಾವುದಾದರೂ ಒಂದೂ ಅಥವಾ ಅದಕ್ಕೂ ಹೆಚ್ಚು ಆರೋಪಗಳು ಸಾಬೀತಾದರೆ ಬಹಳ ಗಂಭೀರ ವಿಷಯವಾಗುತ್ತದೆ ಎಂದು ಕಲ್ಕತ್ತ ಹೈಕೋರ್ಟ್ ಶುಕ್ರವಾರ ಎಚ್ಚರಿಸಿದೆ.

ಅರ್ಜಿಯಲ್ಲಿ ಉಲ್ಲೇಖಿಸಿರುವ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ರಾಜ್ಯ ಸರ್ಕಾರ ನಡೆಸುತ್ತಿರುವ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಲ್ಲಿ ಬೆದರಿಕೆ ಸಂಸ್ಕೃತಿ ಇದೆ. ಇಲ್ಲಿ ಕೀ–ಉತ್ತರಗಳನ್ನು ಮಾರಿಕೊಳ್ಳಲಾಗುತ್ತಿದೆ. ಲಂಚಗುಳಿತನ, ಭ್ರಷ್ಟಾಚಾರ, ಲೈಂಗಿಕ ಶೋಷಣೆ, ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಕಿರಿಯ ವೈದ್ಯರ ಮೇಲಿನ ದೌರ್ಜನ್ಯ ವ್ಯಾಪಕವಾಗಿದೆ ಎಂದು ಅರ್ಜಿದಾರರು ಉಲ್ಲೇಖಿಸಿದ್ದಾರೆ.

ಈ ಆರೋಪಗಳ ಕುರಿತು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸುವಂತೆ ಅರ್ಜಿದಾರರು ಕೋರಿದ್ದಾರೆ.

ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಶಿವಜ್ಞಾನಂ ಅವರ ನೇತೃತ್ವದ ವಿಭಾಗೀಯ ಪೀಠವು, ಸರ್ಕಾರಕ್ಕೆ ಪ್ರಮಾಣಪತ್ರ ಸಲ್ಲಿಸಲು ಸೂಚಿಸಿ, ವಿಚಾರಣೆಯನ್ನು ನವೆಂಬರ್ 21ಕ್ಕೆ ಮುಂದೂಡಿತು.

'ಘೋಷ್ ವಿರುದ್ಧದ ಆರೋಪ ಸಾಬೀತಾದರೆ ಗಲ್ಲು ಶಿಕ್ಷೆ'

ಕೋಲ್ಕತ್ತ (ಪಿಟಿಐ): ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರಿಗೆ ಜಾಮೀನು ನಿರಾಕರಿಸಿದ ನ್ಯಾಯಾಲಯ, ಅವರ ವಿರುದ್ಧ ಗಂಭೀರ ಸ್ವರೂಪದ ಆರೋಪಗಳಿದ್ದು, ಸಾಬೀತಾದರೆ ಗಲ್ಲು ಶಿಕ್ಷೆ ವಿಧಿಸಬಹುದು ಎಂದು ಹೇಳಿದೆ.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಹತ್ಯೆಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವಲ್ಲಿ ವಿಳಂಬ ಮತ್ತು ಸಾಕ್ಷ್ಯ ನಾಶಪಡಿಸಿದ ಆರೋಪದ ಮೇಲೆ ಆಗಸ್ಟ್ 9ರಂದು ಘೋಷ್ ಮತ್ತು ತಾಲಾ ಪೊಲೀಸ್ ಠಾಣೆಯ ಉಸ್ತುವಾರಿ ಅಭಿಜಿತ್ ಮಂಡಲ್ ಅವರನ್ನು ಸಿಬಿಐ ಬಂಧಿಸಿತ್ತು.

ಇದೇ ವೇಳೆ ನ್ಯಾಯಾಲಯ ಅಭಿಜಿತ್ ಮಂಡಲ್ ಅವರಿಗೂ ಜಾಮೀನು ನೀಡಲು ನಿರಾಕರಿಸಿತು. ಸಿಬಿಐ ಮನವಿ ಆಧರಿಸಿ ಇಬ್ಬರೂ ಆರೋಪಿಗಳಿಗೆ ಇದೇ 30ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಹೆಚ್ಚುವರಿ ಮುಖ್ಯ ನ್ಯಾಯಾಧೀಶ ಎಸ್. ಡೇ ಆದೇಶಿಸಿದರು.

ಗುಂಡಿಕ್ಕಿ ಶಂಕಿತನ ಹತ್ಯೆ, 6 ಬಂಧನ

ತ್ರಿಶ್ಯೂರ್/ನಾಮಕ್ಕಲ್(ಪಿಟಿಐ): ಕೇರಳದ ತ್ರಿಶ್ಯೂರ ಜಿಲ್ಲೆಯಲ್ಲಿರುವ ಎಸ್‌ಬಿಐನ ಮೂರು ಎಟಿಎಂಗಳಿಂದ ಅಂದಾಜು ₹70 ಲಕ್ಷ ದೋಚಿ ಪರಾರಿಯಾಗಿ, ರಾಜ್ಯ ಪ್ರವೇಶಿಸಿದ್ದ ಗುಂಪೊಂದನ್ನು ಬೆನ್ನಟ್ಟಿದ್ದ ತಮಿಳುನಾಡು ಪೊಲೀಸರು, ಒಬ್ಬ ಶಂಕಿತನನ್ನು ಗುಂಡಿಕ್ಕಿ ಹತ್ಯೆ ಮಾಡಿ ಇತರ ಆರು ಜನರನ್ನು ಶುಕ್ರವಾರ ಬಂಧಿಸಿದ್ದಾರೆ.

ಹರಿಯಾಣ ಮೂಲದ ಜನರಿದ್ದ ಈ ಗುಂಪು, ದೋಚಿದ ಹಣವನ್ನು ಕಾರೊಂದರಲ್ಲಿ ಇಟ್ಟು, ಕಾರನ್ನು ಕಂಟೇನರ್ ಟ್ರಕ್‌ನಲ್ಲಿಟ್ಟುಕೊಂಡು ತಮಿಳುನಾಡಿನ ನಾಮಕ್ಕಲ್‌ಗೆ ಪರಾರಿಯಾಗಿದ್ದರು.

ಈ ವೇಳೆ, ಜಿಲ್ಲೆಯ ಕುಮಾರ ಪಾಳ್ಯಂನಲ್ಲಿ ಬೇಕಾಬಿಟ್ಟಿಯಾಗಿ ಟ್ರಕ್ ಚಲಾಯಿಸಿದ್ದ ಗುಂಪು, ಹಲವು ಕಾರುಗಳು, ದ್ವಿಚಕ್ರವಾಹನಗಳಿಗೆ ಗುದ್ದಿತ್ತು. ಗಾಬರಿಗೊಂಡ ಜನ, ಟ್ರಕ್ ಮೇಲೆ ಕಲ್ಲು ತೂರಿದರು ಎಂದು ಪೊಲೀಸರು ತಿಳಿಸಿದ್ದಾರೆ.

ದರೋಡೆಗೆ ಬಳಸಿದ್ದ ಕಾರು, ಟ್ರಕ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇಲಂ ವಲಯ ಡಿಐಜಿ ಇ.ಎಸ್.ಉಮಾ ತಿಳಿಸಿದ್ದಾರೆ.

'ಗುಂಪನ್ನು ಬೆನ್ನಟ್ಟಿದ ವೇಳೆ, ಟ್ರಕ್ ಚಾಲಕ ಹಾಗೂ ಆತನ ಸಹಚರ ಪೊಲೀಸರ ಮೇಲೆ ದಾಳಿಗೆ ಯತ್ನಿಸಿದ್ದರು. ಈ ವೇಳೆ ಪೊಲೀಸರು ಹಾರಿಸಿದ ಗುಂಡಿಗೆ ಒಬ್ಬ ಶಂಕಿತ ಬಲಿಯಾಗಿದ್ದು, ಮತ್ತೊಬ್ಬ ಗಾಯಗೊಂಡಿದ್ದಾನೆ. ಘಟನೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ಗಾಯಗಳಾಗಿವೆ. ಎಲ್ಲರನ್ನೂ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ತಿಳಿಸಿದ್ದಾರೆ.

ಮೇಯರ್ ಅಧಿಕಾರ ಸ್ವೀಕಾರಕ್ಕೂ ಮುನ್ನ ನಡೆದ ಕ್ರಿಯೆ • ಗಂಗಾಜಲ, ಗೋಮೂತ್ರ ಸಿಂಪಡಣೆ

ಬಿಜೆಪಿ ಸೇರಿದ 'ಕೈ' ಕೌನ್ಸಿಲರ್‌ಗಳ ಶುದ್ಧೀಕರಣ



ಜೈಪುರ (ಪಿಟಿಐ): ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದ ಕೌನ್ಸಿಲರ್‌ಗಳು ಮತ್ತು ಮಹಾನಗರ ಪಾಲಿಕೆಯನ್ನು ಶುದ್ಧೀಕರಿಸುವ ಕ್ರಿಯೆಯನ್ನು ಇಲ್ಲಿನ ಬಿಜೆಪಿ ಶಾಸಕ ಬಾಲಮುಕುಂದ ಆಚಾರ್ಯ ಶುಕ್ರವಾರ ನೆರವೇರಿಸಿದರು.

ಹಥೋಜ್ ಧಾಮ್ ದೇಗುಲದ ಅರ್ಚಕರೂ ಆಗಿರುವ ಆಚಾರ್ಯ, ಜೈಪುರ ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಕೌನ್ಸಿಲರ್‌ಗಳ ಮೇಲೆ 'ಗಂಗಾಜಲ' ಮತ್ತು 'ಗೋಮೂತ್ರ' ಸಿಂಪಡಿಸಿ ಶುದ್ಧೀಕರಣ ಕಾರ್ಯ ನಡೆಸಿದರು. ಈ ಮೂಲಕ ಭ್ರಷ್ಟಾಚಾರದಿಂದ ಪಾಲಿಕೆಯನ್ನು ಶುದ್ಧೀಕರಿಸುವ ಕಾರ್ಯ ಸಂಪನ್ನವಾಗಿದೆ ಎಂದು ಅವರು ತಿಳಿಸಿದರು.

ಭ್ರಷ್ಟಾಚಾರದ ಆರೋಪದ ಕಾರಣ ಮೇಯರ್ ಮುನೇಶ್ ಗುರ್ಜಾರ್ ಅವರನ್ನು ಪದಚ್ಯುತಗೊಳಿಸಿದ ಬಳಿಕ, ಕಾಂಗ್ರೆಸ್‌ನ ಏಳು ಕೌನ್ಸಿಲರ್‌ಗಳು ಮತ್ತು ಒಬ್ಬ ಪಕ್ಷೇತರರ ಬೆಂಬಲದಿಂದ ಕುಸುಮ್ ಯಾದವ್ ಅವರನ್ನು ಮೇಯರ್ ಆಗಿ ಬಿಜೆಪಿ ಆಯ್ಕೆ ಮಾಡಿದೆ. ಅಲ್ಲದೆ ಈ ಎಲ್ಲ ಎಂಟು ಕೌನ್ಸಿಲರ್‌ಗಳು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಕುಸುಮ್ ಅವರು ಅಧಿಕಾರ ಸ್ವೀಕರಿಸುವ ಮುನ್ನ, ಶಾಸಕ ಆಚಾರ್ಯ ಅವರು ಕೌನ್ಸಿಲರ್‌ಗಳು ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಶುದ್ಧೀಕರಣ ಕಾರ್ಯ ನಡೆಸಿದರು.


'ನಾವು ಗಂಗಾಜಲದಿಂದ ಕಚೇರಿಯನ್ನು ಶುದ್ಧಗೊಳಿಸಿದ್ದೇವೆ. ಈಗ ಇಲ್ಲಿನ ಸಕಲ ಕಲ್ಮಶಗಳನ್ನು ತೊಲಗಿಸಲಾಗಿದೆ. ಈಗ ಅಧಿಕಾರ ವಹಿಸಿಕೊಂಡ ಮೇಯರ್ ಅವರು ಶುದ್ಧ ವಾತಾವರಣದಲ್ಲಿ ಕೆಲಸ ಮಾಡುತ್ತಾರೆ' ಎಂದು ಆಚಾರ್ಯ ಪ್ರತಿಕ್ರಿಯಿಸಿದರು.

'ಹಿಂದೂ ಸಂಸ್ಕೃತಿಯಲ್ಲಿ ಗಂಗಾಜಲ ಮತ್ತು ಗೋಮೂತ್ರ ಸಿಂಪಡಿಸುವ ಮೂಲಕ ಶುದ್ಧೀಕರಣ ಕ್ರಿಯೆ ನಡೆಸುವುದು ಸಹಜ' ಎಂದು ಕೌನ್ಸಿಲರ್ ಮನೋಜ್ ಮುದ್ಗಲ್ ತಿಳಿಸಿದರು.

ಕಾಂಗ್ರೆಸ್ ಟೀಕೆ: ಶುದ್ಧೀಕರಣ ಕಾರ್ಯದ ಕುರಿತು ಪ್ರತಿಕ್ರಿಯಿಸಿದ ಕಾಂಗ್ರೆಸ್ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸ್ವರ್ಣಿಂ ಚತುರ್ವೇದಿ, 'ಕಾಂಗ್ರೆಸ್ ತೊರೆದು ಬಿಜೆಪಿ ಸೇರುವವರೆಲ್ಲ ತಮ್ಮ ಪಾಪಗಳಿಂದ ಮುಕ್ತಿ ಪಡೆಯುವುದು ವಿಚಿತ್ರವಾಗಿದೆ' ಎಂದು ಟೀಕಿಸಿದರು.

ರಾಜ್ಯ ಮತ್ತು ಕೇಂದ್ರದ ಬಿಜೆಪಿ ನಾಯಕರು ಮೊದಲಿಗೆ ಕಾಂಗ್ರೆಸ್ ನಾಯಕರ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡುತ್ತಾರೆ. ಬಳಿಕ ಇ.ಡಿ, ಐ.ಟಿ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ಬೆದರಿಸುತ್ತಾರೆ. ಆ ನಾಯಕರು ಬಿಜೆಪಿ ಸೇರಿದ ಕೂಡಲೇ ಅಪರಾಧಗಳಿಂದ ಮುಕ್ತರಾಗುತ್ತಾರೆ' ಎಂದು ಚತುರ್ವೇದಿ ದೂರಿದರು.

ಸಿ.ಎಂ. ಆಯ್ಕೆ– ಹೈಕಮಾಂಡ್ ತೀರ್ಮಾನವೇ ಅಂತಿಮ: ಹೂಡಾ



ರೋಹ್ಟಕ್ (ಪಿಟಿಐ): ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತ ಪಡೆಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಭೂಪೇಂದ್ರ ಸಿಂಗ್ ಹೂಡಾ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಹೈಕಮಾಂಡ್ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲಿದೆ. ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದೊಳಗೆ ಆಂತರಿಕ ಕಲಹ ಏರ್ಪಟ್ಟಿದೆ ಎಂಬ ವರದಿಯನ್ನು ಅಲ್ಲಗಳೆದ ಅವರು, ರಾಜ್ಯದಲ್ಲಿ ಪಕ್ಷವು ಒಗ್ಗಟ್ಟಿನಿಂದ ಇದೆ. ನಾನೂ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿ. ಮಹತ್ವಾಕಾಂಕ್ಷೆ ಇಲ್ಲದಿದ್ದರೆ ರಾಜಕಾರಣದಲ್ಲಿ ಇರಲು ಸಾಧ್ಯವಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಆಕಾಂಕ್ಷಿಗಳಿದ್ದಾಗ ಪಕ್ಷವೂ ಬಲವರ್ಧನೆಯಾಗುತ್ತದೆ' ಎಂದು ಹೇಳಿದರು.

13 ನಾಯಕರ ಉಚ್ಚಾಟನೆ



ಚಂಡೀಗಢ (ಪಿಟಿಐ): ಪಕ್ಷೇತರ ಅಭ್ಯರ್ಥಿಗಳಾಗಿ ಚುನಾವಣೆಗೆ ಸ್ಪರ್ಧಿಸಿದ್ದ 13 ಮಂದಿಯನ್ನು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ ಕಾರಣ ನೀಡಿ ಹರಿಯಾಣ ಕಾಂಗ್ರೆಸ್ ಘಟಕವು ಶುಕ್ರವಾರ ಉಚ್ಚಾಟನೆ ಮಾಡಿದೆ.

ತಕ್ಷಣದಿಂದಲೇ ಜಾರಿಯಾಗುವಂತೆ ಆರು ವರ್ಷಗಳ ಅವಧಿಗೆ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಪಕ್ಷವು ತಿಳಿಸಿದೆ. ಟಿಕೆಟ್ ವಿಚಾರಕ್ಕೆ ಭಿನ್ನಮತ ಉಂಟಾಗಿತ್ತು

ಕಾನ್ಪುರ ಟೆಸ್ಟ್ • ಆಕಾಶದೀಪ್‌ಗೆ ಎರಡು ವಿಕೆಟ್ • ಮಳೆ, ಮಂದಬೆಳಕಿನಲ್ಲಿ ಕಣ್ಣಿಗೆ ರಾಚಿದ ಅವ್ಯವಸ್ಥೆ

ಮೊದಲ ದಿನ; 35 ಓವರ್‌ಗಳ ಆಟ

ಪ್ರಜಾವಾಣಿ ವಾರ್ತೆ

ಕಾನ್ಪುರ: ಹವಾಮಾನ ಇಲಾಖೆಯ ಮುನ್ಸೂಚನೆ ನಿಜವಾಯಿತು. ಶುಕ್ರವಾರ ಮಳೆ ಸುರಿಯಿತು. ಇದರಿಂದಾಗಿ ಭಾರತ ಮತ್ತು ಬಾಂಗ್ಲಾದೇಶ ತಂಡಗಳ ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನದಾಟ ಅಪೂರ್ಣವಾಯಿತು.

ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆಕಾಶದೀಪ್ (34ಕ್ಕೆ2) ಅವರು ಪರಿಣಾಮಕಾರಿ ದಾಳಿ ನಡೆಸಿದರು. ಮಧ್ಯಾಹ್ನ 2.08ಕ್ಕೆ ಮಂದ ಬೆಳಕಿನಿಂದಾಗಿ ಆಟ ನಿಂತಾಗ ಬಾಂಗ್ಲಾ ತಂಡವು 35 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 107 ರನ್ ಗಳಿಸಿತ್ತು. ಈ ಸಂದರ್ಭದಲ್ಲಿ ಸುಮಾರು ಅರ್ಧಗಂಟೆ ಮಳೆ ಸುರಿಯಿತು. ನಂತರ ಉಭಯ ತಂಡಗಳು ಮೈದಾನಕ್ಕೆ ಮರಳಲಿಲ್ಲ. ದಿನದಾಟವನ್ನು ಮುಕ್ತಾಯಗೊಳಿಸಲಾಯಿತು.

ಮೊಮಿನುಲ್ ಹಕ್ (ಬ್ಯಾಟಿಂಗ್ 40; 81ಎ) ಮತ್ತು ಮುಷ್ಫಿಕುರ್ ರಹೀಂ (ಬ್ಯಾಟಿಂಗ್ 6) ಅವರು ಕ್ರೀಸ್‌ನಲ್ಲಿದ್ದಾರೆ. ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಒಂದು ವಿಕೆಟ್ ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದಾರೆ.

ಸಂಜೆ 4 ಗಂಟೆ ಎಂದಿಷ್ಟು ಹೊತ್ತು ಮತ್ತು 5 ಗಂಟೆಯ ನಂತರ ಮತ್ತೊಂದಿಷ್ಟು ಹೊತ್ತು ಮಳೆ ಸುರಿಯಿತು. ಮೈದಾನದಲ್ಲಿ ನೀರು ಇಂಗಲು ಮತ್ತು ಹರಿದು ಹೋಗಲು ಸೂಕ್ತ ವ್ಯವಸ್ಥೆ ಇರಲಿಲ್ಲ. ಭಾರತದ ಅತ್ಯಂತ ಹಳೆಯ ಟೆಸ್ಟ್ ಕ್ರಿಕೆಟ್ ತಾಣಗಳಲ್ಲಿ ಒಂದಾಗಿರುವ ಈ ಕ್ರೀಡಾಂಗಣದಲ್ಲಿ ಒಳಚರಂಡಿ ಸೌಲಭ್ಯದ ಕೊರತೆಯು ಕಣ್ಣಿಗೆ ರಾಚಿತು. ಇಂತಹ ಪರಿಸ್ಥಿತಿಯನ್ನು ನಿಭಾಯಿಸುವ ಸೂಕ್ತ ತರಬೇತಿ ಇಲ್ಲದ ಸಿಬ್ಬಂದಿಯು ಪರದಾಡುತ್ತಿದ್ದುದೂ ಕಂಡಿತು. ದೊಡ್ಡ ಕ್ರೀಡಾಂಗಣಗಳಲ್ಲಿ ಶೇಖರವಾದ ನೀರನ್ನು ಹೊರಹಾಕಲು ಬಳಸುವ ಎರಡು ಸೂಪರ್‌ಸಾಪರ್‌ಗಳಿದ್ದವು. ಪಿಚ್‌ಗಳಿಗೆ ಹೊದಿಕೆಗಳನ್ನು ಎಳೆದು ತಂದು ಹಾಕುವ ಕಾರ್ಯವನ್ನೂ ಸಿಬ್ಬಂದಿ ವೇಗವಾಗಿ ನಿರ್ವಹಿಸಲಿಲ್ಲ. ಔಟ್‌ಫೀಲ್ಡ್ ಕೂಡ ಪೂರ್ಣವಾಗಿ ಕವರ್ ಆಗಲಿಲ್ಲ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಇಲ್ಲಿಗೆ ಟೆಸ್ಟ್ ಪಂದ್ಯದ ಆಯೋಜನೆಗೆ ಅನುಮತಿ ನೀಡುವ ಮುನ್ನ ಇಲ್ಲಿರುವ ಕೊರತೆಗಳ ಕುರಿತು ಪರಿಶೀಲನೆ ನಡೆಸಿದ್ದರೆ ಸೂಕ್ತ ವಾಗಿ ರುತ್ತಿತ್ತು.

ಉತ್ತರ ಪ್ರದೇಶ ರಾಜ್ಯ ಸರ್ಕಾರದ ಕ್ರೀಡಾ ನಿರ್ದೇಶ ನಾಲಯಕ್ಕೆ ಸೇರಿದ ಈ ಮೈದಾನವನ್ನು ಉತ್ತರಪ್ರದೇಶ ಕ್ರಿಕೆಟ್ ಸಂಸ್ಥೆ (ಯುಪಿಸಿಎ) ಲೀಸ್ ಪಡೆದುಕೊಂಡಿದೆ. ಇಲಾಖೆ ಮತ್ತು ಯುಪಿಸಿಎ ನಡುವೆ ಒಪ್ಪಂದವಾಗಿದೆ. ಆದರೆ ದೀರ್ಘ ಸಮಯದಿಂದ ಇಲಾಖೆ ಮತ್ತು ಸಂಸ್ಥೆಯ ನಡುವೆ ಇರುವ ಭಿನ್ನಾಭಿಪ್ರಾಯಗಳಿಂದಾಗಿ ಅಭಿವೃದ್ಧಿ ಕುಂಠಿತಗೊಂಡಿದೆ.

ಒಳಚರಂಡಿ ವ್ಯವಸ್ಥೆ ಅಷ್ಟೇ ಅಲ್ಲ, ಕ್ರೀಡಾಂಗಣದ ಸಿ ಬ್ಲಾಕ್ ಜನಬಳಕೆಗೆ ಸೂಕ್ತವಾಗಿಲ್ಲ ಮತ್ತು ಅಪಾಯಕಾರಿಯೂ ಆಗಿದೆ ಎಂದು ಹೇಳಲಾಗಿದೆ. ಈ ವರದಿಯನ್ನು ಕ್ರೀಡಾಂಗಣದ ನಿರ್ದೇಶಕ ಸಂಜಯ್ ಕಪೂರ್ ಅವರು ಅಲ್ಲಗಳೆದಿದ್ದಾರೆ. ಆದರೆ ಇಲ್ಲಿ ಸ್ವಚ್ಛತೆಯ ಕೊರತೆಯೂ ಇದೆ. ಪಾನ್ ಮಸಾಲಾ ಜಗಿದು ಗೋಡೆಗಳ ಮೇಲೆ ಉಗಿದ ಕಲೆಗಳು ಇವೆ. ಗೋಡೆಗುಂಟ, ರಸ್ತೆಬದಿಯಲ್ಲಿರುವ ಮೂತ್ರ ವಿಸರ್ಜನೆಯ ಕಲೆಗಳನ್ನು ಮರೆಮಾಚಲು ಕ್ರಿಮಿನಾಶಕ ಪುಡಿ ಎರಚಲಾಗಿದೆ. ಅಲ್ಲದೇ ಈ ಊರಿನಲ್ಲಿ ಪಂಚತಾರಾ ಹೋಟೆಲ್‌ಗಳು ಇಲ್ಲ. ತ್ರೀಸ್ಟಾರ್ ಹೋಟೆಲ್‌ಗಳಿವೆ. ಇದರಿಂದಾಗಿ ಇತ್ತೀಚೆಗೆ ಭಾರತ ತಂಡದ ಕೆಲವು ಹಿರಿಯ ಆಟಗಾರರು ಇಲ್ಲಿ ಪಂದ್ಯ ಆಯೋಜಿಸುವುದರ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದರು.

ಆದರೆ ಇಲ್ಲಿ ಮೊದಲಿನಿಂದಲೂ ಮಹತ್ವದ ಟೆಸ್ಟ್ ಪಂದ್ಯಗಳು ನಡೆದಿವೆ. ಈ ಕ್ರೀಡಾಂಗಣದಲ್ಲಿ 2016ರಲ್ಲಿ ಭಾರತದ 500ನೇ ಟೆಸ್ಟ್ ಪಂದ್ಯ ನಡೆದಿತ್ತು. ಆಗ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಿದ್ದವು.

ಉತ್ತರಪ್ರದೇಶದ ರಾಜಧಾನಿ ಲಖನೌನಲ್ಲಿ ಸುಸಜ್ಜಿತವಾದ ಏಕನಾ ಕ್ರೀಡಾಂಗಣವಿದೆ. ಕಾನ್ಪುರದಿಂದ 100 ಕಿಲೋಮೀಟರ್ ದೂರದಲ್ಲಿರುವ ಈ ಮೈದಾನದಲ್ಲಿ ಅ.1ರಿಂದ 5ರವರೆಗೆ ಇರಾನಿ ಟ್ರೋಫಿ ಪಂದ್ಯ ನಡೆಯಲಿದೆ. ಹೋದ ವರ್ಷ ಇಲ್ಲಿಯೇ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯಗಳು ನಡೆದಿದ್ದವು.

ಅದರಿಂದಾಗಿ ಬಿಸಿಸಿಐನ ರೊಟೇಷನ್ ನಿಯಮದ ಪ್ರಕಾರ ಒಂದೇ ಕ್ರಿಕೆಟ್ ಸಂಸ್ಥೆಯ ಎರಡನೇ ಕ್ರೀಡಾಂಗಣವಾದ ಕಾನ್ಪುರದಲ್ಲಿ ಈ ಬಾರಿ ಅಂತರರಾಷ್ಟ್ರೀಯ ಪಂದ್ಯ ಆಯೋಜನೆಗೆ ಅವಕಾಶ ನೀಡಲಾಗಿದೆ.


ಭಾರತದ ಆಕಾಶದೀಪ್ ಬೌಲಿಂಗ್ ವೈಖರಿ ಎಎಫ್‌ಪಿ ಚಿತ್ರ

ಬಾಂಗ್ಲಾ ಅಭಿಮಾನಿ 'ಟೈಗರ್' ಆಸ್ಪತ್ರೆಗೆ ದಾಖಲು

ಕಾನ್ಪುರ (ಪಿಟಿಐ): ಬಾಂಗ್ಲಾದೇಶ ಕ್ರಿಕೆಟ್ ತಂಡದ ಅಭಿಮಾನಿ ಟೈಗರ್ ರೋಬಿ ಅವರು ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಸಂದರ್ಭದಲ್ಲಿ ಅಸ್ವಸ್ಥಗೊಂಡರೆಂದು ಹೇಳಿರುವ ಸ್ಥಳೀಯ ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಅವರ ಮೇಲೆ ಕೆಲವು ಪ್ರೇಕ್ಷಕರು ಹಲ್ಲೆ ಮಾಡಿದ್ದಾರೆಂದೂ ಹೇಳಲಾಗುತ್ತಿದೆ.

ಸ್ವಯಂಘೋಷಿತ 'ಸೂಪರ್ ಫ್ಯಾನ್' ರೋಬಿ ಅವರು ಕ್ರೀಡಾಂಗಣದ ಸಿ ಬ್ಲಾಕ್‌ನಲ್ಲಿದ್ದರು. ಅವರು ಬಾಂಗ್ಲಾ ಆಡುವ ಪ್ರತಿ ಪಂದ್ಯದಲ್ಲಿಯೂ ಹುಲಿ ವೇಷದಲ್ಲಿ ಬರುತ್ತಾರೆ. ಬಾಂಗ್ಲಾದೇಶದ ಧ್ವಜ ಹಿಡಿದು ತಂಡವನ್ನು ಹುರಿದುಂಬಿಸುತ್ತಾರೆ.

'ಅವರು ನಮ್ಮ ಕಾನ್‌ಸ್ಟೆಬಲ್ ಜೊತೆಗೆ ಮೊದಲಿಗೆ ಮಾತನಾಡುವಾಗ ಉಸಿರಾಟದ ತೊಂದರೆ ಅನುಭವಿಸುತ್ತಿದ್ದರು. ಅಲ್ಲದೇ ಅರೆಪ್ರಜ್ಞಾವಸ್ಥೆಯಲ್ಲಿದ್ದರು. ಈಗ ಅವರ ಆರೋಗ್ಯ ಸುಧಾರಿಸಿದೆ' ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಹರೀಶ್ ಚಂದರ್ ತಿಳಿಸಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ್ದ ರೋಬಿ ತಮ್ಮ ಹೊಟ್ಟೆಗೆ ಯಾರೋ ಗುದ್ದಿದ್ದರು ಎಂದಿದ್ದರು. ಈ ಸಂದರ್ಭದಲ್ಲಿ ಅವರನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿದ್ದರು. ಚಿಕಿತ್ಸೆಯ ನಂತರ ರೋಬಿ ಅವರು ಆಸ್ಪತ್ರೆಯಿಂದ ನೀಡಿದ ವಿಡಿಯೊ ಹೇಳಿಕೆಯಲ್ಲಿ, 'ನಾನು ಅಸ್ವಸ್ಥನಾದೆ. ಪೊಲೀಸರು ನನ್ನನ್ನು ಆಸ್ಪತ್ರೆಗೆ ದಾಖಲಿಸಿದರು. ಈಗ ನಾನು ಚೆನ್ನಾಗಿದ್ದೇನೆ. ನನ್ನ ಹೆಸರು ರೋಬಿ ಮತ್ತು ಬಾಂಗ್ಲಾದೇಶದಿಂದ ಬಂದಿರುವೆ' ಎಂದರು.


ಅಸ್ವಸ್ಥರಾದ ಬಾಂಗ್ಲಾದೇಶ ತಂಡದ ಸೂಪರ್ ಫ್ಯಾನ್ ರೋಬಿ ಅವರನ್ನು ಪೊಲೀಸರು ಆಸ್ಪತ್ರೆಗೆ ಕರೆದೊಯ್ದರು ಪಿಟಿಐ ಚಿತ್ರ

ಸ್ಕೋರ್ ಕಾರ್ಡ್


ಮೊದಲ ಇನಿಂಗ್ಸ್: ಬಾಂಗ್ಲಾದೇಶ 3ಕ್ಕೆ 107 (35 ಓವರ್‌ಗಳಲ್ಲಿ)

ಹಸನ್ ಸಿ ಜೈಸ್ವಾಲ್ ಬಿ ಆಕಾಶ್ ದೀಪ್ 0 (24ಎ), ಶಾದ್ಮನ್ ಎಲ್‌ಬಿಡಬ್ಲ್ಯು ಬಿ ಆಕಾಶ್ ದೀಪ್ 24 (36, 4x4)
ಮೊಮಿನುಲ್ ಹಕ್ ಔಟಾಗದೆ 40 (81ಎ, 4x7), ನಜ್ಮುಲ್ ಸಿ ಎಲ್‌ಬಿಡಬ್ಲ್ಯು ಬಿ ಅಶ್ವಿನ್ (31, 57ಎ, 4x6), ಮುಷ್ಫಿಕುರ್ ಔಟಾಗದೆ 6 (13ಎ, 4x1)

ಇತರೆ: 6 (ಬೈ 4, ಲೆಗ್‌ಬೈ 1, ನೋಬಾಲ್ 1)
ವಿಕೆಟ್ ಪತನ: 1-26 (ಝಾಕಿರ್ ಹಸನ್, 8.3), 2-29 (ಶಾದ್ಮನ್ ಇಸ್ಲಾಂ, 12.1), 3-80 (ನಜ್ಮುಲ್ ಹಸನ್ ಶಾಂತೊ, 28.5).
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 9-4-19-0, ಮೊಹಮ್ಮದ್ ಸಿರಾಜ್ 7-0-27-0, ರವಿಚಂದ್ರನ್ ಅಶ್ವಿನ್ 9-0-22-1, ಆಕಾಶ್ ದೀಪ್ 10-4-34-2.

ಕೆಕೆಆರ್‌ಗೆ ಬ್ರಾವೊ ಮೆಂಟರ್

ನವದೆಹಲಿ (ಪಿಟಿಐ): ವಿಶ್ವ ಕಪ್ ವಿಜೇತ ವೆಸ್ಟ್ ಇಂಡೀಸ್ ತಂಡದ ಆಲ್‌ರೌಂಡರ್ ಡ್ವೇನ್ ಬ್ರಾವೊ ಅವರು ಎಲ್ಲ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತರಾಗುವುದಾಗಿ ಪ್ರಕಟಿಸಿದ್ದಾರೆ. ಐಪಿಎಲ್ ತಂಡವಾದ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಅವರು ಮೆಂಟರ್ ಆಗಿ ಸೇರ್ಪಡೆಯಾಗಲಿದ್ದಾರೆ.


ಡ್ವೇನ್ ಬ್ರಾವೊ

ಆ ಮೂಲಕ ಆಟಗಾರರನಾಗಿ ಚೆನ್ನೈ ಸೂಪರ್ ಕಿಂಗ್ಸ್ ಜೊತೆಗಿನ ಬ್ರಾವೊ ಅವರ ದೀರ್ಘ ಕಾಲದ ಬಾಂಧವ್ಯ ಅಂತ್ಯಗೊಂಡಿತು. ಈ ಹಿಂದೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೆಂಟರ್ ಆಗಿದ್ದ ಗೌತಮ್ ಗಂಭೀರ್ ಅವರ ಸ್ಥಾನವನ್ನು 40 ವರ್ಷದ ಬ್ರಾವೊ ಅವರು ತುಂಬಲಿದ್ದಾರೆ. ಗಂಭೀರ್ ಅವರು ಈಗ ಭಾರತ ತಂಡದ ಹೆಡ್ ಕೋಚ್ ಸ್ಥಾನದಲ್ಲಿದ್ದಾರೆ.

ಈ ವಾರದ ಆರಂಭದಲ್ಲಿ ಗಾಯಾಳಾದ ಕಾರಣ ಕೆರೀಬಿಯನ್ ಸೂಪರ್ ಲೀಗ್‌ನಲ್ಲಿ ಅವರ ಪಯಣ ಬೇಗ ಅಂತ್ಯಕಂಡಿದೆ.

'ನನಗೆ ಎಲ್ಲವನ್ನೂ ಕೊಟ್ಟ ಆಟಕ್ಕೆ ಇಂದು ವಿದಾಯ ಹೇಳುತ್ತಿದ್ದೇನೆ' ಎಂದು ಬ್ರಾವೊ ಅವರು ಶುಕ್ರವಾರ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.



ಬೆಂಗಳೂರು ಫುಟ್‌ಬಾಲ್ ಕ್ಲಬ್ ಮೈದಾನದಲ್ಲಿ ಶುಕ್ರವಾರ ನಡೆದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಎಸ್‌ಸಿ ಫುಟ್‌ಬಾಲ್ ಕ್ಲಬ್ ಗೋಲ್‌ಕೀಪರ್ ಖುಂದ್ರಕಪಮ್ ಪ್ರೇಮಚಂದ್ ಸಿಂಗ್ ಚೆಂಡು ತಡೆದರು
ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಎಎಸ್‌ಸಿಗೆ ಜಯ

ಬೆಂಗಳೂರು: ಎಎಸ್‌ಸಿ ತಂಡವು ಇಲ್ಲಿ ನಡೆಯುತ್ತಿರುವ ಅರ್ಬನ್‌ರೈಸ್ ಸಿ. ಪುಟ್ಟಯ್ಯ ಸ್ಮಾರಕ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಶುಕ್ರವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಎಎಸ್‌ಸಿ ತಂಡವು 2–1ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ವಿರುದ್ಧ ಜಯಿಸಿತು. ಎಎಸ್‌ಸಿ ತಂಡದ ಟೋನಿ ಹಿದ್ರಮ್ (12ನೇ ನಿ, 24ನೇ ನಿ) ಗೋಲು ಗಳಿಸಿದರು. ಎದುರಾಳಿ ತಂಡದ ರಕ್ಷಿತ್ (90 + 4ನಿ) ಒಂದು ಗೋಲು ಹೊಡೆದರು.

ಇನ್ನೊಂದುಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು 1–0ಯಿಂದ ರೂಟ್ಸ್ ಎಫ್‌ಸಿ ಎದುರು ಗೆದ್ದಿತು. ಕಿಕ್‌ಸ್ಟಾರ್ಟ್ ತಂಡದ ಜಿ. ಜಾನ್ ಪೀಟರ್ (90 + 5ನಿ) ಗೋಲು ಗಳಿಸಿದರು.

ಕ್ರೀಡಾ ಸಚಿವರೊಂದಿಗೆ ನೀರಜ್ ಭೇಟಿ

ನವದೆಹಲಿ (ಪಿಟಿಐ): ಒಲಿಂಪಿಯನ್ ಅಥ್ಲೀಟ್ ನೀರಜ್ ಚೋಪ್ರಾ ಅವರು ಕೇಂದ್ರ ಕ್ರೀಡಾ ಸಚಿವ ಮನ್ಸೂಕ್ ಮಾಂಡವೀಯ ಅವರನ್ನು ಭೇಟಿಯಾದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪುರುಷರ ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕ ಹಾಗೂ ಡೈಮಂಡ್ ಲೀಗ್ ಅಥ್ಲೆಟಿಕ್ಸ್ ಫೈನಲ್‌ನಲ್ಲಿ ಎರಡನೇ ಸ್ಥಾನ ಗಳಿಸಿದ ನಂತರ ನೀರಜ್ ಭಾರತಕ್ಕೆ ಮರಳಿದ್ದಾರೆ. 26 ವರ್ಷದ ನೀರಜ್ ಅವರು ಸತತ ಎರಡು ಒಲಿಂಪಿಕ್ ಕೂಟಗಳ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಪದಕ ಜಯಿಸಿದ ಭಾರತದ ಏಕೈಕ ಕ್ರೀಡಾಪಟುವಾಗಿದ್ದಾರೆ.

'ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರನ್ನು ಇಂದು ನವದೆಹಲಿಯಲ್ಲಿ ಭೇಟಿಯಾದೆ. ಅವರಿಗೆ ಭವಿಷ್ಯದಲ್ಲಿ ಒಳ್ಳೆಯದಾಗಲಿ ಎಂದು ಶುಭ ಕೋರಿದೆ' ಎಂದು ಮಾಂಡವೀಯ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

ನಂತರ ಅವರು ಹರಿಯಾಣದ ಕ್ರೀಡಾ ವಿಶ್ವವಿದ್ಯಾಲಯದಲ್ಲಿ ನಡೆದ 'ಮಿಷನ್ ಒಲಿಂಪಿಕ್ಸ್ 2036' ವಿಚಾರ ಸಂಕಿರಣದಲ್ಲಿ ಅವರು ಭಾಗವಹಿಸಿದ್ದರು.

ಎರಡನೇ ಟೆಸ್ಟ್: ಲಂಕಾ ಬೃಹತ್ ಮೊತ್ತ • ನ್ಯೂಜಿಲೆಂಡ್ ಪರದಾಟ

ಸಾವಿರ ರನ್ ದಾಟಿದ ಕಮಿಂದು

ಗಾಲೆ (ಶ್ರೀಲಂಕಾ), (ಎಎಫ್‌ಪಿ): ದಾಖಲೆ ವೀರ ಕಮಿಂದು ಮೆಂಡಿಸ್ ಅಜೇಯ 182 ರನ್ ಬಾರಿಸಿ ಎಂಟನೇ ಟೆಸ್ಟ್‌ನಲ್ಲೇ ಸಹಸ್ರ ರನ್‌ಗಳ ಮೈಲಿಗಲ್ಲು ದಾಟಿದರು. ಶ್ರೀಲಂಕಾ ಎರಡನೇ ಟೆಸ್ಟ್‌ನ ಎರಡನೇ ದಿನವಾದ ಶುಕ್ರವಾರ ಚಹ ವಿರಾಮ ಕಳೆದು ಒಂದು ಗಂಟೆ ನಂತರ 5 ವಿಕೆಟ್‌ಗೆ 602 ರನ್‌ಗಳ ಬೃಹತ್ ಮೊತ್ತ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ದಿನದಾಟ ಮುಗಿದಾಗ ಪ್ರವಾಸಿ ನ್ಯೂಜಿಲೆಂಡ್ 2 ವಿಕೆಟ್‌ಗೆ 22 ರನ್ ಗಳಿಸಿ ಪರದಾಡುತ್ತಿದೆ. ಅಜೇಯ ಶತಕ ಬಾರಿಸಿದ ಮೆಂಡಿಸ್‌ದ್ವಯರು (ಕಮಿಂದು ಮತ್ತು ಕುಸಲ್) ಮುರಿಯದ ಆರನೇ ವಿಕೆಟ್‌ಗೆ ಬರೋಬರಿ 200 ರನ್ ಸೇರಿಸಿದರು. ಇದು ಇನಿಂಗ್ಸ್‌ನಲ್ಲಿ ದಾಖಲಾದ ಮೂರನೇ ಶತಕದ ಜೊತೆಯಾಟ.

ಎಂಟನೇ ಟೆಸ್ಟ್‌ನ 13ನೇ ಇನಿಂಗ್ಸ್‌ನಲ್ಲಿ ಸಾವಿರ ರನ್ ದಾಟುವ ಮೂಲಕ ಕಮಿಂದು, ಆಸ್ಟ್ರೇಲಿಯಾದ ಮಹಾನ್ ಬ್ಯಾಟರ್ ಡಾನ್ ಬ್ರಾಡ್ಮನ್ ಅವರ ದಾಖಲೆ ಸರಿಗಟ್ಟಿದರು. ಕೇವಲ ಇಬ್ಬರು– ಇಂಗ್ಲೆಂಡ್‌ನ ಹರ್ಬರ್ಟ್ ಸಟ್‌ಕ್ಲಿಫ್ ಮತ್ತು ವೆಸ್ಟ್ ಇಂಡೀಸ್‌ನ ಎವರ್ಟನ್ ವೀಕ್ಸ್ ಮಾತ್ರ– 12 ಇನಿಂಗ್ಸ್‌ಗಳಲ್ಲಿ ಸಾವಿರ ರನ್ ದಾಟಿದ್ದಾರೆ.

25 ವರ್ಷ ವಯಸ್ಸಿನ ಸ್ಥಳೀಯರಾಗಿರುವ ಕಮಿಂದು 250 ಎಸೆತಗಳನ್ನು ಎದುರಿಸಿದ 16 ಬೌಂಡರಿ, ನಾಲ್ಕು ಸಿಕ್ಸರ್‌ಗಳನ್ನು ಬಾರಿಸಿದರು. ಎರಡು ವರ್ಷಗಳ ಹಿಂದೆ ಇಲ್ಲಿಯೇ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಅವರಿಗೆ ಇದು ಐದನೇ ಶತಕ.

ಆತಿಥೇಯರು 3 ವಿಕೆಟ್‌ಗೆ 306 ರನ್‌ಗಳೊಡನೆ ಆಟ ಮುಂದುವರಿಸಿದ್ದರು. ಕುಸಲ್ ಮೆಂಡಿಸ್ 106 ರನ್ (149ಎ, 4x6, 6x3) ಗಳಿಸಿ ಔಟಾಗದೇ ಉಳಿದರು. ಮೊದಲ ದಿನ ದಿನೇಶ್ ಚಾಂದಿಮಲ್ ಶತಕ (116) ಬಾರಿಸಿದ್ದರು.

ಆರಂಭ ಆಟಗಾರರಾದ ಟಾಮ್ ಲೇಥಮ್ (2) ಮತ್ತು ಡೆವಾನ್ ಕಾನ್ವೆ (9) ಅಲ್ಪಮೊತ್ತಕ್ಕೆ ಕ್ರಮವಾಗಿ ಅಸಿತ ಫೆರ್ನಾಂಡೊ ಮತ್ತು ಪ್ರಭಾತ್ ಜಯಸೂರ್ಯಗೆ ವಿಕೆಟ್ ನೀಡಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 163.4 ಓವರುಗಳಲ್ಲಿ 5 ವಿಕೆಟ್‌ಗೆ 602 ಡಿಕ್ಲೇರ್ (ದಿನೇಶ್ ಚಾಂದಿಮಲ್ 116, ಏಂಜೆಲೊ ಮ್ಯಾಥ್ಯೂಸ್ 88, ಕಮಿಂದು ಮೆಂಡಿಸ್ ಔಟಾಗದೇ 182, ಧನಂಜಯ ಡಿಸಿಲ್ವ 44, ಕುಸಲ್ ಮೆಂಡಿಸ್ ಔಟಾಗದೇ 106; ಗ್ಲೆನ್ ಫಿಲಿಪ್ಸ್ 141ಕ್ಕೆ3); ನ್ಯೂಜಿಲೆಂಡ್: 14 ಓವರುಗಳಲ್ಲಿ 2 ವಿಕೆಟ್‌ಗೆ 22.



ಸಂಭ್ರಮ... ಕಮಿಂದು ಮೆಂಡಿಸ್ ಶತಕ ಗಳಿಸಿದ ಸಂತಸದಲ್ಲಿ.... ಎಎಫ್‌ಪಿ ಚಿತ್ರ

ಮಹಿಳಾ ಐಟಿಎಫ್ ಟೂರ್ನಿ ಅ.6ರಿಂದ

ಮೈಸೂರು: ಇಲ್ಲಿನ ಚಾಮರಾಜ ಪುರಂನ ಮೈಸೂರು ಟೆನಿಸ್ ಕ್ಲಬ್ ಅಂಕಣದಲ್ಲಿ ಅ. 6ರಿಂದ 13ರವರೆಗೆ 'ಮೈಸೂರು ಡಬ್ಲ್ಯು 15' ಮಹಿಳೆಯರ ಐಟಿಎಫ್ ಟೆನಿಸ್ ಟೂರ್ನಿ ನಡೆಯಲಿದೆ. ವಿಜೇತರು ₹12.50 ಲಕ್ಷ ಬಹುಮಾನ ಪಡೆಯಲಿದ್ದಾರೆ.

ಸಿಂಗಲ್ಸ್‌ನಲ್ಲಿ 32, ಡಬಲ್ಸ್‌ನಲ್ಲಿ 16 ಜೋಡಿ ಪ್ರಶಸ್ತಿಗಾಗಿ ಸೆಣಸಲಿವೆ. 6, 7ರಂದು ಅರ್ಹತಾ ಸುತ್ತಿನ ಪಂದ್ಯ ನಡೆಯಲಿವೆ. 8ರಿಂದ ಪ್ರಧಾನ ಸುತ್ತು ನಡೆಯಲಿದೆ. ಭಾರತದ ಆರ್. ಬಿ. ಶ್ರೀವಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದಾರೆ. ವಿವಿಧ ದೇಶಗಳ ಒಟ್ಟು 18 ಆಟಗಾರರು ಟೂರ್ನಿಗೆ ನೇರ ಪ್ರವೇಶ ಪಡೆದಿದ್ದಾರೆ.

ಎಎಫ್‌ಪಿ ಯೂತ್ ಟೂರ್ನಿ: ಭಾರತಕ್ಕೆ ಸೋಲು

ವೀನಟಿಯೇನ್, ಲಾವೋಸ್ (ಪಿಟಿಐ): ಭಾರತ ತಂಡವು ಎಎಫ್‌ಸಿ 20 ವರ್ಷದೊಳಗಿವರ ಏಷ್ಯಾ ಕಪ್ ಕ್ವಾಲಿಫೈಯರ್ ಪಂದ್ಯದಲ್ಲಿ ಇರಾನ್ ಎದುರು ಸೋತಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 0–1ರಿಂದ ಸೋಲನುಭವಿಸಿತು. ಉಭಯ ತಂಡಗಳ ಆಟಗಾರರು ಜಿದ್ದಾಜಿದ್ದಿನ ಆಟವಾಡಿದರು. 88ನೇ ನಿಮಿಷದಲ್ಲಿ ಇರಾನ್ ತಂಡದ ಯೂಸೆಫ್ ಮಝುರೇ ಅವರು ಗೋಲು ಗಳಿಸಿದರು. ಭಾರತದ ಗೋಲ್‌ಕೀಪರ್ ಪ್ರಿಯಾಂಶ್ ದುಬೆ ಅವರು ಗೋಲು ತಪ್ಪಿಸಲು ಮಾಡಿದ ಪ್ರಯತ್ನ ಕೈಗೂಡಲಿಲ್ಲ.

ಮಹಿಳಾ ವಿಶ್ವಕಪ್: ಲಕ್ಷ್ಮೀ, ವೃಂದಾ ಆಯ್ಕೆ

ದುಬೈ (ಪಿಟಿಐ): ಪಂದ್ಯ ರೆಫರಿ ಜಿ.ಎಸ್. ಲಕ್ಷ್ಮೀ ಮತ್ತು ಅಂಪೈರ್ ವೃಂದಾ ರಾಠಿ ಅವರು ಮುಂದಿನ ತಿಂಗಳು ಇಲ್ಲಿ ನಡೆಯಲಿರುವ ಮಹಿಳೆಯರ ಐಸಿಸಿ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಶುಕ್ರವಾರ ಐಸಿಸಿಯು ಪ್ರಕಟಿಸಿರುವ ಅಧಿಕಾರಿಗಳ ಪಟ್ಟಿಯಲ್ಲಿ ಎಲ್ಲ 13 ಮಂದಿ ಮಹಿಳೆಯರಿದ್ದಾರೆ. 10 ಅಂಪೈರ್ಸ್ ಮತ್ತು ಮೂವರು ರೆಫರಿಗಳಿದ್ದಾರೆ. ಅದರಲ್ಲಿ ಲಕ್ಷ್ಮೀ ಮತ್ತು ವೃಂದಾ ಅವರಿದ್ದಾರೆ.

ಹೋದ ವರ್ಷ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯಲ್ಲಿಯೂ ಇವರಿಬ್ಬರು ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಿದ್ದರು.

ಆಸ್ಟ್ರೇಲಿಯಾದ ಎಲೈಸ್ ಶೆರಿಡಾನ್ ಮತ್ತು ದಕ್ಷಿಣ ಆಫ್ರಿಕಾದ ಲಾರೆನ್ ಏಗೆನ್‌ಬ್ಯಾಗ್ ಅವರು ಭಾರತ ಹಾಗೂ ಪಾಕಿಸ್ತಾನ ನಡುವಣ ಪಂದ್ಯದಲ್ಲಿ ಆನ್‌ಫೀಲ್ಡ್ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸುವರು. ಅ.6ರಂದು ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಪಂದ್ಯಕ್ಕೆ ವೆಸ್ಟ್ ಇಂಡೀಸ್‌ನ ಜ್ಯಾಕ್ಲಿನ್ ವಿಲಿಯಮ್ಸ್ ಟಿ.ವಿ.ಅಂಪೈರ್ ಆಗಿದ್ದಾರೆ.

ಅಕ್ಟೋಬರ್ 3ರಂದು ಟೂರ್ನಿ ಆರಂಭವಾಗುವುದು. ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ಮತ್ತು ಸ್ಕಾಟ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಅದರಲ್ಲಿ ಆಸ್ಟ್ರೇಲಿಯಾದ ಅಂಪೈರ್ ಕ್ಲೇರ್ ಪೊಲೊಸಾಕ್ ಮತ್ತು ಏಗೆನ್‌ಬ್ಯಾಗ್ ಅವರು ಕಾರ್ಯನಿರ್ವಹಿಸುವರು.

ದಸರಾ ಕ್ರೀಡಾಕೂಟ ಅ. 3ರಿಂದ

ಮೈಸೂರು: ಸಿ.ಎಂ. ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟವು ಅಕ್ಟೋಬರ್ 3ರಿಂದ 6ರವರೆಗೆ ನಗರದಲ್ಲಿ ನಡೆಯಲಿದೆ.

ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ವಿ.ವಿ. ಸ್ಪೋರ್ಟ್ಸ್ ಪೆವಿಲಿಯನ್ ಸೇರಿದಂತೆ ವಿವಿಧ ಅಂಕಣಗಳಲ್ಲಿ 27 ಸ್ಪರ್ಧೆಗಳು ನಡೆಯಲಿವೆ. ಪ್ರತಿ ವಿಭಾಗದಿಂದ ಸುಮಾರು 900 ಕ್ರೀಡಾಪಟುಗಳಂತೆ 5 ವಿಭಾಗಗಳಿಂದ ಒಟ್ಟು 3,500 ಸ್ಪರ್ಧಿಗಳು ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ಅ. 3ರಂದು ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ.

ಹರ್ಷಿತಾ ವೇಗದ ಓಟಗಾರ್ತಿ

ಶ್ರವಣದೋಷವುಳ್ಳವರ ರಾಜ್ಯಮಟ್ಟದ 14ನೇ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ದಕ್ಷಿಣ ಕನ್ನಡ ಜಿಲ್ಲೆಯ ಹರ್ಷಿತಾ ರವೀಂದ್ರ ಮತ್ತು ಬಾಗಲಕೋಟೆಯ ಮಹಾಂತೇಶಯ್ಯ ಅವರು ಕ್ರಮವಾಗಿ ಇಲ್ಲಿ ನಡೆಯುತ್ತಿರುವ ಶ್ರವಣದೋಷವುಳ್ಳವರ ರಾಜ್ಯ ಕ್ರೀಡಾ ಕೂಟದಲ್ಲಿ ಮಹಿಳೆಯರ 100 ಮೀ ಮತ್ತು ಪುರುಷರ 1500 ಮೀ ಓಟದಲ್ಲಿ ಮೊದಲ ಸ್ಥಾನ ಗಳಿಸಿದರು.

ಕರ್ನಾಟಕ ಶ್ರವಣದೋಷವುಳ್ಳವರ ಕ್ರೀಡಾ ಒಕ್ಕೂಟ, ಬಾಗಲಕೋಟೆ ಜಿಲ್ಲಾ ಶ್ರವಣದೋಷವುಳ್ಳವರ ಸಂಘದ ಸಹ ಯೋಗದಲ್ಲಿ ಶುಕ್ರವಾರ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಕ್ರೀಡಾಕೂಟ ಆಯೋಜಿಸಲಾಗಿತ್ತು.

ಈ ಕೂಟದ ಪ್ರತಿಯೊಂದು ವಿಭಾಗದಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರು;

ಪುರುಷರು: 1,500 ಮೀ. ಓಟ: ಮಹಾಂತೇಶಯ್ಯ ಎಸ್. (ಬಾಗಲಕೋಟೆ), ಸಲ್ಮಾನ್ ಖಾನ್ ಕಾಕಡ (ಧಾರವಾಡ), ಪ್ರಥಮೇಶ ಬಡಿಗೇರ (ಮೈಸೂರು). ಶಾಟ್‌ಪಟ್: ಯೋಗೇಶ ಉಮರಾಣಿ (ಬೆಳಗಾವಿ), ತಿರುಪತಿ ರಾಜು (ಬೆಂಗಳೂರು), ನಾಗೇಶ್ ಎಸ್. (ಮೈಸೂರು). ಡಿಸ್ಕಸ್ ಥ್ರೋ: ಎಂ.ಸಿ.ಚೇತನ್ (ಮೈಸೂರು), ನಾಗೇಶ್ ಎಸ್. (ಮೈಸೂರು), ಆಕಾಶ್ ಎಚ್. (ಬೆಂಗಳೂರು). 400 ಮೀ.ಓಟ: ಹರ್ಷ (ಮೈಸೂರು), ಯುವರಾಜ್ ಎಲ್. (ಮೈಸೂರು), ಮಿಥುನ್ ಗೌಡ (ಮಂಡ್ಯ).

ಮಹಿಳೆಯರು: 100 ಮೀ.ಓಟ: ಹರ್ಷಿತಾ ರವೀಂದ್ರ (ದಕ್ಷಿಣ ಕನ್ನಡ), ಆಗ್ನೇಸ್ ಜೋಸ್ (ಮೈಸೂರು), ಪವಿತ್ರಾ ತೇಲಿ (ಬಾಗಲಕೋಟೆ). 1500 ಮೀ.ಓಟ: ತನುಜಾ (ಬೆಂಗಳೂರು), ಮಹಾಲಕ್ಷ್ಮೀ (ಬೆಂಗಳೂರು). ಉದ್ದ ಜಿಗಿತ: ಹರ್ಷಿತಾ ರವೀಂದ್ರ (ದಕ್ಷಿಣ ಕನ್ನಡ), ಅಗ್ನೇಸ್ ಜೋಸ್ (ಮೈಸೂರು), ಸ್ನೇಹಾ (ಬೆಂಗಳೂರು).

ಶಾಟ್‌ಪಟ್: ಫರ್ಜಾನಾ ಬಾನು (ಬೆಂಗಳೂರು), ಕಮಲಾ ಹೊನ್ನಪ್ಪಗೋಳ (ಬಾಗಲಕೋಟೆ), ರಾಧಿಕಾ ಪಿ. (ರಾಮನಗರ). 400 ಮೀ.ಓಟ: ಪವಿತ್ರಾ ತೇಲಿ (ಬಾಗಲಕೋಟೆ), ಕಾವೇರಿ ಪೂಜೇರಿ (ಬೆಳಗಾವಿ), ದರ್ಶಿನಿ (ಬೆಂಗಳೂರು).

16 ರಿಂದ 18 ವರ್ಷದೊಳಗಿನ ಬಾಲಕರು: 1500 ಮೀ.ಓಟ: ಲಿಖಿತ ಗೌಡ (ತುಮಕೂರು), ಶಿವಶಂಕರ ಜಿ.ಎಂ. (ಮೈಸೂರು), ರಾಜೇಶ ಕುಮಾರ್ (ದಾವಣಗೆರೆ). 400 ಮೀ. ಓಟ:ನಿಕ್ಷಿತ್ ಡಿ.ಕೆ. (ಮೈಸೂರು), ತಿಪ್ಪೆಸ್ವಾಮಿ (ದಾವಣಗೆರೆ), ಬಾಲಾಜಿ ಎಚ್.ಎಸ್. (ಮಂಡ್ಯ)

16 ರಿಂದ 18 ವರ್ಷದ ಬಾಲಕಿಯರು: 400 ಮೀ.ಓಟ: ಯುಕ್ತಾ ಎನ್.ಪಿ.(ಮೈಸೂರು), ಶಿಲ್ಪಾ ಬಿ. (ಬೆಂಗಳೂರು), ವರ್ಷಿಣಿ ಎಂ. (ಬೆಂಗಳೂರು). 12 ರಿಂದ 14 ವರ್ಷದೊಳಗಿನ ಪುರುಷರ 600 ಮೀ.ಓಟ: ವಿಜಯ ಜಡಗಪ್ಪಗೋಳ (ಬೆಳಗಾವಿ), ಗೌತಮ್ ಬಿ.(ಮಂಡ್ಯದ), ಯಶವಂತ ಎಸ್. (ಮೈಸೂರು).

12 ರಿಂದ 14 ವರ್ಷದೊಳಗಿನ ಬಾಲಕಿಯರು: 600 ಮೀ.ಓಟ: ಪ್ರಿಯಾಂಕಾ ಜಿ. (ಬೆಂಗಳೂರು), ಸವಿತಾ ಕುರಿ (ಬೆಳಗಾವಿ), ಸಂಜನಾ ಎಸ್ (ಬೆಂಗಳೂರು).

ಮಕಾವು ಓಪನ್: ಶ್ರೀಕಾಂತ್ ನಿರ್ಗಮನ

ನಾಲ್ಕರ ಘಟ್ಟಕ್ಕೆ ಟ್ರೀಸಾ–ಗಾಯತ್ರಿ

ಮಕಾವು (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಮಕಾವು ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಎಂಟರ ಘಟ್ಟದಲ್ಲಿ ಶುಕ್ರವಾರ ಹೊರಬಿದ್ದರು. ಆದರೆ ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಮೇ ತಿಂಗಳಲ್ಲಿ ಗಾಯಾಳಾದ ನಂತರ ಈ ಟೂರ್ನಿಯ ಮೂಲಕ ಪುನರಾಗಮನ ಮಾಡಿದ ಶ್ರೀಕಾಂತ್, ಹಾಂಗ್‌ಕಾಂಗ್‌ನ ಎನ್ಜಿ ಕಾ ಲೊಂಗ್ ಆ್ಯಂಗಸ್ ಎದುರು 16–21, 12–21ರಲ್ಲಿ ಸೋತರು. ಆರನೇ ಶ್ರೇಯಾಂಕ ಪಡೆದಿದ್ದ ಶ್ರೀಕಾಂತ್ ಕೇವಲ 31 ನಿಮಿಷಗಳಲ್ಲಿ ಶರಣಾದರು.

ಡಬಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ 21–12, 21–17 ರಿಂದ ಆರನೇ ಶ್ರೇಯಾಂಕ ಪಡೆದಿದ್ದ ಚೀನಾ ತೈಪಿಯ ಹ್ಸು ಯಿನ್–ಹುಯಿ–ಲೊನ್ ಝಿ ಯುನ್ ಜೋಡಿಯನ್ನು ಸೋಲಿಸಿತು.

ವಿಶ್ವ ಕ್ರಮಾಂಕದಲ್ಲಿ 23ನೇ ಸ್ಥಾನದಲ್ಲಿರುವ ಭಾರತದ ಆಟಗಾರ್ತಿಯರು ಸೆಮಿಫೈನಲ್‌ನಲ್ಲಿ ಚೀನಾ ತೈಪಿಯ ಇನ್ನೊಂದು ಜೋಡಿ ಮತ್ತು ಎಂಟನೇ ಶ್ರೇಯಾಂಕದ ಹ್ಸಿ ಪೀ ಶಾನ್– ಹುಂಗ್ ಎನ್–ತ್ಸು ಅವರನ್ನು ಎದುರಿಸಲಿದ್ದಾರೆ.

ಮೇ–ಜೂನ್‌ನಲ್ಲಿ ನಡೆದ ಸಿಂಗಪುರ ಓಪನ್ ಸೂಪರ್ 750 ಟೂರ್ನಿಯಲ್ಲೂ ಟ್ರೀಸಾ–ಗಾಯತ್ರಿ ಜೋಡಿ ಸೆಮಿಫೈನಲ್ ತಲುಪಿತ್ತು.



ತ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಆಟದ ವೈಖರಿ ಎಪಿ ಚಿತ್ರ

ಎಐಟಿಎ ಅಧ್ಯಕ್ಷರ ವಿರುದ್ಧ ಅವಿಶ್ವಾಸಕ್ಕೆ ಸಭೆ

ಕಾನ್ಪುರ (ಪಿಟಿಐ): ಅಖಿಲ ಭಾರತ ಟೆನಿಸ್ ಸಂಸ್ಥೆಯ ಸಂಯೋಜನೆಗೊಳಪಟ್ಟ ಎಂಟು ರಾಜ್ಯಗಳ ಸಂಸ್ಥೆಗಳು, ಎಐಟಿಎ ಅಧ್ಯಕ್ಷ ಅನಿಲ್ ಜೈನ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಮುಂದಾಗಿವೆ.

ಇದಕ್ಕಾಗಿ ಶನಿವಾರ (ಸೆ. 28) ನವದೆಹಲಿಯಲ್ಲಿ ತುರ್ತಾಗಿ ಸರ್ವ ಸದಸ್ಯರ ಸಭೆ (ಇಜಿಎಂ) ಕರೆಯಲಾಗಿದೆ.

ಕುತೂಹಲದ ವಿಷಯವೆಂದರೆ ಎಐಟಿಎ ಕೂಡ ಶನಿವಾರವೇ ಸಭೆ ಕರೆದಿದೆ. ಆದರೆ ಇದರಲ್ಲಿ ಸಂಸ್ಥೆಯ ಚುನಾವಣೆ ನಡೆಸಲು ನಿಗದಿಯಾಗಿದೆ. ಆದರೆ ನ್ಯಾಯಾಲಯದಲ್ಲಿ ಪ್ರಕರಣ ಇರುವ ಕಾರಣ ಚುನಾವಣೆಯ ಫಲಿತಾಂಶ ಘೋಷಿಸುವಂತಿಲ್ಲ. ಇದನ್ನು ಮುಚ್ಚಿದ ಲಕೋಟೆಯಲ್ಲಿ ದೆಹಲಿ ಹೈಕೋರ್ಟ್‌ಗೆ ಸಲ್ಲಿಸಬೇಕಾಗುತ್ತದೆ.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯರಾಗಿರುವ ಜೈನ್ ವಿರುದ್ಧ, ಸಂಸ್ಥೆಯ ಹಣವನ್ನು ಸ್ವಂತಕ್ಕೆ ಬಳಸಿಕೊಂಡು ಕುಟುಂಬ ಸದಸ್ಯರ ಜೊತೆ ಅನೇಕ ಬಾರಿ ವಿದೇಶ ಪ್ರವಾಸ ಮಾಡಿದ ಆರೋಪಗಳಿವೆ.

ಅವಿಶ್ವಾಸ ನಿರ್ಣಯಕ್ಕೆ ಮುಂದಾಗಿರುವ ಎಂಟು ರಾಜ್ಯ ಘಟಕಗಳೆಂದರೆ– ಅಸ್ಸಾಂ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಹರಿಯಾಣ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು ಮತ್ತು ತ್ರಿಪುರ. ನಿರ್ಣಯ ಅಂಗೀಕಾರವಾದಲ್ಲಿ ಜೈನ್ ಅವರು ಸಂಸ್ಥೆಯ ಅಧ್ಯಕ್ಷ ಸ್ಥಾನ ಕಳೆದುಕೊಳ್ಳಲಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಕ್ರೀಡಾಸಂಹಿತೆ ಪಾಲಿಸಬೇಕೆಂದು ಸಲಹೆ ಮಾಡಿದ್ದರಿಂದ ಕೆಲ ರಾಜ್ಯ ಸಂಸ್ಥೆಗಳು ತಮ್ಮ ವಿರುದ್ಧ ಸಭೆ ಕರೆದಿವೆ ಎಂದು ಜೈನ್ ದೂರಿದರು. ಅವರು ಕರೆದಿರುವ ಇಜಿಎಂ ಅಕ್ರಮ. ಯಾವುದೇ ಸಭೆ ಕರೆಯಬೇಕಾದರೆ ಮೂರು ವಾರಗಳ ನೋಟಿಸ್ ನೀಡಬೇಕಾಗುತ್ತದೆ. 23ರಂದು ನೋಟಿಸ್ ಕಳಿಸಿ 28ರಂದು ಸಭೆ ನಡೆಸುವಂತಿಲ್ಲ ಎಂದು ಅವರು ಹೇಳಿದರು.

ಕಂಠೀರವ ಕ್ರೀಡಾಂಗಣದಲ್ಲಿ ಚೆಟ್ರಿ ಬಳಗಕ್ಕೆ ಮೋಹನ್ ಬಾಗನ್ ಸವಾಲು

ಹ್ಯಾಟ್ರಿಕ್ ಜಯದ ಮೇಲೆ ಬೆಂಗಳೂರು ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಇದುವರೆಗೆ ಅಜೇಯವಾಗಿರುವ ಬೆಂಗಳೂರು ಎಫ್‌ಸಿ ತಂಡವು ಶನಿವಾರ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಎದುರು ಸೆಣಸಲಿದೆ. 'ಹ್ಯಾಟ್ರಿಕ್' ಜಯದ ನಿರೀಕ್ಷೆಯಲ್ಲಿದೆ.

ಈ ಪಂದ್ಯವು ಕಂಠೀರವ ಕ್ರೀಡಾಂಗಣದಲ್ಲಿ ವಾರಾಂತ್ಯದ ದಿನದಂದು ಫುಟ್‌ಬಾಲ್ ಪ್ರೇಮಿಗಳಿಗೆ ಭರಪೂರ ಮನರಂಜನೆ ಉಣಬಡಿಸುವ ನಿರೀಕ್ಷೆ ಇದೆ.

ಫುಟ್‌ಬಾಲ್ ಪ್ರಿಯರ ಕಣ್ಮಣಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ತಂಡವು ಇದುವರೆಗೆ ಟೂರ್ನಿಯಲ್ಲಿ ಆಡಿರುವ ಎರಡು ಪಂದ್ಯಗಳಲ್ಲಿ ಜಯಿಸಿದೆ. ಈಸ್ಟ್ ಬೆಂಗಾಲ್ ಮತ್ತು ಹೈದರಾಬಾದ್ ಎಫ್‌ಸಿ ತಂಡಗಳ ಎದುರಿನ ಪಂದ್ಯಗಳಲ್ಲಿ ಗೆದ್ದಿದೆ. ಮೋಹನ್ ಬಾಗನ್ ತಂಡವೂ ಎರಡು ಪಂದ್ಯಗಳನ್ನು ಆಡಿದೆ. ಮೊದಲ ಪಂದ್ಯದಲ್ಲಿ ಮುಂಬೈ ಎಫ್‌ಸಿ ಎದುರು ಡ್ರಾ ಮಾಡಿಕೊಂಡಿತ್ತು. ಎರಡನೇ ಪಂದ್ಯದಲ್ಲಿ ನಾರ್ಥ್ ಈಸ್ಟ್ ಯುನೈಟೆಡ್ ಎದುರು ಜಯದ ಹಾದಿಗೆ ಮರಳಿತ್ತು.

ಜೆರಾರ್ಡ್ ಝುರಗೋಜಾ ಅವರು ತಂಡದ ಮ್ಯಾನೇಜರ್ ಆದ ನಂತರ ಬಿಎಫ್‌ಸಿ ತಂಡವು ತವರಿನಲ್ಲಿ 9 ಪಂದ್ಯಗಳನ್ನು ಆಡಿದೆ. ಅದರಲ್ಲಿ ಒಂದರಲ್ಲಿ ಮಾತ್ರ ಸೋತಿದೆ. ಹೋದ ಬಾರಿಯ ಟೂರ್ನಿಯಲ್ಲಿ ಇದೇ ಮೋಹನ್ ಬಾಗನ್ ವಿರುದ್ಧ ಸೋತಿತ್ತು.


ಬಿಎಫ್‌ಸಿಯ ಸುನಿಲ್ ಚೆಟ್ರಿ ಮತ್ತು ರಾಹುಲ್ ಭೆಕೆ ಪ್ರಜಾವಾಣಿ ಚಿತ್ರ

ಉಭಯ ತಂಡಗಳು ಐಎಸ್‌ಎಲ್ ಇತಿಹಾಸದಲ್ಲಿ 9 ಸಲ ಮುಖಾಮುಖಿಯಾಗಿವೆ. ಬೆಂಗಳೂರು ತಂಡವು ಕೇವಲ ಒಂದರಲ್ಲಿ ಜಯಿಸಿದೆ. ಎರಡು ಪಂದ್ಯಗಳು ಡ್ರಾ ಆಗಿವೆ. 6 ಪಂದ್ಯಗಳನ್ನು ಬಾಗನ್ ಜಯಿಸಿದೆ.

ರಾಹುಲ್ ಭೆಕೆ, ಚೆಟ್ರಿ, ವಿನಿತ್ ಹಾಗೂ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರು ಇರುವ ಬಿಎಫ್‌ಸಿ ತಂಡವು ಬಲಿಷ್ಠವಾಗಿದೆ. ರಾಹುಲ್ ಅವರು ಹೈದರಾಬಾದ್ ಎದುರಿನ ಪಂದ್ಯದಲ್ಲಿ 102 ಬಾರಿ ಟಚ್ ದಾಖಲೆ ಬರೆದರು. ಈ ಹಿಂದೆ ಜಯ್ ಗುಪ್ತಾ ಅವರೊಬ್ಬರೇ 100ಕ್ಕೂ ಹೆಚ್ಚು ಟಚ್ ಮಾಡಿದ್ದ ದಾಖಲೆ ಹೊಂದಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18. ಜಿಯೊ ಸಿನಿಮಾ ಆ್ಯಪ್

ಅಂಧರ ವಿಶ್ವ ಜೂನಿಯರ್ ಮಹಿಳಾ ಚೆಸ್ ಇಂದಿನಿಂದ

ಬೆಂಗಳೂರು: ಅಖಿಲ ಭಾರತ ಅಂಧರ ಚೆಸ್ ಫೆಡರೇಷನ್ (ಎಐಸಿಎಫ್‌ಬಿ) ಆಶ್ರಯದಲ್ಲಿ ಅಂಧರ ಮತ್ತು ದೃಷ್ಟಿ ದೋಷವುಳ್ಳವರ 12ನೇ ಐಸಿಬಿಎ ವಿಶ್ವ ಜೂನಿಯರ್ ಮತ್ತು ಮಹಿಳಾ ಚೆಸ್ ಚಾಂಪಿಯನ್‌ಷಿಪ್ ಇದೇ 28 ರಿಂದ ಅಕ್ಟೋಬರ್ 6ರವರೆಗೆ ನಗರದ ರೆಸಿಡೆನ್ಸಿ ರಸ್ತೆಯ ಚಾನ್ಸರಿ ಪೆವಿಲಿಯನ್‌ನಲ್ಲಿ ನಡೆಯಲಿದೆ.

ಮೊದಲ ಬಾರಿ ಈ ಚಾಂಪಿಯನ್ ಷಿಪ್ ಏಷ್ಯಾದಲ್ಲಿ ನಡೆಯುತ್ತಿದೆ. ಜೂನಿಯರ್ ಮತ್ತು ಮಹಿಳಾ ವಿಭಾಗದಲ್ಲಿ ಒಟ್ಟು 32 ಮಂದಿ ಭಾಗವಹಿಸಲಿದ್ದಾರೆ ಎಂದು ಟೂರ್ನಿ ಚೀಫ್ ಆರ್ಬಿಟರ್ ಆಗಿರುವ ಮಂಜುನಾಥ್ 'ಪ್ರಜಾವಾಣಿ'ಗೆ ಶುಕ್ರವಾರ ತಿಳಿಸಿದರು. ಎಂಟು ಸುತ್ತುಗಳು ಇರಲಿದ್ದು, ಅ. 1ರಂದು ವಿಶ್ರಾಂತಿ ದಿನವಾಗಿದೆ.

ಜೂನಿಯರ್ ವಿಭಾಗದಲ್ಲಿ ಭಾರತದ ಏಳು ಮಂದಿ ಸೇರಿದಂತೆ ಒಟ್ಟು 12 ಮಂದಿ ಭಾಗವಹಿಸಲಿದ್ದಾರೆ. ಪೋಲೆಂಡ್‌ನ ರೇಸಿಸ್ ಮಿಚಾಲ್ (ರೇಟಿಂಗ್: 2124) ಅಗ್ರ ಶ್ರೇಯಾಂಕ ಪಡೆದಿದ್ದಾರೆ. ರಾಹುಲ್ ವಘೇಲಾ (1701), ಓಂಕಾರ್ ಸಮೀರ್ ತಲವಾಲಕರ್, ಅಶ್ವಿನ್ ರಾಜೇಶ್, ಸ್ಯಾಮ್ ಪೇನಿಯಲ್, ತನಿಶ್ ವಾಘ್ಮಾರೆ, ರಾಹುಲ್ ಸಹಾನಿ, ಜಾನ್ ಹ್ಯಾರಿಸ್ ಸುಜಿನ್ ಕಣದಲ್ಲಿರುವ ಭಾರತದ ಆಟಗಾರರು.

ಮಹಿಳಾ ವಿಭಾಗದಲ್ಲಿ 20 ಮಂದಿ ಕಣದಲ್ಲಿದ್ದಾರೆ. ಏಷ್ಯನ್ ಪ್ಯಾರಾ ಗೇಮ್ಸ್ ಪದಕ ವಿಜೇತರಾದ ಭಾರತದ ಮೇಘಾ ಚಕ್ರವರ್ತಿ, ತೀಜನ್ ಗವಾರ್ ಈ ವಿಭಾಗದಲ್ಲಿ ಪೈಪೋಟಿಯಲ್ಲಿದ್ದಾರೆ.